ಗೌರಿ


ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

23 ನವೆಂಬರ್ 2016 ಪುಟ 20 ರೂ. 15/-




ಟಿಪ್ಪು ಮತ್ತು ದುರ್ಗದ ಸ್ವಾಮಿ ಅಪರಂಪಾರ




ಮಾಸ್ತಿ ದುರಂತ ಉಡಾಫೆಗೆ ಬಲಿ

ಕುಮಟಾ ಅತ್ಯಾಚಾರ್ಯನ ಆಟ





ತುಮಕೂರು: ಸೊಗಡು ಶಿವಣ್ಣನಿಗೆ ಯಡ್ಡಿ ನೋಟಿಸ್



ನಂಜನಗೂಡು: ದಿಕ್ಕುದಿಶೆ ಇಲ್ಲದ ಸ್ವಾಭಿಮಾನಿ ಸಮಾವೇಶ

ಮಂಡ್ಯ: ಮನ್‌ಮುಲ್ ನಿರ್ದೇಶಕ ಡಾಲು ರವಿಯ ದೌಲತ್ತು




ಬಳ್ಳಾರಿ ಮದುವೆ ನೆಪದಲ್ಲಿ ಗಣಿಕಳ್ಳರ ಜನದ್ರೋಹ







ಮುಸ್ಸಂಜೆಯ ಕಥಾಪ್ರಸಂಗ ಮತ್ತು ಹಳ್ಳಿಗಳ 'ತಿಥಿ'



ಇತ್ತೀಚೆಗೆ ಬಿಡುಗಡೆಯಾದ 'ತಿಥಿ' ಚಲನಚಿತ್ರವು ಒಂದು ವಿಶಿಷ್ಟ ಪ್ರಯೋಗವಾಗಿದೆ. ಇದರಲ್ಲಿ 'ನಟಿಸಿರುವ' ನಟರೆಲ್ಲರೂ ಕಥಾಪ್ರಸಂಗ ಜರುಗುವ ಹಳ್ಳಿಯ (ಅಥವಾ ಸುತ್ತಮುತ್ತಲಿನ) ನಿವಾಸಿಗಳೇ ಆಗಿದ್ದು, ಯಾರಿಗೂ ನಟನೆಯ ಅನುಭವ ಇದ್ದಿರಲಿಲ್ಲ. ಯಾವ ಹಳ್ಳಿಯಲ್ಲಿ ಸಿನಿಮಾದ ಚಿತ್ರೀಕರಣ ನಡೆಯಿತೋ, ಅದೇ ನೊದೆಕೊಪ್ಪಲು ಗ್ರಾಮದ್ದೇ ಈ ಕಥೆ ಎಂಬಂತೆ ಚಿತ್ರಿಸಲಾಗಿದೆ. ಹಳ್ಳಿಯೊಂದರಲ್ಲಿ ನಡೆಯುವ ಘಟನೆಗಳನ್ನು ಮುದ್ರಿಸಿಕೊಳ್ಳಲು ಒಂದು ಕ್ಯಾಮರಾವನ್ನು ಇಟ್ಟಿದ್ದರೆ ಹೇಗೋ ಹಾಗೆ ಎಂಬಂತೆ 'ನೈಜವಾಗಿ' ಸಿನಿಮಾ ಮೂಡಿಬಂದಿದೆ. ಈ ರೀತಿಯ ಹಲವು ಕಾರಣಗಳಿಂದ ಸಿನಿಮಾ ಸಾಕಷ್ಟು ಪ್ರಶಂಸೆ ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶಿತಗೊಂಡಿದೆ. ಸಿನಿಮಾದಲ್ಲಿ 'ನಟಿಸಿದ' ಗಡ್ಡಪ್ಪ ಪಾತ್ರಧಾರಿ, ಆತನ ತಂದೆ ಮತ್ತು ಮಗ ಎಲ್ಲರೂ ಒಂದು ರೀತಿಯ ಸ್ಟಾರ್‌ಗಳಾಗಿದ್ದಾರೆ. ಗಡ್ಡಪ್ಪನ 'ನಿಂದೇನ್ ಪ್ರಾಬ್ಲಮ್ಮು' ತುಂಬಾ ಫೇಮಸ್ ಆಗಿದೆ. ಈಗಾಗಲೇ ಅವರು ಇನ್ನೊಂದು ಸಿನಿಮಾಕ್ಕೆ ಬುಕ್ ಆಗಿದ್ದಾರೆಂಬ ಸುದ್ದಿಯಿದೆ.

ತನ್ನ ಸೃಜನಶೀಲತೆಯ ಕಾರಣಕ್ಕೆ ಈ ಸಿನಿಮಾ ಗೌರವಕ್ಕೆ ಅರ್ಹವಾದುದು. ಸಂಪೂರ್ಣ ಹೊಸಬರೇ ಸೇರಿ ಮಾಡಿದ ಸಿನಿಮಾ ಎಂಬ ಕಾರಣಕ್ಕೂ, ಇದನ್ನು ನಾವು ಅಭಿನಂದಿಸಲೇಬೇಕು. ತಿಥಿಯನ್ನು ಮೆಚ್ಚಲು ಇನ್ನೂ ಹಲವು ಕಾರಣಗಳಿವೆ. ಇರಲಿ, ಈಗ ಈ ಸಿನಿಮಾದ ಹೂರಣದ ಕುರಿತ ಇನ್ನೊಂದು ನೋಟ ನೋಡೋಣ. ಈ ನೋಟವನ್ನು ನೋಡಿ ನಮ್ಮೆಲ್ಲರ ಜೊತೆ ವಾದಕ್ಕಿಳಿದಿದ್ದು ನನ್ನ ಸಂಗಾತಿ ಮಲ್ಲಿಗೆ. ಅವರ ಪ್ರಕಾರ 'ಈ ಸಿನಿಮಾ ಹಳ್ಳಿಗರನ್ನು ನೆಗೆಟಿವ್ ಆಗಿ ಚಿತ್ರಿಸುತ್ತದೆ. ಇದು ವಾಸ್ತವಕ್ಕೆ ಹತ್ತಿರವೂ ಇಲ್ಲ ಮತ್ತು ಹಳ್ಳಿಯ ಜನರ ಕುರಿತ ನಿರ್ದೇಶಕರ (ಕಥೆಗಾರರ) ದೃಷ್ಟಿಕೋನವೇ ಪ್ರಶ್ನಾರ್ಹವಾದುದು'.

'ಅದ್ಹೇಗೆ? ಮನುಷ್ಯರ ಸಹಜ ಭಾವನೆಗಳನ್ನೂ, ಭಾವವಿಕಾರಗಳನ್ನೂ ಕ್ಯಾಮೆರಾದಲ್ಲಿ ಸೆರೆಹಿಡಿಯಲಾಗಿದೆ. ನಮ್ಮ ಹಳ್ಳಿಗಳ ನೈಜ ಚಿತ್ರಣ ಅದರಲ್ಲಿದೆ'.

'ಹಳ್ಳಿಗಳ ನೈಜ ಚಿತ್ರಣವೆಂದರೇನು?'

'ಅಲ್ಲಾ, ಕೆಲವು ಸಿನಿಮೀಯವಾದ ಘಟನೆಗಳು ಇರಬಹುದು. ಇಲ್ಲದಿದ್ದರೆ ಅದು ಸಿನಿಮಾ ಹೇಗೆ ಆಗುತ್ತದೆ, ಉಳಿದಂತೆ ಇಂದಿನ ನಮ್ಮ ಹಳ್ಳಿಗಳಲ್ಲಿ ಏನು ನಡೆಯುತ್ತದೋ ಅದನ್ನು ಯಥಾವತ್ತಾಗಿ ಚಿತ್ರಿಸಲಾಗಿದೆ.'

'ಈ ಸಿನಿಮಾ ಬಗ್ಗೆ ತುಂಬಾ ಚರ್ಚೆಯಾಗುತ್ತಿದೆ, ಸ್ವಲ್ಪ ಕಣ್ಣುಮುಚ್ಚಿ ನಿಮ್ಮ ಮನಸ್ಸಿನೊಳಕ್ಕೆ ತಂದುಕೊಳ್ಳಿ. ಇಡೀ ಸಿನಿಮಾದಲ್ಲಿ ಒಂದೇ ಒಂದು ಪಾಸಿಟಿವ್ ಕ್ಯಾರೆಕ್ಟರ್ ಇಲ್ಲ, ಅಂದರೆ, ನಮ್ಮ ಹಳ್ಳಿಗಳೆಂದರೆ ಹೀಗೇನಾ? ಅಥವಾ ಮಂಡ್ಯದ ಹಳ್ಳಿಗಳೆಂದರೆ ಹೀಗೇನಾ?'


'ಹೌದು, ತೆರೆಯ ಮೇಲೆ ಪೋಷಿತವಾಗಿರುವ ಬಹುತೇಕ ಎಲ್ಲಾ ಪಾತ್ರಗಳೂ ನೆಗೆಟಿವ್ವೇ. ಆದರೆ, ಅದು ತುಂಬಾ ಸರಳೀಕರಣ ಆಗಿಬಿಡುತ್ತದೆ. ಉದಾಹರಣೆಗೆ ಗಡ್ಡಪ್ಪನನ್ನೇ ತೆಗೆದುಕೊಳ್ಳಿ, ಆತ ಒಂದು ರೀತಿಯ ಆಧ್ಯಾತ್ಮ (spiritual) ಜೀವಿ. ಅದು ನಮ್ಮ ಗ್ರಾಮೀಣ ಹಿರಿಯನೊಬ್ಬನನ್ನು ಸಂತನಂತೆ ಚಿತ್ರಿಸಿರುವುದು ಅಷ್ಟೇ.'

'ಆದರೆ, ಇದೇ ಸಂತ ಇನ್ನೊಬ್ಬ ವ್ಯಕ್ತಿಯ ಜೇಬಿನಿಂದ ಬೀಡಿಯನ್ನೋ ಬೆಂಕಿಪೊಟ್ಟಣವನ್ನೋ ತೆಗೆದುಕೊಳ್ಳಲು ಅನುಮತಿ ಪಡೆದುಕೊಂಡು, 500 ರೂ.ಗಳನ್ನೇ ಎಗರಿಸುತ್ತಾನೆ. ಆತನ ಮಗನ ಪಾತ್ರವಿರಲಿ, ಮೊಮ್ಮಗನದ್ದಿರಲಿ ಏನು ಚಿತ್ರಣ ಕೊಡುತ್ತವೆ? ಅತ್ಯಂತ ಬೇಜವಾಬ್ದಾರಿಯ, ತಮ್ಮ ಸುಖಗಳಿಗಾಗಿ ಇನ್ನೊಬ್ಬರ ಬದುಕಿನ ಜೊತೆ ಚೆಲ್ಲಾಟವಾಡುತ್ತಾರೆ. ಇದಿಷ್ಟೇನಾ ನಮ್ಮ ಹಳ್ಳಿಯ ನೈಜ ಚಿತ್ರಣ?.'


'ಇದನ್ನೊಂದು ಸಿನಿಮಾವಾಗಿ ನೋಡದೇ, ಸಾಕ್ಷ್ಯಚಿತ್ರವನ್ನಾಗಿ ನೋಡಿದರೆ ಈ ಥರದ ಸಮಸ್ಯೆಗಳು ಕಾಣುತ್ತವೆ ಅಥವಾ ಪೊಲಿಟಿಕಲಿ ಕರೆಕ್ಟ್ ಆಗಿ ನೋಡಲು ಹೋಗಿ, ಇದೊಂದು ಸೃಜನಶೀಲ ಮಾಧ್ಯಮವೆಂಬುದನ್ನು ಮರೆತಂತಾಗಿಬಿಡುತ್ತದೆ. ಮನುಷ್ಯರು ತಮ್ಮೆಲ್ಲಾ ಸಣ್ಣತನಗಳೊಂದಿಗೆ ನೂರೆಂಟು ಬಗೆಯ ಚಿಲ್ಲರೆ ಘಟನೆಗಳ ಜೊತೆಜೊತೆಗೇ ಬದುಕುತ್ತಾರೆ. ಅವರಲ್ಲಿ ವ್ಯಕ್ತವಾಗುವ ಮಾನವೀಯತೆಯ ಅಂಶಗಳು, ಮಧ್ಯಮವರ್ಗದ ಸೊಫಿಸ್ಟಿಕೇಷನ್‌ನೊಂದಿಗೇ ಕಾಣಬೇಕೆಂದೇನಿಲ್ಲ, ಅವು ಸೂಕ್ಷ್ಮವಾಗಿ, ಸಹಜವಾಗಿ, ಗ್ರಾಮವಾಸಿಗಳದ್ದೇ ವಿಶಿಷ್ಟತೆಯೊಂದಿಗೆ ಈ ಸಿನಿಮಾದಲ್ಲೂ ಬಂದಿವೆ.'

'ಹೌದು ಇವೆ. ಅಲೆಮಾರಿ ಕುರಿಗಾಹಿಗಳು ಯಾವ ನಿರೀಕ್ಷೆ ಅಥವಾ ಪ್ರತಿಫಲವಿಲ್ಲದೇ ಗಡ್ಡಪ್ಪನನ್ನು ತಮ್ಮ ಮನೆಯ ಒಬ್ಬ ವಿಚಿತ್ರ ಹಿರಿಯನೆಂಬಂತೆ ಸ್ವೀಕರಿಸಿ, ಪೊರೆಯುವುದು, ಅಂತ್ಯಸಂಸ್ಕಾರ ಮತ್ತು ತಿಥಿಯಲ್ಲಿ ಕಂಡುಬರುವ ನೊದೆಕೊಪ್ಪಲಿನ ಜನರ ಸಾಂಘಿಕ ಭಾವ, ಗಡ್ಡಪ್ಪನ ವಿಚಿತ್ರ ನಡವಳಿಕೆಗಳನ್ನೆಲ್ಲಾ ಅವರು (ಅಲ್ಪಸ್ವಲ್ಪ ಗೊಣಗಿಕೊಂಡರೂ) ಆತನನ್ನು - ಈತನೂ ನಮ್ಮೊಳಗೆ ಒಬ್ಬ ಎಂದು ಭಾವಿಸಿ- ಸಹಜವಾಗಿ ತೆಗೆದುಕೊಂಡು ಮುನ್ನಡೆಯುವುದು ಇಲ್ಲೆಲ್ಲಾ ಅಂತಹ ಅಂಶಗಳು ಕಾಣುತ್ತವೆ. ಆದರೆ ಇಡಿಯಾಗಿ ನೋಡಿ, ಈ ಸಿನಿಮಾದಲ್ಲಿ ಕಾಣುವ ಪ್ರಧಾನ ಪಾತ್ರಗಳು ಅಥವಾ ಒಂದಷ್ಟಾದರೂ ಪಾತ್ರ









ಪೋಷಣೆ ಪಡೆದುಕೊಂಡಿರುವವರೆಲ್ಲರೂ ಬೇಜವಾಬ್ದಾರಿ ಮತ್ತು ಸಣ್ಣತನಗಳಿಂದ ಕೂಡಿದವರೇ ಆಗಿದ್ದಾರೆ.'

'ಹಾಗೇನೂ ಇಲ್ಲ, ಗಡ್ಡಪ್ಪನನ್ನೇ ನೋಡಿ, ಆತ 500 ರೂ. ಎಗರಿಸುವುದು ನಿಜ. ಆದರೆ, ಆ ಅಲೆಮಾರಿ ಕುರಿಗಾಹಿಗಳು ಕುರಿಯೊಂದನ್ನು ಕಳೆದುಕೊಂಡು ಬೇಸರದಲ್ಲಿದ್ದಾಗ ತನ್ನಲ್ಲಿದ್ದ ಸಾವಿರಾರು ರೂ.ಗಳನ್ನು ಸಲೀಸಾಗಿ ಕೊಟ್ಟುಬಿಡುವುದಿಲ್ಲವೇ? ಮನುಷ್ಯರು ಹೀಗೇ ಸಂಕೀರ್ಣ ವ್ಯಕ್ತಿಗಳಲ್ಲವೇ? ಇತರ ಸಿನಿಮಾಗಳಲ್ಲಿ ಕಂಡುಬರುವಂತೆ ಇವರ ಒಳ್ಳೆಯತನವು ಮೆಲೋಡ್ರಾಮದೊಂದಿಗೆ, ಹಿನ್ನೆಲೆ ಸಂಗೀತದ ಮೇಳದೊಂದಿಗೇ ಬಂದರೆ ಮಾತ್ರ ಅದು ಸರಿಯಾದ ಚಿತ್ರಣವಾಗುತ್ತದೆಯೇ? ಹಾಗೆ ನೋಡಿದರೆ, ಸಹಜವಾಗಿ ಮನುಷ್ಯರು - ಅದರಲ್ಲೂ ನಮ್ಮ ಹಳ್ಳಿಯ ಜನರು - ಹೇಗಿರುತ್ತಾರೋ ಹಾಗೆಯೇ ಇದರಲ್ಲಿ ಚಿತ್ರಿತವಾಗಿದೆ. ಅದೇ ನಮಗೆ ಖುಷಿ ಕೊಟ್ಟಿರುವುದು.'

'ಹೌದು, ಈ ಸಿನಿಮಾದ ವಿಶೇಷ ಇರುವುದು ಅದರಲ್ಲಿಯೇ ಆಗಿದೆ. ಆದರೆ, ಇಡೀ ಸಿನಿಮಾವನ್ನು ನೀವು ಕಣ್ಣ ಮುಂದೆ ತಂದುಕೊಳ್ಳಿ. ಜೀವಂತಿಕೆಯ, ಜೀವನಪ್ರೇಮದ, ವಯಸ್ಸಿಗೆ ತಕ್ಕ ನಡವಳಿಕೆಗಳ ಹೆಸರಿನಲ್ಲಿ ಸೆಂಚುರಿ ಗೌಡ ಮತ್ತು ಆತನ ಮೊಮ್ಮಗ ಆಡುವ ಮಾತುಗಳು ಹಾಗೂ ನಡೆದುಕೊಳ್ಳುವ ರೀತಿ ಹೇಗಿದೆ? ಗಡ್ಡಪ್ಪನ ಮಗ ಈ ಚಿತ್ರದಲ್ಲಿ ಹಳ್ಳಿಗಳಲ್ಲಿ ಬದುಕುತ್ತಿರುವ ಹೆಚ್ಚಿನಂಶ ಮಧ್ಯವಯಸ್ಕರ ಪ್ರತಿನಿಧಿಯಾಗಿದ್ದರೆ, ಆತನ ಮಗ ಹೊಸತಲೆಮಾರನ್ನು ಪ್ರತಿನಿಧಿಸುತ್ತಾನೆ. ಗಡ್ಡಪ್ಪನ ನಂತರ ಪ್ರಧಾನವಾಗಿ ಪೋಷಿತವಾಗಿರುವ ಪಾತ್ರಗಳಿವು. ಅವರು ಹಳ್ಳಿಯ ವರ್ತಮಾನವನ್ನೂ, ಭವಿಷ್ಯವನ್ನೂ ಸಂಕೇತಿಸುತ್ತಾರೆ. ಇವೆರಡೂ ಪಾತ್ರಗಳ ಚಿತ್ರಣವು ಹಳ್ಳಿಯ ವರ್ತಮಾನ ಮತ್ತು ಭವಿಷ್ಯಗಳ ಕುರಿತ ನಿರ್ದೇಶಕರ ಅಥವಾ ಕತೆಗಾರರ ಹಳ್ಳಿ ನೋಟವು ನೆಗೆಟಿವ್ ಆಗಿರುವುದು ಸ್ಪಷ್ಟವಾಗಿದೆ. ನಮ್ಮ ಹಳ್ಳಿಗಳಲ್ಲಿ ಇನ್ನೂ ಮಾನವೀಯವಾದ, ಇನ್ನೂ ಜವಾಬ್ದಾರಿಯಿಂದ ವರ್ತಿಸುವ, ನ್ಯಾಯ-ನೀತಿಗಳಿಗೆ ಬೆಲೆ ಕೊಡುವ ಬದುಕು ಉಳಿದುಕೊಂಡಿದೆ. ಗಡ್ಡಪ್ಪನೂ ಕುರಿಗಾಹಿಗಳಿಗೆ ತನ್ನಲ್ಲಿದ್ದ ಹಣವನ್ನು ಆ ರೀತಿ ಎತ್ತಿ ಕೊಟ್ಟುಬಿಡುವುದು ತನ್ನ ವಿಕ್ಷಿಪ್ತತೆಯ ಕಾರಣಕ್ಕೇ ಹೊರತು ಒಳ್ಳೆಯತನದಿಂದ ಎಂದು ಅದರಲ್ಲಿ ಚಿತ್ರಿತವಾಗಿಲ್ಲ. ಒಟ್ಟಾರೆ ಈ ಸಿನಿಮಾ ನಮ್ಮ ಗ್ರಾಮೀಣ ಜನಜೀವನವನ್ನು ಅದಿರುವುದಕ್ಕಿಂತ ನೆಗೆಟಿವ್ ಆಗಿ ಚಿತ್ರಿಸುತ್ತದೆ.'

ಮೇಲಿನ ಎರಡೂ ವಾದಗಳಲ್ಲಿ ಸತ್ಯಾಂಶವಿದೆ. ಅವರವರ ನೋಟ ಅವರವರದ್ದು. ಆದರೆ, ಒಂದಂತೂ ಸತ್ಯ. ಈ ಸಿನಿಮಾವು ನಮ್ಮ ಹಳ್ಳಿಗಳ ಕುಸಿತದ ಚಿತ್ರಣವನ್ನು ಮುಂದಿಟ್ಟಿದೆ. ಜಮೀನು ಮಾರಿಬಿಡಲು ಗಡ್ಡಪ್ಪನ ಮಗ ತೀರ್ಮಾನಿಸಿದ್ದಲ್ಲಿಂದ ಹಿಡಿದು ಸಿನಿಮಾ ಮುಗಿಯುವವರೆಗಿನ ದೃಶ್ಯಾವಳಿ ಬಹುತೇಕ ತಮಾಷೆಯಂತೆ ಚಿತ್ರಿತವಾಗಿರುವುದರಿಂದ, ಅದು ನಮ್ಮಲ್ಲಿ ವಿಷಾದಭಾವ ಮೂಡಿಸುವುದಿಲ್ಲ. ಆದರೆ, ನಿಜಕ್ಕೂ ವಿಷಾದಮಯ ಚಿತ್ರಣ ಅದಾಗಿದೆ. ಇವೆಲ್ಲವೂ ಲಂಕೇಶರ ಮುಸ್ಸಂಜೆಯ ಕಥಾಪ್ರಸಂಗವನ್ನು ನೆನಪಿಗೆ ತರುತ್ತವೆ.

ಮುಸ್ಸಂಜೆಯ ಕಥಾ ಪ್ರಸಂಗ ಕಾದಂಬರಿಗೆ ಮುನ್ನ ಲಂಕೇಶರು ಈ ಅರ್ಥದ ಮಾತುಗಳನ್ನು ಬರೆಯುತ್ತಾರೆ. 'ಇದನ್ನು ಬರೆಯುತ್ತಾ ನನಗೆ, ನಮ್ಮ ಹಳ್ಳಿಗಳು ಸಣ್ಣತನ, ಜಾತೀಯತೆ, ಪುಢಾರಿತನ ಇತ್ಯಾದಿಗಳಿಂದ ತಮ್ಮ ಬದುಕಿನ ಮುಸ್ಸಂಜೆಯಲ್ಲಿದ್ದಂತೆ ತೋರಿದವು. ಹಾಗಾಗಿ ಈ ಹೆಸರಿಟ್ಟೆ'. ವಾಕ್ಯ ಸ್ವಲ್ಪ ಬೇರೆ ಇರಬಹುದಾದರೂ, ಈ ಅರ್ಥದಲ್ಲಿ ಬರೆದಿದ್ದಾರೆ. ಲಂಕೇಶರಂತಹ ನಮ್ಮ ಕಾಲದ ಬಹುಮುಖ್ಯ ಗದ್ಯ ಬರಹಗಾರರು ತಿಥಿ ಸಿನಿಮಾದ ಕಥಾ ಹೂರಣಕ್ಕಿಂತ, ಸಶಕ್ತವಾಗಿ ಇದನ್ನು ಚಿತ್ರಿಸಿದ್ದಾರೆ. ದಲಿತ ಬದುಕಿನ ಚಿತ್ರಣದೊಂದಿಗೆ ಒಡಲಾಳ ಮತ್ತು ದೇವನೂರರ ಇತರೆ ಕೃತಿಗಳು ಇವನ್ನೇ ಮತ್ತಷ್ಟು ಕಲಾತ್ಮಕವಾಗಿ ಮುಂದಿಡುತ್ತವೆ.

ಯಾವ ರೀತಿಯಲ್ಲಿ ನಾವು ಆರ್ಥಿಕ ಮೀಮಾಂಸೆಯ ಮೂಲಕ ಹಳ್ಳಿಗಳ ಕುಸಿತದ ಬಗ್ಗೆ ತೆರೆದಿಡುತ್ತೇವೋ, ಅವನ್ನೇ ಈ ಸೃಜನಶೀಲ ಕೃತಿಗಳು ಸಾಮಾ[...] ಮತ್ತು ಸಾಂಸ್ಕೃತಿಕವಾಗಿ ಹಾಗೂ ಕುಟುಂಬಗ[...] ಬದುಕಿನ ಕುಸಿತದ ಸಂಕೀರ್ಣತೆಯೊಂದಿಗೆ ತೆರೆದ[...] ಮುಸ್ಸಂಜೆಯ ಕಥಾಪ್ರಸಂಗ ಹಾಗೂ ದೇವನೂರರ [...] ಬಂದು 3-4 ದಶಕಗಳೇ ಆಗಿಹೋಗಿವೆ. ಇದು[...] ಬದುಕಿನ ಮುಸ್ಸಂಜೆಯಲ್ಲಿರುವ ಹಳ್ಳಿಗಳ ಕಥ[...] ಎಂದು ಸ್ವತಃ ಲಂಕೇಶರೇ ಹರಾ ಬರೆದು ಆಪ[...] ಆಗಿಬಿಟ್ಟಿದೆ ಎಂದರೆ, ಈಗ ತಿಥಿಯ ಸಮ[...] ಬಂದುಬಿಟ್ಟಿದೆ ಎಂದಾಗಿ ಬಿಡುತ್ತದೆ. ಯ[...] ಕಸಿವಿಸಿಯಾಗುತ್ತಿದೆ. ಇದೇ ವಾಸ್ತವವೇ? ನಮ್ಮ [...] ಸತ್ತು ತಿಥಿಯಾಗುತ್ತಿವೆಯೇ?

ಬಹುಶಃ ನಮ್ಮ ಗ್ರಾಮೀಣ ಅವಸ್ಥೆಯ [...] ಚಲನೆ ಹೀಗೇ ಇದೆ. 12ನೇ ಪಂಚವಾರ್ಷಿಕ ಯೋ[...] ಘೋಷಿತ ಗುರಿಗಳಲ್ಲೊಂದು 'ಶೇ.25ರಷ್ಟು ಹ[...] ನಗರ ಆರ್ಥಿಕತೆಯ ಭಾಗವನ್ನಾಗಿಸುವುದು'. ಇದನ್ನು[...] ಓದಿಕೊಳ್ಳಬಹುದು. 'ನಗರಗಳ ಆರ್ಥಿಕತೆಗೆ ಅತಿ[...] ಕೂಲಿಗಳನ್ನು ಗ್ರಾಮೀಣ ಭಾಗದಿಂದ ಒದಗಿ[...] ಅಥವಾ 'ನಮ್ಮ ಹಳ್ಳಿಗಳನ್ನು ಬದುಕಲು ಯೋ[...] ಕೂಪಗಳನ್ನಾಗಿಸಿ, ಪೇಟೆ ಪಟ್ಟಣಗಳಿಗೆ ಓಡಿ[...] ಗ್ರಾಮೀಣ ಬದುಕಿನ ಗಣನೀಯ ಭಾಗವಾಗಿದ[...] ಸಮುದಾಯಕ್ಕೆ ಈ ಹಳ್ಳಿಗಳು ಎಂದಿನಿಂದಲೂ [...] ಆಗಿದ್ದವು. ಇದೀಗ ಇಡೀ ಹಳ್ಳಿಗಳನ್ನೇ [...] ಮಾಡಲಾಗುತ್ತಿದೆ.

ಆಳುವವರ ನೀತಿಗಳಿಗೆ ಪೂರಕವಾಗಿಯೇ ಪ್ರ[...] ನಡೆದುಕೊಳ್ಳುತ್ತಿದೆ ಅಥವಾ ಪ್ರಕೃತಿಯನ್ನೂ ತನ್ನ [...] ಮುಸ್ಸಂಜೆಯ ಕಡೆಗೆ ಎಳೆದುಕೊಂಡು ಹೋಗಲ[...] ಬರ ಗ್ರಾಮೀಣ ಬದುಕನ್ನು ಹಿಂಡಿ ಹಿಪ್ಪೆ ಮ[...] ಸರ್ಕಾರಗಳು ತಾವೇ ನೇರವಾಗಿ ಹಳ್ಳಿಗಳನ್ನು[...] ಉದ್ದಿಮೆದಾರರಿಗೆ ಅಗ್ಗದ ಕೂಲಿಗಳನ್ನು ಒ[...] ಮಾಡಬೇಕಾದ ಕಷ್ಟವೂ ತಪ್ಪುತ್ತಿದೆ. ಅದನ್ನು [...] ಮೇಲೆ ಆವರಿಸಿಕೊಳ್ಳುತ್ತಿರುವ ಬರವೇ ಮ[...] ನಮ್ಮೆಲ್ಲರನ್ನೂ ಚಿಂತೆಗೆ ಹಚ್ಚಬೇಕಾದ [...] ಕಣ್ಣೆದುರಿಗೇ ಸರಿದುಹೋಗುತ್ತಿದೆ.

ಈ ಸಾರಿಯ ಬರ ನಮಗೂ ಒಂದು ನೆಪವಾ[...] ಗ್ರಾಮೀಣ ಬದುಕಿನ ಪುನಶ್ಚೇತನಕ್ಕೆ ನಿಸರ್ಗ ಸ್ನೇ[...] ಕೈಗೊಳ್ಳಬೇಕಿರುವ ದೀರ್ಘ ಯಾತ್ರೆಯ ಮೊದಲ [...] ಆರಂಭಿಸಬೇಕು. ಅಂತಹದೊಂದು ಪ್ರಯತ್ನ 'ಜನಾ[...] ನಗಳ ಮಹಾಮೈತ್ರಿ'ಯ ಹೆಸರಿನಲ್ಲಿ ಆರಂಭವಾಗಿ[...] ಖುಣ ಇರುವ, ಅದನ್ನು ಫೀಲ್ ಮಾಡುವ ಪ್ರಜ[...] ಹಳ್ಳಿ ಮಕ್ಕಳು ಕೈ ಜೋಡಿಸಬೇಕು. ಇಲ್ಲದಿ[...] ಮುಸ್ಸಂಜೆ ನಮ್ಮ ಹಳ್ಳಿಗಳದ್ದು ಮಾತ್ರವೇ ಆಗಿರ[...]

ಆಪ್ತಮಿತ್ರ ಗಿರೀಶ್ ಇನ್ನಿಲ್ಲ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com


ನನ್ನ ಮೂವತ್ತು ವರ್ಷಗಳ ಮಿತ್ರ ಗಿರೀಶ್ ನಿಕಮ್ ...ಲ್ಲ ಎಂದು ಹೇಳಲು ಅಪಾರ ದುಃಖವಾಗುತ್ತಿದೆ. ...ಹಲಿಯಲ್ಲಿ ರಾಜ್ಯಸಭಾ ಟಿವಿಯಲ್ಲಿ ನಿರೂಪಕನಾಗಿ ಕೆಲಸ ...ಡುತ್ತಿದ್ದ ಗಿರೀಶ್ ಕಳೆದ ಸೋಮವಾರ ಸಂಜೆ ಎಂದಿನಂತೆ ...'ಬಿಗ್ ಪಿಕ್ಚರ್' ಎಂಬ ಕಾರ್ಯಕ್ರಮದ ರೆಕಾರ್ಡಿಂಗ್ ...ಗಿಸಿದ್ದಾನೆ. ಆದಾದ ಕೆಲವೇ ಕ್ಷಣಗಳಲ್ಲಿ ಆತನಿಗೆ ...ನೋವು ಪ್ರಾರಂಭವಾಗಿ ಉಸಿರಾಡುವುದೇ ಕಷ್ಟವಾಗಿದೆ. ...ಡಲೇ ಅವನನ್ನು ಹತ್ತಿರದ ರಾಮ್ ಮನೋಹರ್ ...ೋಹಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ. ...ರೆ ಅಲ್ಲಿ ಸರಿಯಾದ ಚಿಕಿತ್ಸೆ ಸಿಗದೆ ಆತ ...ನೆಯುಸಿರೆಳೆದಿದ್ದಾನೆ.

ಮೈಸೂರಿನವನಾದ ಗಿರೀಶ್ ಅಲ್ಲಿನ 'ಸ್ಟಾರ್ ಆಫ್ ...ಸೂರು' ಪತ್ರಿಕೆಯಲ್ಲಿ ವರದಿಗಾರನಾಗಿ ಸೇರಿಕೊಂಡು ...ರ್ತನಾದ. ಆಮೇಲೆ ಆತ ಬೆಂಗಳೂರಿನಲ್ಲಿ ಇಂಡಿಯನ್ ...ಸ್ಪ್ರೆಸ್ ಸೇರಿದ. ಆಗ ನಾನು ಟೈಮ್ಸ್ ಆಫ್ ...ಡಿಯಾದಲ್ಲಿ ವರದಿಗಾರ್ತಿ ಆಗಿದ್ದೆ. ಆಗ ನಮ್ಮ ...ಚಯವಾಯ್ತು. ನನಗಿಂತ ಐದು ವರ್ಷ ಹಿರಿಯ ...ೀಶ್. ಸ್ನೇಹಜೀವಿಯಾದ ಆತನ ಹತ್ತಿರ ಸುಳಿದವರೆಲ್ಲ ...ನನ್ನು ಮೆಚ್ಚುತ್ತಿದ್ದರು. ಜೋಕುಗಳನ್ನು ಹೊಡೆಯುತ್ತಾ ...ತಿಯಿಂದ ಮಾತನಾಡಿಸುತ್ತಿದ್ದ ಗಿರೀಶ್ ಅಷ್ಟೇ ...ಭೀರವಾಗಿ ತನ್ನ ವೃತ್ತಿ ಧರ್ಮವನ್ನು ಪಾಲಿಸುತ್ತಿದ್ದ. ...ನದು ಎಂತಹ ವ್ಯಕ್ತಿತ್ವವೆಂದರೆ ಆತ ಅಪ್ಪಟ ...ತ್ಯತೀತನಾಗಿದ್ದು ತನ್ನ ಅಭಿಪ್ರಾಯವನ್ನು ಮುಚ್ಚುಮರೆ ...ದೆ ವ್ಯಕ್ತಪಡಿಸಿದರೂ ಹತ್ತಾರು ಬಿಜೆಪಿ ನಾಯಕರೂ ...ನ ಸ್ನೇಹಿತರಾಗಿದ್ದರು.

ಗಿರೀಶ್ ನನ್ನ ಗೆಳತಿ ಮತ್ತು ಸಹೋದ್ಯೋಗಿಯೊಬ್ಬಳನ್ನು ...ದುವೆಯಾದಾಗ ನಮ್ಮ ಒಡನಾಟ ಹೆಚ್ಚಾಯಿತು. ಆದರೆ ... ಮದುವೆಯ ಮಾರನೆ ದಿನವೇ ಗಂಟುಮುಖ ...ಕೊಂಡು ಆಫೀಸಿಗೆ ಬಂದಾಗ ನಮಗೆಲ್ಲ ಗಾಬರಿ ...ಯಿತು. ಏನಾಯಿತು ಎಂದು ವಿಚಾರಿಸಿದಾಗ ಆಕೆ ...ರೀಶ್ ಎಷ್ಟು ಜೋರಾಗಿ ಗೊರಕೆ ಹೊಡೆಯುತ್ತಾನೆಂದರೆ ...ು ಯಾಕಾದರು ಇವನನ್ನು ಮದುವೆಯಾದೆನೋ ...ನಿಸಿತು" ಎಂದು ನಕ್ಕಳು.

...ಇದಾದ ಕೆಲವರ್ಷಗಳ ನಂತರ ಗಿರೀಶ್ ಚೆನ್ನೈಗೆ ...ೇದ. ಆದರೆ ಆತನ ಹೆಂಡತಿ ಇನ್ನೂ ಬೆಂಗಳೂರಿನಲ್ಲೇ ...ಳು. ಆಗ ಒಮ್ಮೆ ಕೆಲಸದ ಮೇಲೆ ನಾನು ಚೆನ್ನೈಗೆ ...ೀದಾಗ ಆತ ನಾನು ತಂಗಿದ್ದ ಹೋಟೆಲ್‌ಗೆ ಬಂದ. ...ಬ್ಬರೂ ಹರಟೆ ಹೊಡೆಯುತ್ತಾ ಕೂತೆವು. ನಮಗೆ ...ತ್ತಿಲ್ಲದಂತೆ ರಾತ್ರಿ ಎರಡು ಗಂಟೆ ಆಯಿತು. "ಇಷ್ಟು ...ತ್ತಿನಲ್ಲಿ ಯಾಕೆ ಮನೆಗೆ ಹೋಗುತ್ತೀಯಾ, ಇಲ್ಲೇ ...ಲಗಿಕೋ" ಅಂದೆ. ಅರ್ಧ ಗಂಟೆಯ ನಂತರ ಸೂರು ...ರಿಹೋಗುವಂತಹ ಸದ್ದು ಕೇಳಿಸಿ ನನಗೆ ಎಚ್ಚರವಾಯಿತು. ...ರೆ ಗಿರೀಶ್ ಮಾತ್ರ ಏನೂ ಆಗಿಲ್ಲ ಎಂಬಂತೆ ನಿದ್ದೆ ...ಡುತ್ತಿದ್ದ. ನನಗೆ ಕೆಟ್ಟ ಕನಸು ಬಿದ್ದಿರಬೇಕು ...ದುಕೊಂಡು ಸುಮ್ಮನಾದೆ. ಆಗ ಮತ್ತೊಮ್ಮೆ ಹೊರಟಿತು ...ೇ ಶಬ್ಧ. ಗಿರೀಶ್ ಗೊರಕೆ ಹೊಡೆಯುತ್ತಿದ್ದ. ಮಾರನೆ ...ಗ್ಗೆ ನಾನು ಆತನಿಗೆ ಹೇಳಿದೆ. "ನೀನು ಪುಣ್ಯಾತ್ಮ ಕಣೋ. ...ು ಅಷ್ಟು ಜೋರಾಗಿ ಗೊರಕೆ ಹೊಡೆದರೂ ನಿನ್ನ ...ಡತಿ ನಿನಗೆ ಡೈವೋರ್ಸ್ ನೀಡಿಲ್ಲವಲ್ಲ."

...ಆನಂತರ ನಾನು ದೆಹಲಿಗೆ ಶಿಫ್ಟ್ ಆಗಿದ್ದರಿಂದ ನಮ್ಮ ...ಬ್ಬಿನ ಸಂಪರ್ಕ ಕಟ್ ಆಯಿತು. ವಿಪರ್ಯಾಸ ...ವೆಂದರೆ ನಾನು ಮತ್ತೆ ಬೆಂಗಳೂರಿಗೆ ವಾಪಸ್ ...ಗ ಗಿರೀಶ್ ದೆಹಲಿಗೆ ಹೋದ. ಆದರೆ ಆತ ...ಳೂರಿಗೆ ಬಂದಾಗಲೆಲ್ಲ ತಪ್ಪದೆ ನನ್ನನ್ನು ಭೇಟಿ ಆಗುತ್ತಿದ್ದ. ...ು ಆಗ ಕೆಲಸ ಮಾಡುತ್ತಿದ್ದ 'ಸಂಡೆ' ಪತ್ರಿಕೆಯನ್ನು ...ಡು ಬೇರೆ ಎಲ್ಲಾದರೂ ಅವಕಾಶಗಳು ಇದೆಯಾ ...ು ಹಾತೊರೆಯುತ್ತಿದ್ದೆ. ಆಗ ಗಿರೀಶ್ 'ಈನಾಡು'



ಪತ್ರಿಕೆಗೆ ದೆಹಲಿಯ ಪ್ರತಿನಿಧಿಯಾಗಿದ್ದ. ಒಮ್ಮೆ ಆತ ಬೆಂಗಳೂರಿಗೆ ಬಂದು ನನ್ನನ್ನು ಭೇಟಿಯಾದಾಗ "ನನಗೆ ಬೇರೆ ಎಲ್ಲಾದರೂ ಕೆಲಸ ಇದೆಯಾ ನೋಡು. ನನಗೆ ಇಲ್ಲಿ ಸಾಕಾಗಿದೆ" ಎಂದೆ. ಆತ ಕೂಡಲೇ 'ಈನಾಡು' ಮುಖ್ಯಸ್ಥರೊಂದಿಗೆ ಮಾತನಾಡಿ, ನನಗೆ ಟಿವಿ ಮಾಧ್ಯಮದಲ್ಲಿ ಅನುಭವ ಇಲ್ಲದಿದ್ದರೂ, ನನಗೆ ದೆಹಲಿಯಲ್ಲಿ 'ಈಟಿವಿ'ಯಲ್ಲಿ ಕೆಲಸ ಸಿಗುವಂತೆ ನೋಡಿಕೊಂಡ.

ಆತನೊಂದಿಗೆ ನಾನು ಹೆಚ್ಚು ಸಮಯ ಕಳೆದಿದ್ದೇ ಆಗ. ನಾವಿಬ್ಬರೂ ಅದೆಷ್ಟೋ ರಾತ್ರಿ ಬೆಳಕು ಹರಿಯುವವರೆಗೂ ಹರಟುತ್ತಾ ಕೂತದ್ದು ಉಂಟು. ಆಗ ಗಿರೀಶ್, ಭಾವದೀಪ್ ಕಾಂಗ್ ಎಂಬ ಸರ್ದಾರ್ಣಿ ಪತ್ರಕರ್ತೆ, ಚಂದ್ರಿಕಾ ಮಾಗೊ ಎಂಬ ಟೈಮ್ಸ್ ಪತ್ರಕರ್ತೆ, ಶ್ರೀಂಜೋಯ್ ಎಂಬ ಬಂಗಾಳಿ ಮೂಲದ ಪತ್ರಕರ್ತ ಮತ್ತು ನಾನು... ಇದು ನಮ್ಮ ಒಂದು ಗ್ಯಾಂಗ್. ಇನ್ನೊಂದು ಗ್ಯಾಂಗ್ ಕನ್ನಡಿಗ ಪತ್ರಕರ್ತರದ್ದು. ಅದರಲ್ಲಿ ಉಮಾಪತಿ, ಅರುಣ್, ಸಚ್ಚಿದಾನಂದ ಮೂರ್ತಿ, ಗಿರೀಶ್ ಮತ್ತು ನಾನು ಸದಸ್ಯರು. ನಾವೆಲ್ಲರೂ ಸೇರಿ ಊಟ ಮಾಡಿದ್ದು, ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದು, ಹುಟ್ಟುಹಬ್ಬಗಳನ್ನು ಆಚರಿಸಿದ್ದು ಹಲವಾರು ಬಾರಿ.

1999ರ ಡಿಸೆಂಬರ್‌ನಲ್ಲಿ ನನ್ನ ತಂಗಿ ಕವಿತಾ ತನ್ನ ಪ್ರಥಮ ಸಿನಿಮಾ 'ದೇವೀರಿ' ಮುಗಿಸಿದ್ದಳು. ತನ್ನ ಹುಟ್ಟುಹಬ್ಬದ ದಿನವಾದ **13**ನೇ ತಾರೀಖು ಆಕೆ ಅಪ್ಪನಿಗೆ ಒಂದು ಶೋ ಇಟ್ಟುಕೊಂಡಿದ್ದಳು. ಹಿಂದಿನ ರಾತ್ರಿ ಗಿರೀಶ್ ಜೊತೆ ಪಾರ್ಟಿ ಮಾಡಿದ್ದ ನಾನು ತಡವಾಗಿ ಏರ್‌ಪೋರ್ಟ್ ಹೊಕ್ಕರೂ ಸದ್ಯ ಪ್ಲೇನ್ ಮಿಸ್ ಮಾಡಿಕೊಳ್ಳದೆ ಬೆಂಗಳೂರಿಗೆ ಬಂದೆ. ಆಗ ಹೊಸ ಸಹಸ್ರವರ್ಷವನ್ನು ಅಪ್ಪ, ಕವಿತಾ ಮತ್ತು ಅಜಿತು ಜೊತೆ ಕಳೆಯಬೇಕೆಂತಲೂ ಬಂದಿದ್ದೆ. ಇನ್ನೇನು ಹೊಸ ವರ್ಷಕ್ಕೆ ಕೆಲವು ದಿನಗಳು ಇವೆ ಎಂದಾಗ ದೆಹಲಿಯಿಂದ ಫೋನ್ ಮಾಡಿದ ಗಿರೀಶ್ "ನಾನು, ಭಾವದೀಪ್, ಶ್ರೀಂಜೋಯ್ ಮತ್ತು ಚಂದ್ರಿಕಾ ಗೋವಾಗೆ ಹೋಗುತ್ತಿದ್ದೇವೆ. ನೀನೂ ಅಲ್ಲಿಂದಲೇ ಗೋವಾಗೆ ಬಾ" ಎಂದು ಒತ್ತಾಯಿಸಿದ. ನಾನು "ಇಲ್ಲ, ನಾನು ಅಪ್ಪನ ಜೊತೆ ಇರುತ್ತೇನೆ" ಎಂದು ಸುಮ್ಮನಾದೆ.

ನಾನು **2000** ಜನವರಿ **4**ರಂದು ದೆಹಲಿಗೆ ಹಿಂದಿರುಗಿದ ದಿನವೇ ಅವರೆಲ್ಲರೂ ಹಿಂದಿರುಗಿದರು. ಅವತ್ತು ಬೆಳಗ್ಗೆಯೇ ನನಗೆ ಫೋನ್ ಮಾಡಿದ ಗಿರೀಶ್ "ನಾನು ಇಲ್ಲದಿದ್ದಾಗ ನನ್ನ ಹೆಂಡತಿ ಗಂಟುಮೂಟೆ ಕಟ್ಟಿಕೊಂಡು ನನ್ನನ್ನು ಬಿಟ್ಟುಹೋಗಿದ್ದಾಳೆ" ಎಂದ. ಕೂಡಲೇ ನಾನು, ಭಾವದೀಪ್ ಮತ್ತು ಚಂದ್ರಿಕಾ ಆತನ ಮನೆಗೆ ಧಾವಿಸಿದೆವು. ನಾವು ಆತ ಬೇಸರ ಮಾಡಿಕೊಂಡಿರುತ್ತಾನೆ, ಡಿಪ್ರೆಸ್ ಆಗಿರುತ್ತಾನೆ ಎಂದು ಭಾವಿಸಿದ್ದರೆ, ಗಿರೀಶ್ ನಗುತ್ತಿದ್ದ. ಏನಾಗಿತ್ತೆಂದರೆ ಅಷ್ಟರಲ್ಲಿ ಅವರ ಸಂಬಂಧ ಹಳಸಿದ್ದರಿಂದ ಇಬ್ಬರೂ ಪರಸ್ಪರ ಬಿಡುಗಡೆ ಬಯಸಿದ್ದರು.




ಅದೇ ತಿಂಗಳು 25 ರಂದು ಅಪ್ಪ ಹೊರಟುಹೋದ ಸುದ್ದಿ ಗೊತ್ತಾದಾಗ ನಾಮ ಮೊದಲು ಫೋನ್ ಮಾಡಿದ್ದು ಗಿರೀಶನಿಗೆ. ಕೂಡಲೇ ಗಿರೀಶ್, ಉಮಾಪತಿ ಮತ್ತು ಅವರ ಪತ್ನಿ ಪ್ರಣವ ನನ್ನ ಮನೆಗೆ ಬಂದರು. ಅವತ್ತು ನನ್ನನ್ನು ಸಂತೈಸುತ್ತಾ, ನನಗೆ ಫ್ಲೈಟ್ ಟಿಕೆಟ್ ಕೊಡಿಸಿ ಪ್ಲೇನ್ ಹತ್ತಿಸಿದ್ದು ಗಿರೀಶ್ ಮತ್ತು ಭಾವದೀಪ್.

ಅದಾದನಂತರ ಗಿರೀಶ್ ಬೆಂಗಳೂರಿಗೆ ಬಂದಾಗಲೆಲ್ಲ ವಾಸ್ತವ್ಯ ಹೂಡುತ್ತಿದ್ದದ್ದು ನನ್ನ ಮನೆಯಲ್ಲೇ. ಆಗೆಲ್ಲ ನಮ್ಮ ರಾಜರಾಜೇಶ್ವರಿನಗರದ ಗ್ಯಾಂಗ್ ಸೇರುತ್ತಿತ್ತು. ಆ ಗುಂಪಿನ ಸದಸ್ಯರು ಕಲಾವಿದೆ ಪುಷ್ಪಮಾಲಾ, ಕವಿಯತ್ರಿ ಮಮತಾ ಸಾಗರ್, ಮಮತಾಳ ಗಂಡ ಮತ್ತು ಕಲಾವಿದ ಶ್ಯಾಮ್ ಮತ್ತು ಪ್ರೊಫೆಸರ್ ಚಂದನ್ ಗೌಡ. ಎಲ್ಲರೂ ಗಿರೀಶನಿಗೆ ಆಪ್ತಮಿತ್ರರಾದರು.

ಗಿರೀಶ್ ಬೆಂಗಳೂರಿನಲ್ಲಿ ಒಂದು ಫ್ಲಾಟ್ ಕೊಂಡನಂತರ ಆತ ಇಲ್ಲಿಗೆ ಬಂದಾಗಲೆಲ್ಲ ತನ್ನ ಮನೆಯಲ್ಲಿ ಸಂತೋಷಕೂಟಗಳನ್ನು ಹಮ್ಮಿಕೊಳ್ಳುತ್ತಿದ್ದ. ಕೆಲಸ ಇತ್ಯಾದಿ ಒತ್ತಡಗಳಲ್ಲಿ ಮುಳುಗಿಹೋಗಿದ್ದ ಬೆಂಗಳೂರಿನವರೇ ಆದ ನಾವೆಲ್ಲರೂ ಭೇಟಿ ಆಗುತ್ತಿದ್ದದ್ದೇ ಗಿರೀಶ್ ಬೆಂಗಳೂರಿಗೆ ಬಂದಾಗ ಮಾತ್ರ ಎಂಬಂತಾಗಿಹೋಗಿತ್ತು.

ದೆಹಲಿಯ ಒಂದು ಪತ್ರಿಕೋದ್ಯಮದ ಕಾಲೇಜಿನಲ್ಲೂ ಅತಿಥಿ ಪ್ರಾಧ್ಯಾಪಕನಾಗಿದ್ದ ಗಿರೀಶ್ ಅಪಾರ ಶಿಷ್ಯಂದಿರನ್ನು ಗಳಿಸಿದ್ದ. ರಾಜ್ಯಸಭಾ ಟಿವಿಯ ನಿರೂಪಕನಾಗಿ ಗಿರೀಶ್ ಅಪಾರ ಜನಪ್ರಿಯತೆಯನ್ನೂ ಪಡೆದಿದ್ದ. ಎಷ್ಟರಮಟ್ಟಿಗೆ ಎಂದರೆ ಇತ್ತೀಚೆಗೆ ಸ್ಕ್ರೋಲ್.ಇನ್ ಎಂಬ ವೆಬ್‌ಸೈಟ್ "ನೀವು ಶಾಂತಿಯುತವಾದ ಒಂದು ಟಿವಿ ಚರ್ಚೆಯನ್ನು ವೀಕ್ಷಿಸಬೇಕೆಂದರೆ ಆರ್‌ಎಸ್‌ಟಿವಿ ನೋಡಿ. ಅಲ್ಲಿ ಅರೆಚಾಟ ಇಲ್ಲ, ಚೀರಾಟ ಇಲ್ಲ, ಬದಲಾಗಿ ಎಲ್ಲರಿಗೂ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುವ ಅವಕಾಶ ಸಿಗುತ್ತದೆ. ಯಾರಿಗೂ ಅವಮಾನಿಸುವಂತಹ ಕೆಲಸ ಅಲ್ಲಿ ನಡೆಯುವುದಿಲ್ಲ. ನಿರೂಪಕ ಗಿರೀಶ್ ನಿಕಮ್ ಅವರು ಅಗತ್ಯ ಬಿದ್ದಾಗ ಮಾತ್ರ ಮಧ್ಯ ಪ್ರವೇಶಿಸಿ ಪ್ರಶ್ನೆ



ಕೇಳುತ್ತಾರೆ. ಯಾವುದೇ ವಿಷಯದ ಆಳ ಅಗಲವನ್ನು ತಾಳ್ಮೆಯಿಂದ ಅರಿಯಬೇಕೆಂದರೆ ಈ ಚಾನೆಲ್ ನೋಡಿ" ಎಂದು ಪ್ರಶಂಶಿಸಿತ್ತು.

ಹಾಗೆಯೇ 'ದಿ ವೈರ್' ಎಂಬ ಇನ್ನೊಂದು ವೆಬ್‌ಸೈಟ್‌ನಲ್ಲಿ ಕಾವೇರಿ ವಿವಾದ ಕುರಿತು ಗಿರೀಶ್ ಬರೆದಿದ್ದ ವಸ್ತುನಿಷ್ಠ ಲೇಖನವೂ ಅಪಾರ ಜನರ ಮೆಚ್ಚುಗೆಯನ್ನು ಗಳಿಸಿತ್ತು. ಇನ್ನು ಸಾಮಾಜಿಕ ಜಾಲತಾಣಗಳಲ್ಲಿ ಗಿರೀಶ್ ಎಷ್ಟು ಸಕ್ರಿಯನಾಗಿದ್ದನೆಂದರೆ ಆತನ ಫೇಸ್‌ಬುಕ್ ಪೇಜ್ ಸ್ನೇಹಿತರ ಸಂಖ್ಯೆ **9,000**ಕ್ಕೂ ಹೆಚ್ಚು. ಅಲ್ಲಿ ಆತ ಎತ್ತುತ್ತಿದ್ದ ವಿಚಾರಗಳು, ಕೇಳುತ್ತಿದ್ದ ಪ್ರಶ್ನೆಗಳು, ಚರ್ಚಿಸುತ್ತಿದ್ದ ವಿದ್ಯಮಾನಗಳಿಗೆ ಚೆಡ್ಡಿಗಳು ಉರಿದು ಬೀಳುತ್ತಿದ್ದರು. ಒಮ್ಮೊಮ್ಮೆ ಚೆಡ್ಡಿಗಳ ಪ್ರತಿಕ್ರಿಯೆಗಳನ್ನು ಕಂಡು ರೋಸಿಹೋಗಿ ನಾನು "ಗಿರೀಶ್, ಅವರನ್ನೆಲ್ಲ ಹೊರಗೆ ಬಿಸಾಕು" ಎಂದರೆ ಆತ "ತಾಳ್ಮೆ ಇರಬೇಕು ಇಲ್ಲಾ ಅಂದ್ರೆ ಅವರಿಗೆ ವಿಚಾರಗಳನ್ನು ಮುಟ್ಟಿಸುವುದು ಹೇಗೆ?" ಎಂದು ನಗುತ್ತಿದ್ದ.

ನಾನು ಮತ್ತು ಗಿರೀಶ್ ಹದಿನೈದು ವರ್ಷಗಳ ಹಿಂದೆ ಒಂದು ಒಪ್ಪಂದ ಮಾಡಿಕೊಂಡಿದ್ದೆವು. ಅದೇನೆಂದರೆ ನಾವಿಬ್ಬರೂ **50** ವರ್ಷ ಪ್ರಾಯ ದಾಟಿದ ನಂತರ ಇಬ್ಬರೂ ಏಕಾಂಗಿಗಳಾಗಿದ್ದರೆ ಒಂದೇ ಮನೆಯಲ್ಲಿ ಸ್ನೇಹಿತರಂತೆ ಜೀವನ ಸಾಗಿಸುವುದು. ಆಗ ಇಬ್ಬರನ್ನೂ ಏಕಾಂಗಿತನವಾಗಲಿ, ಅಸಹಾಯಕತೆಯಾಗಲಿ ಕಾಡುವುದಿಲ್ಲ. ಆ ಒಪ್ಪಂದದಂತೆ ನಾನೂ **50**ರ ಹೊಸ್ತಿಲನ್ನು ದಾಟಿದಾಗ ಇನ್ನೊಂದು ಒಪ್ಪಂದ ಮಾಡಿಕೊಂಡೆವು. ಅದರಂತೆ ನಮ್ಮ ಗಡುವನ್ನು **50**ರಿಂದ **60**ಕ್ಕೆ ಹೆಚ್ಚಿಸಿದೆವು.

ಹೋದವರ್ಷ ಗಿರೀಶ್ ನರೇಂದ್ರ ಮೋದಿಯೊಂದಿಗೆ ಅಮೆರಿಕಕ್ಕೆ ಹೋದಾಗ ನ್ಯೂಯಾರ್ಕ್ ನಗರದಲ್ಲಿ ಆತನಿಗೆ ಹಾರ್ಟ್ ಅಟ್ಯಾಕ್ ಆಯಿತು. ಕೂಡಲೇ ಆತನನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಲಾಯಿತು. ಒಂದೆರಡು ವಾರಗಳಲ್ಲಿ ಚೇತರಿಸಿಕೊಂಡ ಗಿರೀಶ್ ಭಾರತಕ್ಕೆ ಹಿಂದಿರುಗಿದ. ಆನಂತರ ಆತ ಬೆಂಗಳೂರಿಗೆ ಬಂದಾಗ "ನನಗೆ ಹಾರ್ಟ್ ಅಟ್ಯಾಕ್ ಆಗಿದ್ದು ಅಮೆರಿಕದಲ್ಲಾದ್ದರಿಂದ ನನ್ನ ಪ್ರಾಣ ಉಳಿಯಿತು. ಇಲ್ಲಿ, ಭಾರತದಲ್ಲಿ ಆಗಿದ್ದರೆ, ನಾನು ಸತ್ತೇ ಹೋಗುತ್ತಿದ್ದೆ" ಎಂದು ನಕ್ಕಿದ್ದ.

ಹಾರ್ಟ್ ಅಟ್ಯಾಕ್ ಆದನಂತರ ಆತ ಸಿಗರೇಟು ಸೇದುವುದನ್ನು ಬಿಟ್ಟ. ಪ್ರತಿದಿನ ಅರ್ಧ ಗಂಟೆ ವಾಕಿಂಗ್ ಮತ್ತು ಅರ್ಧ ಗಂಟೆ ಜಿಮ್‌ನಲ್ಲಿ ವ್ಯಾಯಾಮ ಮಾಡಲಾರಂಭಿಸಿದ. ದೇಹದ ತೂಕ ಇಳಿಸಿಕೊಂಡು ಮುಂಚೆ ಇದ್ದದ್ದಕ್ಕಿಂತ ಹೆಚ್ಚು ಆರೋಗ್ಯವಂತನಾದ.

ನಾನು ಅವನನ್ನು ಕೊನೆ ಬಾರಿಗೆ ನೋಡಿದ್ದು ಜೂನ್ ತಿಂಗಳಲ್ಲಿ. ಆ ಶನಿವಾರ ಆತನ ಮನೆಯಲ್ಲಿ ಮತ್ತದೇ ಸಂತೋಷಕೂಟ ಇತ್ತು. ಆದರೆ ಆ ಶನಿವಾರ ನಾನು, ಕವಿತಾ, ಅರ್ಪಿತಾ, ಇಶಾ ಮತ್ತು ಸಮಯ್ ತುಮಕೂರು ಹತ್ತಿರವಿರುವ ಮಿತ್ರರಾದ ರೇಣು ಮತ್ತು ಮುಕುಂದ್ ಮನೆಗೆ ಹೋಗಲು ನಿರ್ಧರಿಸಿದ್ದರಿಂದ ಶುಕ್ರವಾರವೇ ಗಿರೀಶ್ ಮನೆಗೆ ಹೋದೆ. ಅವತ್ತು ಅಲ್ಲೇ ತಂಗಿದ್ದು ಶನಿವಾರ ಬೆಳಗ್ಗೆ ಹಿಂದಿರುಗಿದ್ದೆ.


ಕಳೆದ ಸೋಮವಾರ ಸಂಜೆ ಬೆಂಗಳೂರ್ ಮಿರರ್‌ಗೆ ನನ್ನ ಅಂಕಣ ಬರೆದು ಮುಗಿಸಿ ಪತ್ರಿಕೆ ಕೆಲಸ ಪ್ರಾರಂಭಿಸಬೇಕು ಎನ್ನುತ್ತಿದ್ದಾಗ ಭಾವದೀಪ್ ಫೋನ್ ಮಾಡಿದಳು. "ನೋಡು, ಗಿರೀಶ್‌ಗೆ ಅಮೆರಿಕದಲ್ಲಿ ಆದದ್ದೇ ಆಗಿದೆ. ಅವನನ್ನು ಆಸ್ಪತ್ರೆಗೆ ಸೇರಿಸಿದ್ದಾರಂತೆ" ಎಂದಳು. ನನಗೆ ಶಾಕ್ ಆಯಿತು. ದೆಹಲಿಯಲ್ಲಿರುವ ಮಿತ್ರರಿಗೆ ಫೋನ್ ಮಾಡುತ್ತಿದ್ದಾಗ ಭಾವದೀಪ್‌ಳಿಂದ ಒಂದು ಮೆಸೇಜ್ ಬಂತು: 'ಹಿ ಇಸ್ ಗಾನ್.'

ಗಿರೀಶ್ ಹೇಳಿದ್ದ ಮಾತು ಸತ್ಯವಾಯಿತು. ಆತನಿಗೆ ಹಾರ್ಟ್ ಅಟ್ಯಾಕ್ ಆದಕೂಡಲೇ ಆರ್‌ಎಸ್‌ಟಿವಿ ಸಿಬ್ಬಂದಿ ಆತನನ್ನು ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಆದರೆ ಅಷ್ಟು ದೊಡ್ಡ ಆಸ್ಪತ್ರೆಯಲ್ಲಿ ಒಂದು ವೆಂಟಿಲೇಟರ್ ಇರಲಿಲ್ಲ. ಹಾಗಾಗಿ ಅಲ್ಲಿನ ವೈದ್ಯರು ಆತನ ಬಾಯಿಗೆ ಪೈಪ್ ತುರುಕಿ ಹ್ಯಾಂಡ್‌ಪಂಪ್‌ನಲ್ಲಿ ಆತನ ಶ್ವಾಸಕೋಶಕ್ಕೆ ಗಾಳಿ ತುಂಬಲು ಯತ್ನಿಸಿದರು. ಆದರೆ ಅದು ಫಲಕಾರಿ ಆಗದೆ ಆತ ಪ್ರಾಣಬಿಟ್ಟ. ಅಮೆರಿಕದಲ್ಲಿ ಪ್ರಾಣ ಉಳಿಸಿಕೊಂಡಿದ್ದ ಗಿರೀಶ್ ಭಾರತದಲ್ಲಿ ಅದನ್ನು ಕಳೆದುಕೊಂಡ.

ಮೂವತ್ತು ವರ್ಷಗಳ ಕಾಲ ನನ್ನ ಆಪ್ತಮಿತ್ರನಾಗಿದ್ದ, ಸ್ನೇಹಜೀವಿಯಾಗಿದ್ದ, ಪ್ರಾಮಾಣಿಕ ಪತ್ರಕರ್ತನಾಗಿದ್ದ, ಜಾತ್ಯತೀತನಾಗಿದ್ದ, ಮುಂದೊಂದು ದಿನ ಪರಸ್ಪರ ಆಸರೆ ಆಗುವ ಎಂದು ಮಾತುಕೊಟ್ಟಿದ್ದ ಗಿರೀಶ್ ನಮ್ಮಿಬ್ಬರ ಒಪ್ಪಂದದಂತೆ **60** ವರ್ಷ ವಯಸ್ಸು ತಲುಪುವ ಮುನ್ನವೇ ತನ್ನ **59**ನೇ ವಯಸ್ಸಿನಲ್ಲಿ ಹೊರಟುಹೋದ.

ಐ ಮಿಸ್ ಯು ಗೆಳೆಯ. ●

ಕೊಡಗು: ಕಾಟಾಚಾರದ ಟಿಪ್ಪು ಜಯಂ…



ಟಿಪ್ಪು ಜಯಂತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒಂದು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ತಡವಾಗಿ ಕೆ.ಪಿ.ಸಿ.ಸಿ. ಅಧ್ಯಕ್ಷ ಮತ್ತು ಗೃಹಸಚಿವ ಜಿ. ಪರಮೇಶ್ವರ್ ಈ ಸರಕಾರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹೇಳಿಕೆ ನೀಡಿದ್ದಾರೆ. ಕರ್ನಾಟಕ ರಾಜ್ಯ ಸರಕಾರದ ಕೆಲವೇ ಕೆಲವು ಸಚಿವರು ಈ ಕಾರ್ಯಕ್ರಮವನ್ನು ಸಮರ್ಥಿಸಿ ಹೇಳಿಕೆಯನ್ನು ನೀಡಿದ್ದು, ಬಿ.ಜೆ.ಪಿಯನ್ನು ವಿರೋಧಿಸಿ ಕೊಂಡು ಕಾರ್ಯಕ್ರಮ ನಡೆಸುವ ಚೈತನ್ಯ ಕಾಂಗ್ರೆಸಿಗರಲ್ಲಿ ಇಲ್ಲ ಎಂಬುದನ್ನು ಸ್ಪಷ್ಟವಾಗುತ್ತದೆ.

ರಾಜ್ಯ ಸರಕಾರ ನಡೆಸುತ್ತಿರುವ ಈ ಕಾರ್ಯಕ್ರಮ ಕಾಟಾಚಾರದ ಕಾರ್ಯಕ್ರಮ ಎಂಬುದು ಕೊಡಗು ಜಿಲ್ಲಾಡಳಿತ ನಡೆಸುತ್ತಿರುವ ಸಿದ್ಧತೆಗಳು ಮತ್ತು ಇದಕ್ಕೆ ಪೂರಕವಾಗಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು ಈ ಕಾರ್ಯಕ್ರಮದ ಬಗ್ಗೆ ನೀಡಿರುವ ಪ್ರತಿಕ್ರಿಯೆಯನ್ನು ನೋಡಿದರೆ ತಿಳಿಯುತ್ತದೆ. ಇದಕ್ಕಾಗಿ ಇಂತಹ ಒಂದು ಕಾರ್ಯಕ್ರಮವನ್ನು ರಾಜ್ಯ ಸರಕಾರ ಆಯೋಜಿಸಬೇಕಾಗಿತ್ತೇ ಎಂದು ಪ್ರಶ್ನಿಸುವಂತಹ ಪರಿಸ್ಥಿತಿ ಬಂದಿದೆ. ಯಾವುದೇ ಅಡ್ಡಿಆತಂಕಗಳು ಬಂದರೂ ನಾವು ಟಿಪ್ಪು ಜಯಂತಿಯನ್ನು ನಡೆಸಿಯೇ ಸಿದ್ಧ ಎಂದು ರಾಜ್ಯ ಸರಕಾರ ಹೇಳುವ ಮೂಲಕ ತಾವೇನೋ ಸಾಧಿಸುತ್ತಿದ್ದೇವೆ ಎಂದು ಜನತೆಗೆ ತಿಳಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅವರ ಪ್ರಯತ್ನದ ಪರಿ ಗಮನಿಸಿದರೆ ಖಂಡಿತವಾಗಿಯೂ ಭ್ರಮನಿರಸನವಾಗುತ್ತದೆ. ಕಾಟಾಚಾರಕ್ಕಾಗಿ ಕಾರ್ಯಕ್ರಮ ಮಾಡುವ ಮೂಲಕ ಟಿಪ್ಪು ಸುಲ್ತಾನರನ್ನು ಅವಮಾನಿಸಬೇಕಾಗಿತ್ತಾ ಎಂದು ಪ್ರಶ್ನಿಸುವಂತೆ ಮಾಡಿದೆ.

ಕೊಡಗು ಜಿಲ್ಲೆ ಟಿಪ್ಪು ಜಯಂತಿಯ ವಿಚಾರದಲ್ಲಿ ಅತ್ಯಂತ ಸೂಕ್ಷ್ಮ ಜಿಲ್ಲೆ. ಕಳೆದ ಸಾಲಿನಲ್ಲಿ ಟಿಪ್ಪು ಜಯಂತಿಯನ್ನು ಅಧಿಕೃತವಾಗಿ ರಾಜ್ಯ ಸರಕಾರ ಆಚರಿಸಿದಾಗ ಮೊದಲ ಪ್ರತಿರೋಧ ಕಂಡುಬಂದದ್ದೇ ಕೊಡಗು ಜಿಲ್ಲೆಯಲ್ಲಿ. ಮೂರು ವರ್ಷಗಳ ಹಿಂದೆ ಯಡಿಯೂರಪ್ಪನವರು ಕೆಜೆಪಿ ಅಧ್ಯಕ್ಷರಾಗಿದ್ದಾಗ ಟಿಪ್ಪುವಿನ ಟೋಪಿ ಧರಿಸಿ, ಟಿಪ್ಪು ಜಯಂತಿ ಆಚರಣೆ ಮಾಡುವ ಮೂಲಕ ಕರ್ನಾಟಕ ರಾಜ್ಯದ ಜನತೆಗೆ ಟೋಪಿ ಹಾಕಿದ್ದರು. ಇವರ ನಂತರ ಮುಖ್ಯಮಂತ್ರಿಯಾದ ಜಗದೀಶ್ ಶೆಟ್ಟರ್ ಹಾಗೂ ಉಪಮುಖ್ಯಮಂತ್ರಿಯಾಗಿದ್ದ ಆರ್.ಅಶೋಕ್‌ರವರು ಕೂಡ ಟಿಪ್ಪು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈಗ ಇವರುಗಳೆಲ್ಲ ರಾಜ್ಯ ಸರಕಾರ ನಡೆಸುವ ಟಿಪ್ಪು ಜಯಂತಿಯನ್ನು ವಿರೋಧಿಸುವ ಹೇಳಿಕೆಯನ್ನು ನೀಡುವ ಮೂಲಕ ಕರ್ನಾಟಕ ರಾಜ್ಯದಲ್ಲಿ ಅಶಾಂತಿಯನ್ನು ಮೂಡಿಸಲು ಕಾರಣರಾಗಿದ್ದಾರೆ.

ಇನ್ನು ನಮ್ಮ ಘನಘೋರ ಸಂಸದರಾದ ಪ್ರತಾಪ ಸಿಂಹ ಕಳೆದ ಸಾಲಿನಲ್ಲಿ ಕೊಡಗಿನಲ್ಲಿ ಬೆಂಕಿ ಹಚ್ಚಿದ್ದು ಸಾಲದು ಎಂದು, ಈ ಸಾಲಿನಲ್ಲಿ ಚಿತ್ರದುರ್ಗದಲ್ಲಿ ಬೆಂಕಿ ಹಚ್ಚುವ ಯತ್ನವನ್ನು ಮಾಡುತ್ತಿದ್ದಾರೆ. ಇದೇನೇ ಆದರೂ ರಾಜ್ಯ ಸರಕಾರದ ನಡಾವಳಿಕೆಗಳು ಮತ್ತು ಕಾಂಗ್ರೆಸ್ ಪಕ್ಷದ ನಿರ್ಲಿಪ್ತತೆ, ರಾಜ್ಯದ ಜನತೆಗೆ ಸರಕಾರದ ಬಗ್ಗೆ ಜಿಗುಪ್ಸೆ ಮೂಡುವಂತಹ ವಾತಾವರಣವನ್ನು ಉಂಟುಮಾಡಿದೆ.

ಕಳೆದ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಟಿಪ್ಪು ಜಯಂತಿಯ ಕಾರ್ಯಕ್ರಮದಿಂದಾಗಿ ಇಬ್ಬರು ಸತ್ತಿದ್ದರು. ಆದ್ದರಿಂದ ಕೊಡಗು ಜಿಲ್ಲೆ ಈ ವಿಚಾರದಲ್ಲಿ ಅತ್ಯಂತ ಸೂಕ್ಷ್ಮ ಜಿಲ್ಲೆ ಎಂದು ಪರಿಗಣಿಸಬೇಕಾಗಿದೆ. ಕಳೆದ ಸಾಲಿನ ಗಲಭೆಗೆ ಬಿಜೆಪಿ ಮತ್ತು ಸಂಘ ಪರಿವಾರವೇ ಕಾರಣ ಎಂಬುದು ಎಲ್ಲರಿಗೂ ತಿಳಿದಿದೆ. ಆದರೂ ಕೂಡ ಈಗ ಮತ್ತೆ ಅವರು ಹಳೆಯ ಧಾಟಿಯಲ್ಲಿಯೇ ಚಟುವಟಿಕೆ ನಡೆಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ವಿರೋಧಿಸುವ ಸ್ವಾತಂತ್ರ್ಯ ಇದ್ದರೂ ಕೂಡ ಯಾವ ರೀತಿ ವಿರೋಧಿಸಬೇಕು ಎಂಬುದು ತಿಳಿಯದ ರೀತಿಯಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿ ಇರುವಂತಹ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ವರ್ತಿಸುತ್ತಿದ್ದಾರೆ. ಸುಳ್ಳು ಇತಿಹಾಸವನ್ನು ಹೇಳುವ ಮೂಲಕ ಜನರನ್ನು ದಿಕ್ಕು ತಪ್ಪಿಸುವ ಕಾರ್ಯವನ್ನು ಮಾಡುತ್ತಿದ್ದಾರೆ.

ಜಿಲ್ಲಾಡಳಿತ ಮಾತ್ರ ಟಿಪ್ಪು ಜಯಂತಿಗೆ ಕಟ್ಟುನಿಟ್ಟಿನ ಕ್ರಮ ಎಂದು ಹೇಳಿಕೊಂಡು ದಿನಕ್ಕೆ ಮೂರು ಸಭೆ, ಪತ್ರಿಕಾ ಹೇಳಿಕೆಗಳು, ಎಚ್ಚರಿಕೆ, ಪೊಲೀಸರ ಪಥ ಸಂಚಲನ ಮುಂತಾದುವುಗಳನ್ನು ಮಾಡುತ್ತಿದೆ. ಇದು ಟಿಪ್ಪು ಜಯಂತಿಯನ್ನು ಆಚರಿಸುವ ರೀತಿಯಂತೂ ಅಲ್ಲ. ಕಳೆದ ಸಾಲಿನಲ್ಲಿ ಯಾರು ಗಲಭೆಗೆ ಕಾರಣಕರ್ತರಾಗಿದ್ದರೋ, ಅವರಿಗೆ ಈ ಪಥ ಸಂಚಲನವಾಗಲಿ, ಎಚ್ಚರಿಕೆಯಾಗಲಿ ವಿಚಾರವೇ ಅಲ್ಲ, ಅವರು ರಾಜಾರೋಷವಾಗಿ ತಮ್ಮ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಈಗ ಜಿಲ್ಲಾಡಳಿತದ ಚಟುವಟಿಕೆಗಳು ಟಿಪ್ಪು ಜಯಂತಿಯನ್ನು ಆಚರಿಸಿದ್ದೇವೆ ಎಂಬುದನ್ನು ದಾಖಲಿಸುವುದಷ್ಟಕ್ಕೆ ಸೀಮಿತವಾಗಿದೆ.

ಜಿಲ್ಲಾಧಿಕಾರಿಗಳು 200 ಆಮಂತ್ರಣ ಪತ್ರವನ್ನು ಮುದ್ರಿಸುತ್ತಿದ್ದಾರೆ. ಇದನ್ನು ಸರಕಾರಿ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಮತ್ತು ಮಾಧ್ಯಮದವರಿಗೆ ನೀಡಿದ ನಂತರ ಉಳಿದರೆ ಸಾರ್ವಜನಿಕರಿಗೆ ವಿತರಿಸುತ್ತಾರೆ. ಅಂದರೆ ಇದರ ಉದ್ದೇಶ ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಕಾರ್ಯಕ್ರಮಕ್ಕೆ ಬರುವವರು ತಮ್ಮ ಕೈಯಲ್ಲಿ ಆಮಂತ್ರಣ ಪತ್ರವನ್ನು ಇಟ್ಟುಕೊಂಡಿರಬೇಕು. ಅಗತ್ಯ ಬಿದ್ದರೆ ಗುರುತು ಚೀಟಿಯೂ ಕೈಯಲ್ಲಿ ಇರಬೇಕು ಎಂದು ಹೇಳಲಾಗಿದೆ. ಇಂತಹ ವಾತಾವರಣದಲ್ಲಿ ಸಾರ್ವಜನಿಕರು ಈ ಕಾರ್ಯಕ್ರಮ ದಲ್ಲಿ ಭಾಗವಹಿಸುತ್ತಾರೆ ಎಂದು ಯಾರಾದರೂ ಬಯಸಿದರೆ ಅವರನ್ನು ಮುಠ್ಠಾಳರು ಎಂದು ಹೇಳಬೇಕಾಗುತ್ತದೆ.

ಕಟ್ಟುನಿಟ್ಟಿನ ಕ್ರಮ ಎಂದರೆ ಏನು ಎಂದು ಗಮನಿಸಿದರೆ, ಕಳೆದ ಸಾಲಿನಲ್ಲಿ ಪೊಲೀಸರು ಯಾರ ಮೇಲೆ ಮೊಕದ್ದಮೆ ದಾಖಲಿಸಿದ್ದರೋ, ಅವರಿಗೆ ಸೆಕ್ಷನ್ 107ರ ಅನ್ವಯ ನೋಟಿಸ್ ನೀಡುವುದು ಮತ್ತು ತಹಸೀಲ್ದಾರರ ಕಚೇರಿಗೆ ಕರೆಸಿ ಅವರಿಂದ ಮುಚ್ಚಳಿಕೆಯನ್ನು ಬರೆಸಿಕೊಳ್ಳುವುದು ಆಗಿದೆ. ಕಳೆದ ಸಾಲಿನಲ್ಲಿ ಕೊಡಗಿನಲ್ಲಿ ನಡೆದಂತಹ ಘಟನೆಗಳು ಮತ್ತು ಪೊಲೀಸರು ತೆಗೆದುಕೊಂಡ ಕ್ರಮ ಈಗಲೂ ಪ್ರಶ್ನಾರ್ಹವೇ ಆಗಿದೆ. ಯಾರು ಗಲಭೆಗೆ ಕಾರಣಕರ್ತರಾಗಿದ್ದರೋ ಅವರ ಮೇಲೆ ಯಾವುದೇ ಕ್ರಮವನ್ನು ಜರುಗಿಸಿಲ್ಲ, ಸಣ್ಣಪುಟ್ಟ ಜಗಳಗಳನ್ನು ಮಾಡಿದವರ ಮೇಲೆ ಮೊಕದ್ದಮೆಯನ್ನು ದಾಖಲಿಸಿಕೊಂಡಿದ್ದಾರೆ. ಹಾಗೆಯೇ ಕಳೆದ ಸಾಲಿನಲ್ಲಿ ಪೊಲೀಸ್ ಇಲಾಖೆ ಪೂರ್ವಾಗ್ರಹಪೀಡಿತವಾಗಿ ವರ್ತಿಸಿತ್ತು ಎಂಬುದು ದಾಖಲೆಗಳನ್ನು ಪರಿಶೀಲಿಸಿದಾಗ ತಿಳಿದುಬಂದಿತ್ತು. ಹಾಗಿರುವಾಗ ಪೊಲೀಸರ ಈ ಕ್ರಮ ನಗೆಪಾಟಲಿನದು ಎನ್ನುವುದರಲ್ಲಿ ಸಂಶಯವಿಲ್ಲ.

ಗಲಭೆಯ ನಂತರ ಮೈಸೂರು ಜಿಲ್ಲಾಧಿಕಾರಿ ಶಿಖಾರವರಿಗೆ ಮೆಜಿಸ್ಟ್ರಿಯಲ್ ವಿಚಾರಣೆಗೆ ಆದೇಶವನ್ನು ನೀಡಲಾಗಿತ್ತು. ಗೃಹ ಸಚಿವರಾಗಿದ್ದ ಪರಮೇಶ್ವರ್‌ರವರು ವಿಧಾನಸಭೆಯಲ್ಲಿ ಕೊಡಗಿನ ಗಲಭೆಗೆ ಹೊರ ರಾಜ್ಯದಿಂದ ಬಂದವರು ಕಾರಣರಾಗಿದ್ದರು ಎಂಬ ಹೇಳಿಕೆಯನ್ನು ನೀಡಿದ್ದರು. ಗೃಹ ಸಚಿವರ ಈ ಹೇಳಿಕೆಗೆ ಯಾವುದೇ ಆಧಾರವಿರಲಿಲ್ಲ, ಹಾಗಾಗಿ ಅವರ ಹೇಳಿಕೆಯನ್ನು ಪುಷ್ಟೀಕರಿಸುವ ನಿಟ್ಟಿನಲ್ಲಿ ಶಿಖಾರವರು ಕೊಡಗಿನಲ್ಲಿ ಆದ ಗಲಭೆಗೆ ಕೇರಳ ರಾಜ್ಯದಿಂದ ಬಂದವರು ಕಾರಣ ಎಂಬ ವರದಿಯನ್ನು ರಾಜ್ಯ ಸರಕಾರಕ್ಕೆ ನೀಡಿದ್ದರು. ರಾಜ್ಯ ಸರಕಾರ ಈ ವರದಿಯನ್ನು ಅಂಗೀಕರಿಸಿತ್ತು. 'ಕೋಣ ಕರ ಹಾಕಿದೆ ಎಂದಾಗ ಕಟ್ಟಿಹಾಕು' ಎಂದಂತಹ ಪರಿಸ್ಥಿತಿ ಇದಾಗಿತ್ತು. ಹೊರ ರಾಜ್ಯದ ಒಬ್ಬನೇ ಒಬ್ಬ ವ್ಯಕ್ತಿಯ ಮೇಲೆ ಪೊಲೀಸರು ಮೊಕದ್ದಮೆಯನ್ನು ದಾಖಲಿಸಿಕೊಂಡಿಲ್ಲ, ಒಂದೇ ಒಂದು ವಾಹನವನ್ನು ಅವರು ವಶಪಡಿಸಿಕೊಂಡಿಲ್ಲ. ಹಾಗಿರುವಾಗ ಗೃಹ ಸಚಿವರು ಈ ಹೇಳಿಕೆಯನ್ನು ನೀಡಿದ್ದು ಯಾವ ಆಧಾರದಲ್ಲಿ ಎಂಬುದು ಯಾರಿಗೂ ತಿಳಿಯದು. ಆದರೀಗ ಜಿಲ್ಲೆಯ ಗಡಿಯಲ್ಲಿ ಪೊಲೀಸ್ ಚೆಕ್‌ಪೋಸ್ಟ್‌ಗಳನ್ನು ಅಳವಡಿಸಿ, ವಾಹನಗಳ ತಪಾಸಣೆ ಕಾರ್ಯ ನಡೆಯುತ್ತಿದೆ.

ಒಂದು ಕಡೆ ಭಯದ ವಾತಾವರಣ, ಮತ್ತೊಂದು ಕಡೆ ಕಾರ್ಯಕ್ರಮಕ್ಕೆ ಆಮಂತ್ರಣವೇ ಇಲ್ಲ, ಹೀಗಿರುವಾಗ ಕಾರ್ಯಕ್ರಮಕ್ಕೆ ಸಾರ್ವಜನಿಕರು ತೆರಳುವುದು ಸಂಶಯದ ವಿಚಾರ. ಜಿಲ್ಲಾಡಳಿತ ಮತ್ತು ರಾಜ್ಯ ಸರಕಾರ ಸಂಘ ಪರಿವಾರದ ಮತ್ತು ಬಿಜೆಪಿಯವರನ್ನು ತೃಪ್ತಿಪಡಿಸುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ ಎನ್ನುವುದಕ್ಕೆ ಸಾಕಷ್ಟು ಆಧಾರಗಳು ಸಿಗುತ್ತವೆ. ದಿನಾಂಕ 7ರ ಸಂಜೆ 4 ಗಂಟೆಯಿಂದಲೇ ಕೊಡಗು ಜಿಲ್ಲೆಯಲ್ಲಿ ಸೆಕ್ಷನ್ 144ನ್ನು



11ರ ಬೆಳಿಗ್ಗೆ 8 ಗಂಟೆಯವರೆಗೆ ಜಾರಿಗೊಳಿಸಲಾಗಿದೆ. ಯಾವುದೇ ಸಭೆ ಸಮಾರಂಭ, ಪ್ರತಿಭಟನೆ ಮಾಡಬಾರದು ಎಂದು ಪೊಲೀಸ್ ವಾಹನಗಳಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರ ಮಾಡಲಾಗುತ್ತಿದೆ.

ಆದರೆ 8ರಂದು ಬೆಳಿಗ್ಗೆ 11 ಗಂಟೆಯ ವೇಳೆಗೆ ಸುಮಾರು 2 ಗಂಟೆಗಳ ಕಾಲ ಜಿಲ್ಲಾಧಿಕಾರಿಗಳ ಸುತ್ತಮುತ್ತ ಸೆಕ್ಷನ್ 144ನ್ನು ಸಡಿಲಗೊಳಿಸಲಾಗಿತ್ತು, ಆ ವೇಳೆಯಲ್ಲಿ ಜಿಲ್ಲೆಯ ಬಿಜೆಪಿಯ ಶಾಸಕರುಗಳಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯರವರ ನೇತೃತ್ವದಲ್ಲಿ ಪ್ರತಿಭಟನೆಯನ್ನು ನಡೆಸಲಾಯಿತು. ಜನಸಾಮಾನ್ಯರಿಗೆ ಸೆಕ್ಷನ್ 144 ಜಾರಿಯಲ್ಲಿ ಇದ್ದರೂ, ಬಿಜೆಪಿಯವರು ಪ್ರತಿಭಟನೆ ನಡೆಸಿದ್ದು ಹೇಗೆ ಎಂಬ ಪ್ರಶ್ನೆ ಕಾಡಿತು. 2 ಗಂಟೆಗಳ ಕಾಲ ಸಡಿಲಗೊಳಿಸ ಲಾಗಿತ್ತು ಎಂದರೆ, ಬಿಜೆಪಿಯವರು ಪ್ರತಿಭಟನೆ ಮಾಡುವ ಉದ್ದೇಶದಿಂದ ಸಡಿಲಗೊಳಿಸಲಾಗಿತ್ತೇ ಎಂಬ ಪ್ರಶ್ನೆಯನ್ನು ಸಾರ್ವಜನಿಕರು ಕೇಳುತ್ತಿದ್ದರು. ಹಾಗಾಗಿ ರಾಜ್ಯ ಸರಕಾರವೇ ಇರಲಿ, ಜಿಲ್ಲಾಡಳಿತವೇ ಇರಲಿ ಬಿಜೆಪಿಯವರನ್ನು ಓಲೈಸಿಕೊಂಡೇ ಈ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಎಂಬುದೇ ಜನರ ವಿಚಾರಗಳಿಗೆ ಸ್ಪಂದಿಸದೆ, ಕೇವಲ ತಮಗೆ ನಿಗಮ ಮಂಡಳಿ ಮುಂತಾದ ಸ್ಥಾನಗಳು ದಕ್ಕಿಸಿಕೊಳ್ಳಲು ಎಂಬುದು ಮೇಲಿಂದ ಮೇಲೆ ಸಾಬೀತಾಗುತ್ತಿದೆ. ಜಿಲ್ಲಾ ಕಾಂಗ್ರೆಸ್ ಸಮಿತಿ ಎಲ್ಲಿಯೂ ಗಟ್ಟಿಯಾಗಿ ಬಿಜೆಪಿಯನ್ನು ಮತ್ತು ಅವರ ಚಟುವಟಿಕೆಯನ್ನು ವಿರೋಧಿಸಿ ಹೇಳಿಕೆಯನ್ನು ನೀಡಿಲ್ಲ. ಕೇವಲ 'ಟಿಪ್ಪು ಜಯಂತಿ ಸರಕಾರಿ ಕಾರ್ಯಕ್ರಮ. ಅದನ್ನು ನಾವು ಸ್ವಾಗತಿಸುತ್ತೇವೆ' ಎಂದಷ್ಟೇ ಹೇಳಿದ್ದಾರೆ. ಅಂದರೆ ಸರಕಾರದ ಕಾರ್ಯಕ್ರಮವಲ್ಲದಿದ್ದರೆ, ತಾವೂ ಕೂಡ ಬಿಜೆಪಿಯ ಜೊತೆ ಸೇರಿಕೊಂಡು, ಈ ಕಾರ್ಯ[…] ವಿರೋಧಿಸುತ್ತಿದ್ದೆವು ಎಂಬುದು ಅವರ […] ಮರ್ಮವಾಗಿದೆ.

ಜಿಲ್ಲಾಡಳಿತ ಕೇವಲ 200 ಆಮಂತ್ರಣ […] ಮುದ್ರಿಸುತ್ತಿದ್ದೇವೆ ಎಂದು ಹೇಳಿ, ಆಮಂತ್[…] ಇರುವವರು ಮಾತ್ರ ಕಾರ್ಯಕ್ರಮಕ್ಕೆ ಬರಬೇಕ[…] ಹೇಳಿದಾಗ, ಕಾಂಗ್ರೆಸ್ ಪಕ್ಷದಿಂದ ನಾವು ಕನ[…] ಮಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇ[…] ಹೇಳುವ ತಾಕತ್ತು ಕೂಡ ಕೊಡಗು ಜಿಲ್ಲಾ ಕಾ[…] ಯಾರಿಗೂ ಬರಲಿಲ್ಲ. ಮಾತ್ರವಲ್ಲ ಜಿಲ್ಲಾ […] ಸಮಿತಿಯೂ ಟಿಪ್ಪು ಜಯಂತಿಯ ವಿಚಾರದಲ್ಲಿ […] ಯಾರೊಬ್ಬರೂ ಕೂಡ ಹೇಳಿಕೆಗಳನ್ನು ನೀಡಬಾರದು […] ಹೇಳುವ ಮೂಲಕ ತಾವು ಕಮಲ ಕಾಂ[…] ಎಂಬುದನ್ನು ಸಾಬೀತುಮಾಡಿಕೊಂಡರು.

ಇಂತಹ ಕಾಟಾಚಾರದ ಕಾರ್ಯಕ್ರಮ […] ಎಂದು ಜಿಲ್ಲೆಯ ಜನತೆ ಕೇಳುವಂತಾಗಿದೆ. ಇನ್ನು […] ತಮ್ಮ ವಿರೋಧಿ ಎಂದು ಬಿಂಬಿಸುತ್ತಾ ಬಂದು[…] ಸಂಘಟನೆಯ ಎನ್.ಯು. ನಾಚಪ್ಪ ಕೊಡಗು[…] ಎಲ್ಲಾ ಗಡಿಯನ್ನು ಸೀಲ್ ಮಾಡಬೇಕು ಎಂಬ ಹೇ[…] ನೀಡಿದ್ದಾರೆ. ಇಂಡಿಯಾ-ಪಾಕಿಸ್ತಾನ್ ಗಡಿಯೇ ಇ[…] ಯಾರೂ ಪ್ರಶ್ನಿಸಿಲ್ಲ. ಇವರ ಮತ್ತೊಂದು ಸ[…] ಯುಕೋದವರು ರಾಜ್ಯ ಉಚ್ಚ ನ್ಯಾಯಾಲಯದ[…] ಜಯಂತಿ ಆಚರಿಸಬಾರದು ಎಂದು ರಿಟ್ ಅರ್ಜಿ[…] ಹಾಕಿದ್ದರು. ಆಗ ಕೊಡಗು ಜಿಲ್ಲೆಯ ಪರಿಸರವನ್ನು[…] ತೆಗೆದುಕೊಂಡು ಗುತ್ತಿಗೆದಾರರು 'ಇದು ಕೊಡಗಿ[…] ಗೌರವದ ಪ್ರಶ್ನೆಯಾಗಿದೆ. ಕೊಡವರ ವಿಚಾರವಾಗಿದ[…] ಇದಕ್ಕೆ ಧಾರಾಳವಾಗಿ ಹಣ ಸಹಾಯ ಮಾ[…] ಎಂದು ವಸೂಲಿ ಕಾರ್ಯಕ್ರಮವನ್ನು ಕೂಡ ಹ[…]

ಇದೇ ವ್ಯಕ್ತಿಗಳು ಕೊಡಗು ಜಿಲ್ಲಾ […] ಸಚಿವರಾದ ಎಂ.ಆರ್.ಸೀತಾರಾಂರವರ ಬಳಿ ತೆ[…] ಸರಕಾರ ಟಿಪ್ಪು ಜಯಂತಿಯನ್ನು ಆಚರಿಸಲು ತೆ[…] ನಿರ್ಧಾರ ಸರಿಯಲ್ಲ ಎಂದು ಅವರನ್ನು […] ತೆಗೆದುಕೊಂಡರು. ಆಗ ಸೀತಾರಾಂರವರು ರಾಜ್ಯ[…] ನಿಲುವನ್ನು ಸಮರ್ಥಿಸಿಕೊಳ್ಳುವುದನ್ನು ಬಿಟ್ಟ[…] ಜಯಂತಿಯನ್ನು ಸರಕಾರಿ ಅಧಿಕಾರಿಗಳಿಗೆ ಸೀ[…] ಮಾಡುತ್ತೇವೆ ಎಂದು ಹೇಳಿ, ಅವರನ್ನು ಕಳು[…] ಇಂತಹ ಮನಸ್ಥಿತಿಯು ಕಾಂಗ್ರೆಸಿಗರಿಂ[…] ನಿರೀಕ್ಷಿಸಬಹುದು.

■ ಬಿ.ಎನ್. ಮನು[…]

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಫೋನ್: 080–26676427

ಪಿ.ಲಂಕೇಶರ ಕೃತಿಗಳು


ಲೇಖನಗಳ ಸಂಗ್ರಹಗಳು	
ಟೀಕೆ–ಟಿಪ್ಪಣಿ 1	200.00
ಟೀಕೆ–ಟಿಪ್ಪಣಿ 2	200.00
ಟೀಕೆ–ಟಿಪ್ಪಣಿ 3	200.00
ಮರೆಯುವ ಮುನ್ನ–ಸಂಗ್ರಹ 1	150.00
ಮರೆಯುವ ಮುನ್ನ–ಸಂಗ್ರಹ 2	150.00
ಮರೆಯುವ ಮುನ್ನ–ಸಂಗ್ರಹ 3	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ–ಜೂಜು–ಮೋಜು!	150.00
ಸಾಹಿತಿ ಸಾಹಿತ್ಯ ವಿಮರ್ಶೆ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	100.00
ಪ್ರಸ್ತುತ	80.00
ಪಾಂಚಾಲಿ	150.00

ಕತೆ-ಕಾದಂಬರಿ	
ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	60.00
ಕೆರೆಯ ನೀರನು ಕೆರೆಗೆ ಚೆಲ್ಲಿ	5[…]
ಉಲ್ಲಂಘನೆ	8[…]

ಆತ್ಮಕಥನ	
ಹುಳಿಮಾವಿನ ಮರ	25[…]
ಲಂಕೇಶ್‌ರ ಕವನ ಸಂಗ್ರಹಗ[…]	
ನೀಲು ಕಾವ್ಯ –ಸಂಗ್ರಹ 1	15[…]
ನೀಲು ಕಾವ್ಯ –ಸಂಗ್ರಹ 2	15[…]
ನೀಲು ಕಾವ್ಯ –ಸಂಗ್ರಹ 3	20[…]
ಚಿತ್ರ ಸಮೂಹ	9[…]
ಅಕ್ಷರ ಹೊಸ ಕಾವ್ಯ	25[…]
ಪಾಪದ ಹೂಗಳು	6[…]
ಲಂಕೇಶ್‌ರ ನಾಟಕಗಳು	
ಬಿರುಕು	4[…]
ಸಂಕ್ರಾಂತಿ	4[…]
ತೆರೆಗಳು	5[…]
ಈಡಿಪಸ್ ಮತ್ತು ಅಂತಿಗೊನೆ	6[…]
ಟಿ. ಪ್ರಸನ್ನನ ಗೃಹಸ್ಥಾಶ್ರಮ	5[…]
ಗುಣಮುಖ	3[…]
ಕ್ರಾಂತಿ ಬಂತು ಕ್ರಾಂತಿ	4[…]


ಅನಿಲ್‌ಕುಮಾರ್ ಮತ್ತು ಉದಯ್

ಮಾಸ್ತಿಗುಡಿ ಟ್ರ್ಯಾಜಿಡಿ ಉಡಾಫೆಗೆ ಬಲಿ


ಸುಂದರ ಗೌಡ-ರವಿವರ್ಮ-ನಾಗಶೇಖರ್

ಮ್ಮ ನೀರಿಗೆ ಬಿದ್ನಿ ಅಂದ್ರೆ ಈಜು ಬರ್ಲೀ ಬಿಡ್ಲಿ ಸಲ ಮೇಲೆದ್ದೇ ಏಳ್ತೀವಿ. ಹಾಗೊಮ್ಮೆ ಸುಸ್ತಾಯ್ತು ೕನಾದ್ರೂ ಈಜೋದನ್ನ ನಿಲ್ಲಿಸಿಬಿಟ್ವೀ.... ಅಂದ್ರೆ ರನೇ ಸಲಕ್ಕೆ ಆ ಭಗವಂತನೇ ನಮ್ಮ ಕೈಹಿಡೀತಾನೆ. ನೆಮ್ಮದಿಯಾಗಿ ಮೇಲಕ್ಕೆ ಹೋಗಿಬಿಡೋದು...!

ಇದು ಸಾಹಸ ಕಲಾವಿದ ಅನಿಲ್‌ಕುಮಾರ್ ಕಾಪ್ಟರ್‌ಗೆ ಹತ್ತುವುದಕ್ಕೂ ಮುನ್ನ ತಿಪ್ಪಗೊಂಡನಹಳ್ಳಿ ಏರಿ ಮೇಲೆ ನಿಂತು ಸಿನಿಮಾ ಪತ್ರಕರ್ತರೆದುರು ದ ಕೊನೇ ಮಾತು. ಇನ್ನೇನು ಹಲಿಕಾಪ್ಟರ್ ೕಕಿಸ್ಬೇಕುವಷ್ಟರಲ್ಲಿ ಮತ್ತೆಂದೂ ಮಾತಿಗೆ ಸಿಗುವುದಿಲ್ಲವ್ರೋ ಾ ಇದೇ ಕೊನೆಯದೋ ಎಂಬಂತೆ ಸಾಹಸ ನಿರ್ದೇಶಕ ರ್ಮ ಮತ್ತು ನಿರ್ದೇಶಕ ನಾಗಶೇಖರ್ ಸೇರಿದಂತೆ ಯಾ ವಿಜಯ್ ಸಮ್ಮುಖದಲ್ಲೇ ಸಾಹಸಿಗರಾದ ಅನಿಲ್ ಉದಯ್ ನೆರೆದಿದ್ದ ಪತ್ರಕರ್ತರೊಂದಿಗೆ ಹರಟೆಗೆ ರೀತಿಯೇ ಮಾರ್ಮಿಕವಾಗಿತ್ತು.

ಮುಂದುವರಿದ ಅನಿಲ್ "ಈ ಸ್ವೀಕ್ವೆನ್ಸ್ ಬಗ್ಗೆ ನಿನ್ನ ಯಷ್ಟೇ ಡೈರೆಕ್ಟರ್ ಹೇಳಿದಾಗ ಖುಷಿಗೆ ಬಿದ್ದು ಓಕೆ ಅಂದುಬಿಟ್ವಿ. ಆಗ ನಮಗೆ ಡ್ಯೂಪ್ಸ್ ಇರಲ್ಲ ಮಾಡಬೇಕು ಅನ್ನೋದು ಗೊತ್ತಿರಲಿಲ್ಲ. 'ನೀವೇ ೕಕ್ರೀ... ಸ್ವಲ್ಪ ರಿಸ್ಕ್ ತಗೋಬೇಕಾಗುತ್ತೆ' ಅಂತ ಡೈರೆಕ್ಟರ್ ೕಖರ್ ಹೇಳಿದಾಗ ನಿಜಕ್ಕೂ ಭಯವಾಯ್ತು. ಡೀ ನಿದ್ದೇನೇ ಬರ್ಲಿಲ್ಲ. ಮೊದಲು ಭಯ ಹೋಗ್ಬೇಕು ಆಗಿದ್ದಾಗಲಿ ಅಂತ ಜಂಪ್ ಮಾಡಿಬಿಡಬೇಕು. ಹೆಲಿಕಾಪ್ಟರ್ ಬರೋದನ್ನೇ ಕಾಯ್ತಾ ಇದ್ದೆ..." ವರದಿಗಾರರನ್ನು ನೋಡಿ ನಕ್ಕವನು ಅನಿಲ್.

ಕ್ಕದಲ್ಲೇ ನಿಂತಿದ್ದ ಉದಯ್ ಏನೋ ಪ್ರಮಾದಕ್ಕೆ ತೆ ಭಯಕ್ಕೆ ಭುಜ ಕೊಟ್ಟವನಂತೆ "ಏನ್ರೀ ೕದು...? ಡೈರೆಕ್ಟರ್ ಕೈಲಿ ಸಿಕ್ಕಿ ಬಿದ್ದ ಮೇಲೆ ಕೊಳ್ಳೋದುಂಟಾ? ಹೆಲಿಕಾಪ್ಟರ್‌ನಿಂದ ಜಂಪ್ ಲೇಬೇಕು. ತುಂಬಾ ಭಯವಾಗ್ತಿದೆ ಸಾರ್, ೕಂಡರೆ ಜ್ವರ ಬಂದುಬಿಟ್ಟಿದೆ. ಬೇರೆ ಏನಾದ್ರೂ ಇದೆಯಾ ಅಂತ ಡೈರೆಕ್ಟರನ್ನು ಕೇಳಿದ್ಕೆ... ಪರ್ವಾಗಿಲ್ಲ ಬರೀ ಐವತ್ತು ಅಡಿ ಎತ್ತರ ಅಷ್ಟೇ... ಆರಾಮಾಗಿ ಮಾಡ್ಬೌದು ಅಂದು ಬಿಟ್ರು... ನೋಡೋಣ... ಮೇಲೆ ಭಾರಿ ಹಾಕಿ ಜಂಪ್ ಮಾಡ್ತೀನಿ...." ನು ಮತ್ತೊಬ್ಬ ಸಾಹಸಿಗ ಉದಯ್. ಇನ್ನೇನು ಬ್ಬರೂ ಮುಳುಗಿ ಹೆಣವಾಗಲು ಹೆಚ್ಚೆಂದರೆ ಹತ್ತೋ ದೋ ನಿಮಿಷ ಬಾಕಿಯಿತ್ತಷ್ಟೇ...!

ಹೆಲಿಕಾಪ್ಟರ್ ಮಂಗಾಟ!

ನ್ನಡ ಚಿತ್ರರಂಗದ ಪಾಲಿಗೆ ಅದು ನವೆಂಬರ್ 7 ರ ಸೋಮವಾರ. "ಎಲ್ಲವೂ ಸರಿಯಾಗೇ ವ್ಯವಸ್ಥೆ ದ್ದೆವು. ಸುರಕ್ಷತಾ ಕ್ರಮಗಳನ್ನೇ ಕೈಗೊಂಡಿದ್ದರೂ ಗಳಿಗೆಯಲ್ಲಿ ಮೋಟಾರ್ ಬೋಟ್ ಕೈಕೊಟ್ಟಿದ್ದರಿಂದ ಮತ ಸಂಭವಿಸಿತು. ಇದೊಂದು ಅನಿರೀಕ್ಷಿತ ..." ಎಂದೆಲ್ಲಾ ಹಲುಬುತ್ತಿದ್ದಾನೆ ಮಾಸ್ತಿಗುಡಿಯ ರ್ ನಾಗಶೇಖರ್. ತಾವರೆಕೆರೆ ಪೊಲೀಸ್ ಸಬ್ ಕ್ಟರ್ ರವಿ ಈಗಾಗಲೇ ನಿರ್ಮಾಪಕ ಸುಂದರ ಪಿ. ನ್ನು ಹಿಡಿದು ಲಾಕಪ್ಪಿಗೆ ದಬ್ಬಿದ್ದಾಗಿದೆ. ನಿರ್ದೇಶಕ ರಾತ್ರಿ ಊರು ಬಿಟ್ಟು ಪರಾರಿ ಆಗಿದ್ದಾನೆ. ಸಾಹಸ ಶಕ ರವಿವರ್ಮ, ಸಹ ನಿರ್ದೇಶಕ ಸಿದ್ದು ಯೂನಿಟ್ ಜರ್ ಭರತ್ ಸೇರಿದಂತೆ ಮಾಸ್ತಿಗುಡಿ ದುರಂತಕ್ಕೆ ಗಾರರೆಲ್ಲರೂ ಪೊಲೀಸರ ಕಣ್ತಪ್ಪಿಸಿ ಒಂದೋ ತರಾಗಿದ್ದಾರೆ ಅಥವಾ ಊರು ಬಿಟ್ಟೇ ಯಾಗಿದ್ದಾರೆ.

ವರೆ ಏನೇನೂ ತಪ್ಪಿಲ್ಲದೆ ಯಾರದೋ ತಪ್ಪಿಗೆ ವಾಗಿ ತಲೆದಂಡವೆಂಬಂತೆ ಬಲಿಯಾದ ಸಾಹಸ ರಾದ ಅನಿಲ್‌ಕುಮಾರ್ ಮತ್ತು ಉದಯ್ ರಾಘವ್ ಾರವಾಗಬೇಕಾಯ್ತು. ಅನಿಲ್‌ನ ಪತ್ನಿ ಪುಟ್ಟ ಪುಟ್ಟ ಮಕ್ಕಳು, ಅವರ ನಿಷ್ಕಲ್ಮಷ ನಗುವನ್ನು ಕಂಡ ಾದರೂ ಹೊಟ್ಟೆ ಉರಿಯಲೇಬೇಕು. 'ಮಾಸ್ತಿಗುಡಿ' ಾ ವಿಜಿಯ ಇತ್ತೀಚಿನ ಅದ್ದೂರಿ ಚಿತ್ರಗಳಲ್ಲೊಂದು. ಗೌಡ ಎಂಬ ರಿಯಲ್ ಎಸ್ಟೇಟ್ ಕುಳ ಮ್ಮಿ ಹತ್ತು ಕೋಟಿ ಸುರಿದು ನಾಗಶೇಖರ್ ನದಲ್ಲಿ ಚಿತ್ರ ನಿರ್ಮಾಣಕ್ಕಿಳಿದಾಗ ಸಹಜವಾಗೇ ಗೆ ನಿರೀಕ್ಷೆಗಳಿದ್ದವು. ಈತನಕ ಪ್ರೇಮ, ಪ್ರೀತಿಯಂಥ ಸಿನಿಮಾ ಮಾಡಿಕೊಂಡಿದ್ದ ನಾಗಶೇಖರ್ ತೀರ ಾಗಿ ಆಕ್ಷನ್ ಚಿತ್ರವೊಂದನ್ನು ಮಾಡುತ್ತಿದ್ದಾರೆಂದಾಗ ಬ್ಬರೂ ಇದೊಂದು ವಿನೂತನ ಚಿತ್ರವಾಗುತ್ತದೆ ಹುಬ್ಬೇರಿಸಿದ್ದರು.


ಹಿಂದೆ ಅದ್ದೂರಿಯಾಗೇ ಮುಹೂರ್ತ ಕಂಡ ಗುಡಿ'ಯ ಕ್ಲೈಮ್ಯಾಕ್ಸ್ ಅಂದರೆ ಕೊನೆಯ ಸನ್ನಿವೇಶದ ಾವಿದ್ದದ್ದು ನವೆಂಬರ್ 7 ರ ಸೋಮವಾರದಂದು. ಾರೊಂದನ್ನು ಹೊಕ್ಕುವ ಹೀರೋನನ್ನು ವಿಲನ್ ಗಳು ಬೆನ್ನಟ್ಟುವ ದೃಶ್ಯ, ಹೆಲಿಕಾಪ್ಟರ್‌ನಲ್ಲಿ ಾಗಲೆತ್ನಿಸುವ ದುಷ್ಕರ್ಮಿಗಳನ್ನು ಹೀರೋ ಬೆನ್ನಟ್ಟಿ ಸುವ ದೃಶ್ಯಕ್ಕೆ ತಕ್ಕಂತೆ ಸ್ಟಂಟ್ ಡೈರೆಕ್ಟರ್ ರವಿವರ್ಮ ವಿಧದ ಸ್ಟಂಟ್ ಒಂದನ್ನು ಹೆಣೆದಿದ್ದರಂತೆ. ನೆಂದರೆ ರವಿವರ್ಮ ಆಗಲಿ, ನಿರ್ದೇಶಕ ನಾಗಶೇಖರ್ ಆಗಲಿ ನುರಿತ ಸಾಹಸ ತಜ್ಞರಲ್ಲ. ಹೆಚ್ಚೆಂದರೆ ಸಣ್ಣಪುಟ್ಟ ಹೊಡೆದಾಟಗಳನ್ನು ಸಂಯೋಜಿಸಬಹುದು. ಮೂವತ್ತೋ ಐವತ್ತೋ ಅಡಿ ಎತ್ತರದಿಂದ ಹೆಲಿಕಾಪ್ಟರ್ ನೆಗೆದು ಅಂಥಾದ್ದೊಂದು ಸ್ಟಂಟ್ ಅನ್ನು ಯಶಸ್ವಿಯಾಗಿ ಸೆರೆಹಿಡಿಯಬಲ್ಲಂಥ ಪರಿಣಿತಿಯಾಗಲಿ ಅನುಭವವಾಗಲಿ ಮಾಸ್ತಿಗುಡಿ ತಂಡಕ್ಕಿರಲಿಲ್ಲ.

ಜಂಪ್ ಜಂಪ್

ಆದರೆ ಅನುಭವವಿಲ್ಲದ್ದನ್ನು ಸ್ಟಂಟ್ ಡೈರೆಕ್ಟರ್ ರವಿವರ್ಮ ಆಗಲಿ ನಿರ್ದೇಶಕ ನಾಗಶೇಖರ್ ಆಗಲಿ ಹೇಳಿಕೊಳ್ಳಲಿಲ್ಲ. ಹೇಗೂ ಧುಮುಕೋದು ನೀರಿಗೆ ತಾನೆ? ಮೇಲಿಂದ ನೀರಿಗೆ ಬಿದ್ದರೆ ಯಾರಿಗೇನು ಹಾನಿಯಾಗಲು ಸಾಧ್ಯವೆಂಬ ಉಡಾಫೆ ನಿರ್ಲಕ್ಷ್ಯ ಬೇಜವಾಬ್ದಾರಿತನ ಮುಂದೆ ಇಬ್ಬರು ನಿಷ್ಪಾಪಿ ನಟರ ಪ್ರಾಣಕ್ಕೆ ಎರವಾಗಲಿದೆಯೆಂಬ ನಿರೀಕ್ಷೆ ತಾನೇ ಯಾರಿಗಿತ್ತು? ಹೆಲಿಕಾಪ್ಟರ್ ರೆಡಿಯಾಗಿತ್ತು. ಆದರ ಪೈಲಟ್ ಹೆಲಿಕಾಪ್ಟರ್ ಹಾರಿಸುತ್ತಾನೆ. ಆದರಿಂದ ವಿಲನ್‌ಗಳಿಬ್ಬರು ನೀರಿಗೆ ನೆಗೆಯುವುದನ್ನು ಕ್ಯಾಮೆರಾ ಸೆರೆಹಿಡಿಯಲು ಏನು ಮಹಾಕಷ್ಟ? ಅಷ್ಟಕ್ಕೂ ಮೇಲಿಂದ ನೆಗೆಯುವವರಿಬ್ಬರೂ ಜಿಮ್‌ನಲ್ಲಿ ಪಳಗಿದ 'ಬಾಡಿ'ಗಳೇ ಆದ್ದರಿಂದ ಬೇಕಾದ ಡ್ಯೂಪ್‌ಗಳು, ಅವರ ಭತ್ಯೆ ಡ್ಯೂಪ್‌ಗಳ ಮಾಸ್ಟರ್‌ನ ಸಂಬಳ, ಅದಕ್ಕೆ ಹಿಡಿಯುವ ಎಕ್ಸ್‌ಟ್ರಾ ಟೈಮು, ಖರ್ಚು, ಎಲ್ಲವನ್ನೂ ಉಳಿಸಿದರಾಯ್ತೆಂಬುದು ನಿರ್ದೇಶಕ ನಾಗಶೇಖರ್‌ನ ಕಂಜೂಸಿತನ. ಹೇಗೂ ಹೆಲಿಕಾಪ್ಟರ್ ಬಳಸುತ್ತೇವಾದ್ದರಿಂದ ಅದಕ್ಕೆ ಬೇಕಾದ ಅನುಮತಿ, ತಿಪ್ಪಗೊಂಡನಹಳ್ಳಿ ಜಲಾಶಯದ ಚಿತ್ರೀಕರಣಕ್ಕೆಂದು ವಿಶೇಷ ಪರವಾನಗಿ ಎಲ್ಲವನ್ನೂ ಹದಿನೈದು ದಿನಗಳ ಮುನ್ನವೇ ನಾಗಶೇಖರ್ ವ್ಯವಸ್ಥೆಗೊಳಿಸಿದ್ದ. ಆದರೆ ಜಲಮಂಡಳೀ ಅಷ್ಟು ಸುಲಭಕ್ಕೆ ಶೂಟಿಂಗ್‌ಗೆ ಅನುಮತಿ ನೀಡಲಿಲ್ಲ.

ಏರಿಯಲ್ ಶೂಟಿಂಗ್ ಮಾಡುವುದು ನಿಷಿದ್ಧ ಎಂದೇ ಅನುಮತಿ ನಿರಾಕರಿಸಿತು. ಆದರೆ ಸಿನಿಮಾ ಕಿಲಾಡಿಗಳು ಬಿಡಬೇಕಲ್ಲ. ಆಯ್ತು ನಾವು ಏರಿಯಲ್ ಶೂಟಿಂಗ್ ಮಾಡಲ್ಲ, ಆದರೆ ಸುಮ್ಮನೆ ಹೆಲಿಕಾಪ್ಟರ್ ನಿಲ್ಲಿಸಿಕೊಂಡಿರ್ತೀವಿ ಅಷ್ಟೇ. ಅದನ್ನೇ ನೆಲದ ಮೇಲಿದ್ದಂತೆ ಚಿತ್ರೀಕರಣ ಮಾಡ್ತೀವಿ ಎಂದು ಕತೆ ಹೊಡೆದು ಹೇಗೋ ಜಲಮಂಡಳಿಯ ಅಧಿಕಾರಿಗಳನ್ನು ಒಪ್ಪಿಸಿದ್ದರು. ಸೋಮವಾರ ಅಪರಾಹ್ನ ಹನ್ನೆರಡರವರೆಗೂ ಜಲಮಂಡಳಿಯ ಅಧಿಕಾರಿಗಳು, ಅಗ್ನಿಶಾಮಕ ದಳದ ಸಿಬ್ಬಂದಿ ಎಲ್ಲರೂ ಹಾಜರಿದ್ದರು. ಬಹುಶಃ ಇಷ್ಟೇ ಇರಬೇಕೆಂದು ಕಾದು ಸುಸ್ತಾದ ಅವರೆಲ್ಲರೂ ಅಪರಾಹ್ನ 12ಕ್ಕೆ ವಾಪಸ್ಸಾಗಿದ್ದಾರೆ.

ನಿರ್ದೇಶಕ ನಾಗಶೇಖರ್ ಆಗಲಿ, ಸ್ಟಂಟ್ ಡೈರೆಕ್ಟರ್ ಆಗಲಿ ಇಂಥಾದೊಂದು ಸ್ಟಂಟ್ ಚಿತ್ರೀಕರಿಸಲು ಬೇಕಾದ ಸಿದ್ಧತೆ, ಮುನ್ನೆಚ್ಚರಿಕೆ, ಅಧ್ಯಯನ ಏನೊಂದಕ್ಕೂ ತಲೆಕೆಡಿಸಿಕೊಳ್ಳಲಿಲ್ಲ. ಎಲ್ಲಕ್ಕೂ ಮುಖ್ಯವಾಗಿ



ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಸದ್ಯ ಎಷ್ಟು ಅಡಿ ನೀರಿದೆಯೆಂಬುದೇ ಯಾರಿಗೂ ಗೊತ್ತಿರಲಿಲ್ಲ. ಇಂತಿಷ್ಟು ಅಡಿ ನೀರಿಗೆ ಇಂತಿಷ್ಟು ತೂಕದ ಆಸಾಮಿಯೊಬ್ಬ ಇಂತಿಷ್ಟು ಅಡಿ ಎತ್ತರದಿಂದ ಬಿದ್ದರೆ ಆತ ಎಷ್ಟು ಆಳಕ್ಕೆ ಅಪ್ಪಳಿಸಬಲ್ಲ ಹಾಗೆ ಅಪ್ಪಳಿಸುವ ಜಾಗದಲ್ಲಿ ನೀರಿನ ಆಳವೆಷ್ಟು? ಅಲ್ಲಿಂದ ಬಿದ್ದವನನ್ನು ಎಳೆದು ಬೋಟಿಗೆ ಹಾಕಿಕೊಳ್ಳಲು ಎಷ್ಟು ಅಂತರದಲ್ಲಿ ಬೋಟು ಅಥವಾ ತೆಪ್ಪಗಳಿರಬೇಕು ಇತ್ಯಾದಿ ಯಾವುದರ ಬಗ್ಗೆಯೂ ಯಾರೂ ತಲೆಕೆಡಿಸಿಕೊಳ್ಳಲಿಲ್ಲ.

ನೋಡುನೋಡುತ್ತಲೇ...!

ಒಟ್ಟಾರೆ ಹೆಲಿಕಾಪ್ಟರ್‌ನಿಂದ ನೀರಿಗೆ ಬಿದ್ದರೆ ಯಾರೂ ಸಾಯಲು ಸಾಧ್ಯವಿಲ್ಲವಿಲ್ಲ; ಹೇಗೂ ತೆಪ್ಪ ಬೋಟುಗಳ ಜನ ಇದ್ದೇ ಇರುತ್ತಾರೆ ನೋಡಿಕೊಂಡರಾಯಿತೆಂಬುದು ತಲೆತಿರುಕ ನಾಗಶೇಖರ್‌ನ ಹುಚ್ಚಾಟ. ಉಡಾಫೆಯ ಪರಮಾವಧಿ ಎಂಥದ್ದೆಂದರೆ ಕನಿಷ್ಠ ಬೋಟುಗಳಾದರೂ ನೆಟ್ಟಗಿವೆಯಾ, ಅದು ಸುಸಜ್ಜಿತ ಸ್ಥಿತಿಯಲ್ಲಿದೆಯಾ? ಅದರ ಚಾಲಕನೆಲ್ಲಿ? ಜೊತೆಗೆ ಈಜುಗಾರರಿದ್ದಾರಾ? ಇದ್ಯಾವುದೂ ಚಿತ್ರತಂಡಕ್ಕೆ ಮುಖ್ಯವಾಗಲೇ ಇಲ್ಲ. ಹೇಗೂ ನಡೆದು ಹೋಗುತ್ತದೆಯೆಂಬುದು ರವಿವರ್ಮನ ಉಡಾಫೆ. ಇದ್ಯಾವುದರ ಪರಿವೆಯೇ ಇಲ್ಲದೆ ಹೆಲಿಕಾಪ್ಟರ್ ಏರಿದ್ದಾರೆ ಸಾಹಸಿಗರಾದ ಉದಯ್ ಮತ್ತು ಅನಿಲ್‌ಕುಮಾರ್. ಈ ಪೈಕಿ ಅನಿಲ್‌ಗೆ ಅಷ್ಟಿಷ್ಟು ಈಜು ಬರುತ್ತಿತ್ತಾದರೂ ಉದಯ್‌ಗೆ ಏನೆಂದರೆ ಏನೂ ಗೊತ್ತಿರಲಿಲ್ಲ. ಸ್ಟಂಟ್ ಸಹಜವಾಗಿ ಮೂಡಿ ಬರಬೇಕು ಮತ್ತು ಡ್ಯೂಪ್‌ಗಳಿಗೆ ಹಿಡಿಯುವ ಖರ್ಚು ತಗ್ಗಿ ಅದರಲ್ಲಿ ಚೂರುಪಾರು ತಮಗೂ ಬಾಟಾ ರೂಪದಲ್ಲಿ ಬಂದರೆ ಲಾಭವೆಂಬುದು ಅವರಿಬ್ಬರ ನಿರೀಕ್ಷೆಯಾಗಿತ್ತು.


ಮಧ್ಯಾಹ್ನ ಎರಡೂವರೆಯ ಹೊತ್ತಿಗೆ ಶೂಟಿಂಗ್ ಶುರುವಾಗಿದೆ. ಪ್ರಾರಂಭದಲ್ಲಿ ಕಲಾವಿದರಿಗೆ ಮೂವತ್ತು ಅಡಿ ಎತ್ತರದಿಂದ ನೆಗೆಯಲು ಪುಸಲಾಯಿಸಲಾಗಿತ್ತಾದರೂ ಹೆಲಿಕಾಪ್ಟರ್ ಐವತ್ತು ಅಡಿ ದಾಟಿ ಹೆಚ್ಚೂಕಮ್ಮಿ ಎಪ್ಪತ್ತು ಅಡಿಯಷ್ಟು ಎತ್ತರಕ್ಕೇರಿದೆ. ಇದು ಸ್ಟಂಟ್ ಭಯಾನಕವಾಗಿ ಮೂಡಿಬರಲಿ ಎಂಬ ಸಾಹಸ ನಿರ್ದೇಶಕನ ಹುಂಬ ದುರಾಶೆ. ಈಗಿರುವ ಗ್ರಾಫಿಕ್ಸ್ ತಂತ್ರಜ್ಞಾನದ ಪ್ರಕಾರ ಎಷ್ಟೇ ಹತ್ತಿರದಿಂದ ನೆಗೆದಿದ್ದರೂ ಅದನ್ನು ಎಷ್ಟೋ ಎತ್ತರದಿಂದ ನೆಗೆದಂತೆ ಮಾಡಬಹುದು. ಇದರ ಪರಿಜ್ಞಾನವೇ ಇಲ್ಲದ ನಾಗಶೇಖರ್ ಮತ್ತು ರವಿವರ್ಮ ಹೆಲಿಕಾಪ್ಟರ್ ಟೇಕಾಫ್ ಆಗುತ್ತಿದ್ದಂತೆ ಎತ್ತರ, ಇನ್ನೂ ಎತ್ತರವೆಂಬಂತೆ ಕೆಳಗಿನಿಂದ ಸನ್ನೆ ಮಾಡುತ್ತಲೇ ಇದ್ದರು. ಹೆಲಿಕಾಪ್ಟರ್ ಮೇಲೇರುತ್ತಲೇ ಹೋಯಿತು. ನಿಗದಿತ ಸ್ಥಳಕ್ಕೆ ಬಂದಿದ್ದೇ ಆಕ್ಷನ್ ಎಂಬಂತೆ ಕೆಳಗಿನಿಂದ ಬಣ್ಣದ ಬಟ್ಟೆ ಬೀಸಲಾಯಿತು. ಮೊದಲು ಅನಿಲ್ ನಂತರ ಉದಯ್ ಒಬ್ಬರನಂತರ ಒಬ್ಬರಂತೆ ನೀರಿಗೆ ಧುಮುಕಿದರು. ಅವರ ಬೆನ್ನಲ್ಲೇ ವಿಜಿಯೂ ನೀರಿಗೆ ಬಿದ್ದ. ಆದರೆ ವಿಜಿಗೆ ರಕ್ಷಾ ಕವಚವಿತ್ತು ಮತ್ತು ಅನಿಲ್, ಉದಯ್ ಬರೀ ಮೈಯಲ್ಲೇ ಧುಮುಕಬೇಕಿತ್ತಲ್ಲ.

ಬಹುಶಃ ಮೂವತ್ತೋ ನಲವತ್ತೋ ಅಡಿ ಎತ್ತರದಿಂದ ಧುಮುಕಿದ್ದರೆ ಆ ಪಾಟಿ ವೇಗದಲ್ಲಿ ನೀರಿಗೆ ಅಪ್ಪಳಿಸುತ್ತಿರಲಿಲ್ಲ. ಇಬ್ಬರೂ ಆಜಾನುಬಾಹುಗಳು. ಪ್ರತಿಯೊಬ್ಬರೂ ನೂರು ಕೆಜಿಗಿಂತ ಹೆಚ್ಚು ತೂಗುವ ಸದೃಢರು. ದುರಂತವೆಂದರೆ ಬೇರೆಲ್ಲ ಕೆರೆ- ಜಲಾಶಯಗಳಿಗೂ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೂ ಇರುವ ವ್ಯತ್ಯಾಸವನ್ನೇ ಚಿತ್ರತಂಡ ಲೆಕ್ಕ ಹಾಕಿರಲಿಲ್ಲ. ನೀರಿಗೆ ಧುಮುಕುವ ವಿಷಯವನ್ನೇ ಮುಚ್ಚಿಟ್ಟಿದ್ದರಿಂದಾಗಿ ಜಲಮಂಡಳಿಯವರೂ ಅದನ್ನು ಹೇಳಲಿಲ್ಲ. ಹಕೀಕತ್ತೇನೆಂದರೆ ತಿಪ್ಪಗೊಂಡನಹಳ್ಳಿ ಕೆರೆಯು ಮೇಲುನೋಟಕ್ಕೆ ಕಾಣುವಷ್ಟು ನೀರಾಗಲಿ ಆಳವಾಗಲಿ ಅದರ ಒಳಕ್ಕಿಲ್ಲ. ಐದೋ ಆರೋ ಅಡಿ ನೀರಿರಬಹುದಷ್ಟೇ. ಅದರಿಂದಾಚೆಗೇನಿದ್ದರೂ ಹೂಳು. ಅದು ಅಂತಿಂಥಾ ಹೂಳಲ್ಲ. ಕಳೆದ ಹತ್ತಾರು ವರ್ಷಗಳಿಂದ ಬಿದ್ದ ಮಳೆ, ಹರಿದ ಕೊಚ್ಚೆ ಸುತ್ತಮುತ್ತಲ ಕೈಗಾರಿಕೆಗಳ ಕಸ, ಕೆಸರು ಎಲ್ಲವೂ ಸೇರಿಕೊಂಡು ಅಕ್ಷರಶಃ ತಿಪ್ಪೆಗುಂಡಿ ಹಳ್ಳವಾದ ಈ ಜಲಾಶಯದಲ್ಲಿ ಏನಿಲ್ಲವೆಂದರೂ ಮೂವತ್ತರಿಂದ ಐವತ್ತಡಿಯ ತನಕ ಹೂಳೇ ತುಂಬಿಹೋಗಿದೆ.

ಎಪ್ಪತ್ತು ಅಡಿ ಮೇಲಿಂದ ಧುಮುಕಿದ ವಿಜಿಗೆ ಜೀವರಕ್ಷಕ ಗಾರ್ಡ್ ಇತ್ತಾದ್ದರಿಂದ ಅಪ್ಪಳಿಸಿದ್ದ ವೇಗದ ತೀವ್ರತೆ ಕಮ್ಮಿಯಿತ್ತು. ಆದರೆ ಅನಿಲ್ ಮತ್ತು ಉದಯ್ ಇಬ್ಬರೂ ಬರಿ ಮೈಯಲ್ಲಿದ್ದರಲ್ಲ; ಮೇಲಿಂದ ಬಿದ್ದ ರಭಸಕ್ಕೆ ನೇರವಾಗಿ ನೆಲದ ಹೂಳಿಗೇ ಅಪ್ಪಳಿಸಿಬಿಟ್ಟರು. ಹೂಳಿಗೆ ತಕ್ಕಂತೆ ಮೀನುಗಾರರು ಹಾಕಿದ್ದ ಬಲೆಯೂ ಅವರನ್ನು ಮಿಸುಕಾಡಲು ಬಿಡಲಿಲ್ಲ. ಮೇಲಿಂದ ಬಿದ್ದವರು ಮತ್ತೆ ಮೇಲೇಳಲೇ ಇಲ್ಲ. ಒಂದಷ್ಟು ದೂರ ಈಜುತ್ತಾ ಬಂದರೆಂದೂ ಮೋಟಾರು ಬೋಟುಗಳು ಕೈಕೊಟ್ಟತೆಂದೂ ಏನೇ ಕತೆ ಹೊಡೆಯಬಹುದು. ಆದರೆ ಮೋಟಾರು ಬೋಟುಗಳು ಸುಸ್ಥಿತಿಯಲ್ಲಿವೆಯಾ, ಅವು ಕೆಲಸಕ್ಕೆ ಬರುತ್ತವೆಯಾ ಎಂದು ಪರೀಕ್ಷಿಸುವ ತಾಳ್ಮೆ ವ್ಯವಧಾನವಾದರೂ ಯಾರಿಗಿತ್ತು?'

ಪ್ರತಿಯೊಬ್ಬರಿಗೂ ಪುಡಿಕಾಸಿನಲ್ಲಿ ಕೆಲಸ ಸಾಧಿಸಬೇಕು, ಸಾಧ್ಯವಾದಷ್ಟು ಪುಡಿಕಾಸು ಉಳಿಸಬೇಕು, ಇನ್ನು ಹೆಣವಾದ ಉದಯ್ ಮತ್ತು ಅನಿಲ್‌ಗಾದರೂ ದುಡ್ಡೇ ತಾನೇ ಜೀವನಾಧಾರ. ಯಾರೋ ಡ್ಯೂಪ್‌ಗಳಿಗೆ ಕೊಡುವ ಕಿಂಚಿತ್ತಾದರೂ ತಮಗೆ ದಕ್ಕಬಹುದೆಂಬ ಆಸೆ. ಹಣವೆಂದರೆ ಹೆಣವೂ ಬಾಯಿಬಿಡುವಲ್ಲಿ ಪ್ರಾಣದ ಬೆಲೆ ಕಟ್ಟಿಕೊಂಡು ಯಾರಿಗೇನಾಗಬೇಕು?

■ ರಾ. ಸೋಮನಾಥ್



ನಂಜನಗೂಡು: ದಿಕ್ಕುದಿಶೆ ಇಲ್ಲದ ಸ್ವಾಭಿಮಾನಿ ಸಮಾವೇ





ನಂಜನಗೂಡಿಗೆ ಇದು ಸಮಾವೇಶದ ಸುಗ್ಗಿ. ಕೆಲ ದಿನಗಳ ಹಿಂದಷ್ಟೇ ಸಿದ್ದರಾಮಯ್ಯನವರ ಮುಕ್ಕಾಲು ಭಾಗ ಸಂಪುಟವೇ ಆದ್ಧೂರಿಯಾಗಿ ಸಮಾವೇಶ ನಡೆಸಿದ ಬೆನ್ನಿಗೇ ಅದಕ್ಕೆ ಸೆಡ್ಡು ಹೊಡೆಯುವಂತೆ ಮಾಜಿ ಮಂತ್ರಿ ವಿ.ಶ್ರೀನಿವಾಸ್ ಪ್ರಸಾದ್ ಸ್ವಾಭಿಮಾನದ ಹೆಸರಲ್ಲಿ ಸಮಾವೇಶ ನಡೆಸಿ ಮುಯ್ಯಿ ತೀರಿಸಿಕೊಂಡಿದ್ದಾರೆ. ಆ ಮೂಲಕ ಉಪಚುನಾವಣೆಗೆ ತಾನು ಸಿದ್ಧ ಅಂತ ಸಿದ್ದು ಸರ್ಕಾರದ ಸವಾಲು ಸ್ವೀಕರಿಸಿದ್ದಾರೆ. "ಐದು ವರ್ಷ ಅಧಿಕಾರ ನಡೆಸುವಂತೆ ಆರಿಸಿ ಕಳಿಸಿದ್ದ ಜನರ ವಿಶ್ವಾಸವನ್ನು ಅನಿವಾರ್ಯ ಕಾರಣಗಳಿಂದ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಅದಕ್ಕೋಸ್ಕರ ನನ್ನ ಮೇಲೆ ಕ್ಷಮೆ ಇರಲಿ" ಅಂತ ತಮ್ಮ ಯಥಾಶೈಲಿಯ ಮುತ್ಸದ್ಧಿತನದಲ್ಲೇ ಶ್ರೀನಿವಾಸ್ ಪ್ರಸಾದ್ ಮತನಾಡಿದ್ದು ಅವರೊಳಗಿನ ಚಾಣಾಕ್ಷ ರಾಜಕಾರಣಿಯನ್ನು ಹೊರಗೆಡವುವಂತಿತ್ತು.

ಸಿದ್ದು ಅಥವಾ ಕಾಂಗ್ರೆಸ್ ಸರ್ಕಾರದ ವಿರುದ್ಧ ತೊಡೆತಟ್ಟಲು ತನ್ನ ಸ್ವಕ್ಷೇತ್ರದ ಜನತೆಯ ಕೈಗಳನ್ನಷ್ಟೇ ಬಳಸಿಕೊಳ್ಳಲಿಲ್ಲ, ಸದ್ದು ಜೋರಾಗಿ ಕೇಳಿಸಲಿ ಎಂಬ ಕಾರಣಕ್ಕೆ ಅಕ್ಕಪಕ್ಕದ ಊರುಗಳ ಜನರ ಕೈಗಳನ್ನೂ ಬಳಸಿಕೊಂಡಿದ್ದು ವಿಶೇಷ. ಅಂದರೆ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು, ನರಸೀಪುರ, ಮೈಸೂರು ಹೀಗೆ ತಮ್ಮ ಪ್ರಭಾವವಿರುವ ನಾನಾ ಕಡೆಯಿಂದ ಸಪ್ಪೆ, ಬೆಪ್ಪು, ಸೇರು, ಪಾವು ಚಟಾಕು ಮುಖಂಡರ ಕೈಗಳನ್ನು ಎಳೆತಂದಿದ್ದರು. ಆದರೆ ಪ್ರಸಾದ್ ಸಚಿವಗಿರಿಯಿಂದ ಆಚೆಗೆಸೆಯಲ್ಪಟ್ಟಾಗ ಅವರನ್ನು ಎಡತಾಕಿ, ಮೊಸಳೆ ಕಣ್ಣೀರು ಸುರಿಸಿದ್ದ ಬಿಜೆಪಿಯ ಕಲಿಗಳ್ಯಾರು ಅತ್ತ ಸುಳಿಯಲಿಲ್ಲ.

ಹೇಳಿಕೇಳಿ ಅದು ಸ್ವಾಭಿಮಾನಿ ಸಮಾವೇಶ. ಮಂತ್ರಿಗಿರಿ ತಪ್ಪಿದ ಕ್ಷುಲ್ಲಕ ಕಾರಣವನ್ನೇ 'ಸ್ವಾಭಿಮಾನ'ದ ಪ್ರಶ್ನೆಯಾಗಿಸಿಕೊಂಡ ಶ್ರೀನಿವಾಸ ಪ್ರಸಾದ್‌ರ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು ಆಯೋಜಿಸಿದ್ದ ಸಮಾವೇಶ. ಹಾಗಾಗಿ ಅಲ್ಲಿಗೆ ಬಿಜೆಪಿಯವರೇಕೆ ಬರಬೇಕು ಅಂತ ಸಬೂಬು ಹಾರಿಬರಬಹುದು. ಆದರೆ ನೆನಪಿರಲಿ, ಬಿಜೆಪಿಯ ರಾಜ್ಯಾಧ್ಯಕ್ಷ ಯಡ್ಯೂರಪ್ಪನೇ ನವೆಂಬರ್ ಒಂಬತ್ತರಂದು ಭರ್ಜರಿ ಬೇಟೆಯ ಸೂಚನೆ ನೀಡಿದ್ದರು. ಹೆಸರು ಹೇಳದೆ ಹೋದರು ಅದು ಶ್ರೀನಿವಾಸ್ ಪ್ರಸಾದ್ ಬಿಜೆಪಿ ಸೇರುವುದು ಮತ್ತು ಅದಕ್ಕೆ ಆ ಸ್ವಾಭಿಮಾನಿ ಸಮಾವೇಶವೇ ವೇದಿಕೆಯಾಗಲಿದೆ ಅಂತೆಲ್ಲ ಲೆಕ್ಕಾಚಾರಗಳು ನಡೆದಿದ್ದವು. ಆದರೆ ಅಂತದ್ದಾವುದು ಅಲ್ಲಿ ಘಟಿಸಲಿಲ್ಲ; ಹಾಗಾಗಿ ಬಿಜೆಪಿಗಳ ಗೈರು ವಿಶೇಷ ಆಸಕ್ತಿ ಕೆರಳಿಸುವ ವಿಷಯವಾಗಿತ್ತು.

ಅಷ್ಟೇಏಕೆ ಒಂಟಿ ಜೀವದಂತಾಗಿದ್ದ ಪ್ರಸಾದ್ ಮನೆಯಲ್ಲಿ ಅಳಿದುಳಿದ ಬೆಲ್ಲ ನೆಕ್ಕಲು ಹೋದ ಇದೇ ಬಿಜೆಪಿ ನಾಯಕರು 'ಸಿದ್ದು ನೇತೃತ್ವದ ಕಾಂಗ್ರೆಸ್ ಸರ್ಕಾರ ಸರಳ, ಸಜ್ಜನಿಕೆಯ ವ್ಯಕ್ತಿ, ದಲಿತ ನಾಯಕ, ಸಮರ್ಥ ಸಚಿವ (ಹಿಂದೆ ಇದೇ ಬಿಜೆಪಿ ನಾಯಕರು ಅಸಮರ್ಥ ಸಚಿವ ಶ್ರೀನಿವಾಸ ಪ್ರಸಾದ್ ಎಂದು ಜರಿದಿದ್ದು ಬೇರೆ ಮಾತು) ಶ್ರೀನಿವಾಸ ಪ್ರಸಾದ್ ಅವರನ್ನು ಸಂಪುಟದಿಂದ ಕಿತ್ತು ಹಾಕಿ ದಲಿತರಿಗೆ ದೊಡ್ಡ ಅನ್ಯಾಯ ಮಾಡಿದೆ. ನಾವು ಅವರ ಅಭಿಮಾನಿಗಳಾಗಿ, ಹಿತೈಷಿಗಳಾಗಿ, ಬೆಂಬಲಿಗರಾಗಿ ಅವರ ಬೆನ್ನಹಿಂದೆ ನಿಲ್ಲುತ್ತೇವೆ' ಎಂದು ಹೇಳಿದ್ದರು. ಹಾಗೆ ನೋಡಿದರೆ ಪ್ರಸಾದರನ್ನು ಹುರಿದುಂಬಿಸಿ ಮೈದಾನಕ್ಕೆ ಬಿಟ್ಟಿದ್ದೇ ಬಿಜೆಪಿಗಳು. ಇಷ್ಟೆಲ್ಲ ಮಣ್ಣೊತ್ತು ಕೈ ಕೆಸರು ಮಾಡಿಕೊಂಡವರು ಬಾಯಿಗೆ ಮೊಸರು ಹಾಕಿಕೊಳ್ಳುವ ವೇಳೆಗೆ ಸರಿಯಾಗಿ ಗೈರಾದದ್ದು ನೋಡಿದರೆ ಪ್ರಸಾದ್‌ರನ್ನು ಹರಕೆಯ ಕುರಿ ಮಾಡಲಾಯಿತೇ ಎಂಬ ಅನುಮಾನ ಮೂಡದಿರದು.


ಇಂತಹ ಅನುಮಾನ ಮೂಡಲು ಮುಖ್ಯ ಕಾರಣವೊಂದಿದೆ. ಅದೇನೆಂದರೆ ಅವತ್ತು ಸಮಾವೇಶದ ದಿನ ಬಿಜೆಪಿಯ ಮಾಜಿಮಂತ್ರಿ ಎಸ್.ಎ.ರಾಮದಾಸ್ ನಂಜನಗೂಡಿಗೆ ಆಗಮಿಸಿದ್ದರು. ಸಮಾವೇಶದ ವೇದಿಕೆಯಲ್ಲಿ ಕಾಣಿಸಿಕೊಳ್ಳುತ್ತಾರೆ ಅಂತಲೇ ಎಲ್ಲರೂ ಲೆಕ್ಕ ಹಾಕಿದ್ದರು. ಆದರೆ ಕೊನೇ ಘಳಿಗೆಯಲ್ಲಿ ಅದೇನಾಯಿತೊ ಗೊತ್ತಿಲ್ಲ, ಸಮಾವೇಶದ ದಿಕ್ಕಿಗೆ ಮುಖ ಹಾಕದೆ ಐಬಿಯಲ್ಲೇ ಉಳಿದುಬಿಟ್ಟರು.

ಅಂದಹಾಗೆ, ಪಾಪ ಬಿಜೆಪಿಯವರಿಗೆ ದಲಿತ ವ್ಯಕ್ತಿ ಪ್ರಸಾದ್‌ರ ಸ್ವಾಭಿಮಾನಿ ಸಮಾವೇಶಕ್ಕೆ ಬರುವಷ್ಟು ಸಮಯ ಎಲ್ಲಿ ಸಿಗಬೇಕು. ಈಗ ಅವರಿಗೆ ಮುಖ್ಯವಾಗಿರುವುದು ಟಿಪ್ಪು ಜಯಂತಿ ವಿರೋಧಿಸುವ ಅಜೆಂಡಾ. ಬಿಜೆಪಿ ಪಕ್ಷದವರಿಗೆ ವ್ಯಕ್ತಿಗಿಂತ ಕೋಮುವಾದವೇ ಮುಖ್ಯ ಎಂಬುದನ್ನು ಈ ಮೂಲಕ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಅವರ ಈ ನಡೆಯಿಂದ ಪಗಡೆ ಆಟಕ್ಕೆ ಶ್ರೀನಿವಾಸ ಪ್ರಸಾದ್ ಅವರನ್ನು ಒಂದು ಕಾಯಿಯಾಗಿ ಬಳಸಿಕೊಂಡಿದ್ದಾರಷ್ಟೇ.

ಅದಿರಲಿ ಸ್ವಾಭಿಮಾನಿ ಸಮಾವೇಶದ ನೆಪದಲ್ಲಿ ಅವತ್ತು ನಂಜನಗೂಡಿನ ವಿದ್ಯಾವರ್ಧಕ ಮೈದಾನ ತುಳುಕಿಹೋಗಿತ್ತು, ಅಲ್ಲಿ ನೆರೆದಿದ್ದ ಶ್ರೀನಿವಾಸ ... ಅವರ ಅಪ್ಪಟ ಅಭಿಮಾನಿಗಳು, ಹಿತೈಷಿಗಳು, ಬೆಂಬ... ಅತೀವ ಸಂತೋಷವಾಗಿ ಅರರೆ ಏನಪ್ಪ ಇಷ... ಸೇರಿಬಿಟ್ಟಿದ್ದಾರಲ್ಲ ಎಂದು ಆಶ್ಚರ್ಯಚಕಿತರಾಗಿ ಇನ... ಪ್ರಸಾದ್ ಸಾಹೇಬರನ್ನು ಯಾರಿಂದಲೂ ಮ... ಸಾಧ್ಯವಿಲ್ಲ ಎಂದು ತಲೆಯ ಮೇಲೆ ಕಿರೀಟ ಏರಿಸಿ... ತಲೆ ಎತ್ತಿ ತಿರುಗಾಡುತ್ತಿದ್ದರು. ಅದೇ ರೀವಿಯಲ್ಲಿ ... ಸಾಲಿನಲ್ಲಿ ಕುಳಿತ್ತಿದ್ದವರನ್ನು ನೋಡಿದರೆ ಮೊದ... ಅಲ್ಲಿ–ಇಲ್ಲಿ ಒಂದು ಬಿಜೆಪಿ ಬಾವುಟ ಪ್ರೇಕ್ಷಕರ ...ನೊಳಗಿದ್ದವು. ಹಿಂದಿನ ಸಾಲು, ಅದರ ಹಿಂದಿನ ... ನೋಡಿದರೆ ಬಹುಪಾಲು ಬಿಜೆಪಿಯ ಬಾವುಟಗಳು ಜೇಬಿನೊಳಗೆ ಪಾರದರ್ಶಕವಾಗಿ ಕಾಣಿಸುತ್ತಿದ್ದವು.

ಅಸಲಿಗೆ ಅವತ್ತು ಶ್ರೀನಿವಾಸ್ ಪ್ರಸಾದ್ ... ಸೇರುತ್ತಾರೆ ಅಂತ ಹುಯಿಲೆಬ್ಬಿಸಿ ಖುದ್ದು ... ಕಾರ್ಯಕರ್ತರನ್ನೇ ಯಾಮಾರಿಸಿ ಸಮಾವೇಶಕ್ಕೆ ಕ... ತುಂಬಿಸಲಾಗಿತ್ತು, ಆದರೆ ಅಂತದ್ದಾವುದೂ ಘಟಿಸದೆ ... ತ್ಯಾಪು ಮೋರೆ ಹಾಕಿಕೊಂಡು ನಡೆದರು. ಬಿಜೆಪಿ... ಕಾಂಗ್ರೆಸ್ ಶಕ್ತಿಯನ್ನು ಉಡುಗಿಸಲು, ಮುಖ... ಸಿದ್ದರಾಮಯ್ಯ ಅವರಿಗಿಂತ ಶ್ರೀನಿವಾಸ ಪ್ರಸಾದ್ ... ಹೆಚ್ಚು ಬೆಂಬಲಿಗರಿದ್ದಾರೆ ಎಂದು ಜನರನ್ನು ಯಾ... ಅದರ ಬೆನಿಫಿಟ್ಟನ್ನು ಬಿಜೆಪಿಯ ಓಟಾಗಿ ಪರಿವ... ತಂತ್ರ ರೂಪಿಸಿದ್ದರು. ಅದಕ್ಕಾಗಿಯೇ ಬಿಜೆಪಿ ನಾ... ತಾವು ಯಾರೂ ಸಮಾವೇಶದಲ್ಲಿ ಭಾಗವಹಿಸ... ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ...

ತುಮಕೂರು: ಸೊಗಡು ಶಿವಣ್ಣನಿಗೆ ಯಡ್ಡಿಯ ವಾರ್ನಿಂಗ್ ನೋಟಿಸ



ಸೊಗಡು ಶಿವಣ್ಣ

ತುಮಕೂರಿನ ಬಿಜೆಪಿ ರಾಜಕಾರಣ ಕವಲುದಾರಿಯತ್ತ ಸಾಗುತ್ತಿದೆ. ಮೊದಲೇ ಜಿಲ್ಲೆಯಲ್ಲಿ ಎರಡು ಬಣ ಜೋರಾಗಿ ಸದ್ದು ಮಾಡುತ್ತಿವೆ. ಮಾಜಿ ಸಂಸದ ಬಸವರಾಜು ನೇತೃತ್ವದಲ್ಲಿ ಯಡ್ಡಿ ಬಣ ದಿನದಿಂದ ದಿನಕ್ಕೆ ಹಿಡಿತ ಬಿಗಿಗೊಳಿಸುತ್ತಿದ್ದರೆ ಆಗಾಗ್ಗೆ ಈಶ್ವರಪ್ಪನ ಹೆಸರು ಕನವರಿಸುವ ಸೊಗಡು ಶಿವಣ್ಣನ ಬಣ ಯಡೂರಪ್ಪನಿಗೆ ನೇರ ಟಾಂಗ್ ಕೊಡುತ್ತಲೇ ಬಂದಿದೆ. ಸೊಗಡು ಶಿವಣ್ಣ ಈಚೀಚೆಗೆ ಯಡೂರಪ್ಪ ಮತ್ತು ಬಸವರಾಜ್ ವಿರುದ್ಧ ನೇರಾನೇರ ದಾಳಿಗೆ ಇಳಿದಿರೋದ ರಿಂದ ಆತನಿಗೆ ಬ್ರೇಕ್ ಹಾಕಲು ಬಿಜೆಪಿ ತಯಾರಿ ನಡೆಸಿರೋ ಸಂಗತಿ ಕೇಸರಿ ಕಾರ್ಯಕರ್ತರಲ್ಲಿ ಆತಂಕಕ್ಕೆ ಕಾರಣವಾಗಿದೆ. ಬಿಜೆಪಿಯ ಶಿಸ್ತುಪಾಲನಾ ಸಮಿತಿಯಿಂದ ಶಿವಣ್ಣನಿಗೆ ನೋಟಿಸ್ ಜಾರಿಗೊಳಿಸಲಾಗಿದ್ದು ಮುಂದಿನ ದಿನದಲ್ಲಿ ಪಕ್ಷ ಇಬ್ಭಾಗವಾಗುವ ಅಥವಾ ಸೊಗಡು ಬೇರೊಂದು ಪಕ್ಷದತ್ತ ಮುಖಮಾಡುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ.


ಸೊಗಡು ಶಿವಣ್ಣ ಮೊದಲಿನಿಂದಲೂ ಬಿಜೆಪಿಯಲ್ಲಿ ಗುರುತಿಸಿಕೊಂಡವ. ಈ ಬಾರಿ ಪಕ್ಷದ ಜಿಲ್ಲಾಧ್ಯಕ್ಷನಾಗುವ ಆಸೆಯಿಟ್ಟುಕೊಂಡಿದ್ದ. ಆದರೆ ಯಡಿಯೂರಪ್ಪ ರಾಜ್ಯಾಧ್ಯಕ್ಷನಾದ ಕೂಡಲೇ ಶಿವಣ್ಣನ ರಾಜಕೀಯ ಎದುರಾಳಿ ಜಿ.ಎಸ್.ಬಸವರಾಜುನ ಪುತ್ರ ಜ್ಯೋತಿಗಣೇಶ್‌ಗೆ ಆ ಪಟ್ಟ ಕಟ್ಟಿದ್ದು ಸೊಗಡು ಶಿವಣ್ಣನ ತಳ ಉರಿಸಿತ್ತು.

ಇತ್ತೀಚೆಗೆ ನಡೆದ ವಿದ್ಯಮಾನಗಳಲ್ಲಿ ತುಮಕೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಶಾಸಕ ಸುರೇಶ್ ಗೌಡ ಸಾರ್ವಜನಿಕವಾಗಿಯೇ ಜಿಲ್ಲಾ ಕಾಂಗ್ರೆಸ್ಸಿನ ಪ್ರಭಾವಿ ನಾಯಕ ಕಂ ಮಧುಗಿರಿ ಶಾಸಕ ಕೆ.ಎನ್.ರಾಜಣ್ಣನನ್ನು ಬಾಯಿತುಂಬ ಹೊಗಳುತ್ತಿರೋದು ಸೊಗಡು ಶಿವಣ್ಣನಿಗೆ ಮತ್ತಷ್ಟು ಸಿಟ್ಟು ತರಿಸಿದೆ. ಆ ಸಿಟ್ಟನ್ನು ಹೊರಹಾಕುವುದಕ್ಕೆಂದೇ ಮೊನ್ನೆ ಪತ್ರಿಕಾಗೋಷ್ಠಿ ಕರೆದ ಶಿವಣ್ಣ "ಸುರೇಶ್ ಗೌಡ ಕಲ್ಲು ಗಣಿದಾರರು ಮತ್ತು ಕೈಗಾರಿಕೋದ್ಯಮಿಗಳನ್ನು ಬೆದರಿಸಿ, ಮೂರ್ನಾಲ್ಕು ಜನ ಚೇಲಾಗಳನ್ನಿಟ್ಟುಕೊಂಡು ವಸೂಲಾತಿ ದಂಧೆ ನಡೆಸುತ್ತಿದ್ದಾನೆ. ನಾನು ಸಹ 20 ವರ್ಷ ಶಾಸಕನಾಗಿದ್ದೇನೆ. ಆದರೆ ಸುರೇಶ್ ಗೌಡ ನನ್ನಲ್ಲಿ ಗುಲಗಂಜಿಯಷ್ಟು ದೋಷ ತೋರಿಸಲಿ. ನಾನು ಯಾರ ಬಳಿಯಾದರೂ ಹಫ್ತಾ ಕೇಳಿದ್ದೇನೆ ಎಂದಾದರೆ ಅಂತಹವರ ಮನೆ ಕಸ ಗುಡಿಸುತ್ತೇನೆ" ಅಂತೆಲ್ಲ ಸತ್ಯಹರಿಶ್ಚಂದ್ರ ವಂಶಾವಳಿಯ ಪಳೆಯುಳಿಕೆಯಂತೆ ಪತರುಗುಟ್ಟಿದ್ದ.


ಇದು ಬಸವರಾಜು ಮತ್ತು ಸುರೇಶ್ ಗೌಡನನ್ನು ಮತ್ತಷ್ಟು ಹತ್ತಿರಕ್ಕೆ ತಂದಿತ್ತಲ್ಲದೆ ಈ ಇಬ್ಬರೂ ಸೇರಿಕೊಂಡು ನೇರ ಯಡೂರಪ್ಪನ ಕಿವಿಯೂದಿ ಸೊಗಡು ಶಿವಣ್ಣನ ಆಟಾಟೋಪಕ್ಕೆ ಬ್ರೇಕ್ ಹಾಕುವಂತೆ ಬೇಡಿಕೊಂಡಿದ್ದರು. ಅದರ ಫಲವಾಗೇ ಮೊನ್ನೆ ಅರವಿಂದ್ ಲಿಂಬಾವಳಿಯ ನೇತೃತ್ವದಲ್ಲಿ ಜಿಲ್ಲಾ ಕಾರ್ಯಕಾರಿಣಿ ಸಮಿತಿಯ ಸಭೆ ನಡೆದದ್ದು. ಅಲ್ಲಿ ಪಕ್ಷದ ಎಲ್ಲರಿಗೂ ಬುದ್ಧಿ ಹೇಳಿ ಸರಿದಾರಿಗೆ ತರುವ ಪ್ರಯತ್ನ ನಡೆಸಲಾಯಿತು. ಆದರೆ ಈ ಚಿತಾವಣೆ ಅರಿತ ಸೊಗಡು ಶಿವಣ್ಣ ಮತ್ತು ನಂದೀಶ್ ಇಬ್ಬರೂ ಗೈರುಹಾಜರಾಗುವ ಮೂಲಕ ತಮ್ಮ ಅಸಮಾಧಾನ ಹೊರಹಾಕಿದ್ದರು.

ಸಭೆಯ ನಂತರ "ಚುನಾವಣೆ ಹತ್ತಿರವಾಗುತ್ತಿದ್ದು ಜಗಳ ಮಾಡಿಕೊಂಡು ಕೂರಲು ತಮಗೆ ... ಸಮಯವಿಲ್ಲ, ಪಕ್ಷದಲ್ಲಿ ಅನೇಕ ವರ್ಷ ಕೆಲಸ ಮಾಡಿ... ಪಕ್ಷ ಕಳೆದುಕೊಳ್ಳಲು ಇಷ್ಟ ಪಡುವುದಿಲ್ಲ. ... ಅತಿರೇಕದಿಂದ ವರ್ತಿಸಿದರೆ ಪಕ್ಷ ಕೈಕಟ್ಟಿ ... ಸಾಧ್ಯವಿಲ್ಲ" ಎಂಬ ಮಾರ್ಮಿಕ ಮ... ಮೂಲಕ ಲಿಂಬಾವಳಿ ಬಂಡಾಯದ... ಪರೋಕ್ಷ ಎಚ್ಚರಿಕೆ ರವಾನೆ ಮಾ...


ಅಲ್ಲದೇ "ಬೇರೆ ಪಕ್ಷದಿಂದ ಬ... ಒಳ್ಳೆಯವರೇ ಆಗಿದ್ದಾರೆ. ಅವರ ... ಜನಪರ ಕೆಲಸ, ವ್ಯಕ್ತಿತ್ವ ಹಾಗೂ ... ಅವರಿಂದ ಆಗುವ ಪ್ರಯೋ... ಪರಿಶೀಲಿಸಿಯೇ ಪಕ್ಷ ಅ... ಸೇರಿಸಿಕೊಂಡಿರುತ್ತದೆ. ಅಂತಹವರ ... ಮಾರ್ಗದರ್ಶನ ಪಡೆದುಕೊಂಡ...




ಜಿ.ಎಸ್.ಬಸವರಾಜು



ಯಡಿಯೂರಪ್ಪ



ಸುರೇಶ್ ಗೌಡ



ಕೆ.ಎಸ್.ಈಶ್ವರಪ್ಪ

ಕೊಂಡಿದ್ದರು. ...ಕ್ಕೆ ಇಂಬು ಕೊಡುವಂತೆ ಸಮಾವೇಶದಲ್ಲಿ ಶ್ರೀನಿವಾಸ ಪ್ರಸಾದ್ ಅವರು ಮಾತನಾಡುತ್ತಿದ್ದಾಗ ಪ್ರಸಾದ್ ಅವರ ಅಭಿಮಾನಿಗಳು ಸ್ವಾಭಿಮಾನಿ ಚಕ್ರವರ್ತಿ ವಿ.ಶ್ರೀನಿವಾಸ್ ಪ್ರಸಾದ್ ಅವರಿಗೆ ಜೈ ಎಂದು ಶಿಳ್ಳೆ, ಚಪ್ಪಾಳೆ ಹಾಕುತ್ತಿದ್ದರೆ, ಕೆಲವರು ಶ್ರೀನಿವಾಸ್ ಪ್ರಸಾದ್ ಅವರು ಬಿಜೆಪಿಗೆ ಸೇರಿಕೊಳ್ಳಬೇಕು, ಉಪ ಚುನಾವಣೆಗೆ ನಿಲ್ಲಬೇಕು ಎಂದು ಮೇಲಿಂದ ಮೇಲೆ ಕೂಗಿಕೊಳ್ಳುತ್ತಿದ್ದರು.

ಇನ್ನೂ ಕುತೂಹಲದ ಸಂಗತಿಯೆಂದರೆ ಕೆಲ ದಿನಗಳ ಹಿಂದೆ ಇದೇ ಜಾಗದಲ್ಲಿ ಕಾಂಗ್ರೆಸ್ ನಡೆಸಿದ್ದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಮುಖಂಡರೇ ಶ್ರೀನಿವಾಸ್ ಪ್ರಸಾದ್ ಸ್ವಾಭಿಮಾನಿ ಸಮಾವೇಶದಲ್ಲೂ ರಿಪೀಟಾಗಿ ಬಲು ಗೋಡಲು ಬಿಟ್ಟಿಸಿದ್ದವು. ಅಸಲಿಗೆ 'ಏ ನಮ್ಮ ಅವ್ರು ಬೇಕು (ಸಿದ್ದರಾಮಯ್ಯ ಅಂಡ್ ಟೀಮ್), ಇವ್ರು ಬೇಕು (ಶ್ರೀನಿವಾಸ ಪ್ರಸಾದ್)' ಇಬ್ಬರೂ ನಿಷ್ಠೂರ ಕಟ್ಟಿಕೊಳ್ಳಲ್ಲ ಕಣ, ಓಟ್ ಹಾಕ ವತ್ತ ಯಾರ್ಗ್ ಹಾಕ್ತೀವಿ ಅಂತ ನಮ್ಗ್ ಗೊತ್ತು ಕಣ' ಅಂತಲೇ ತಮ್ಮ ಇರಾದೆಯನ್ನು ಹೊರಹಾಕಿದರು. ಅಂತವರಲ್ಲಿ ನಂಜನಗೂಡು ನಗರ ಸಭೆ ಅಧ್ಯಕ್ಷೆ ಪುಷ್ಪಲತಾ ಕಮಲೇಶ್, ಇದೇ ನಗರಸಭೆಯ ಮಾಜಿ ಉಪಾಧ್ಯಕ್ಷ, ಹಾಲಿ ಸದಸ್ಯ ದೊರೆಸ್ವಾಮಿ, ಇದೇ ನಗರಸಭೆಯ ಹಾಲಿ ಸದಸ್ಯೆ ಹಾಗೂ ಮೈಸೂರು ನಗರಾಭಿವೃದ್ಧಿ ಮಂಡಲಿಯ ಸದಸ್ಯೆಯೂ ಆದ ಅನುಸೂಯ ಗಣೇಶ್ ಮೊದಲಾದವರ ಪಟ್ಟಿ ಬೆಳೆಯುತ್ತಲೇ ಸಾಗುತ್ತೆ. ಇವರೆಲ್ಲ ಉಭಯ ಸಮಾವೇಶಗಳಲ್ಲಿ ಮಿಂಚಿದವರು.

ಒಟ್ಟಾರೆಯಾಗಿ ಶ್ರೀನಿವಾಸ ಪ್ರಸಾದ್ ಅವರು 'ನಾನು ಏನೆಂದು ಕಾಂಗ್ರೆಸ್‌ಗೆ ಸ್ವಾಭಿಮಾನಿ ಸಮಾವೇಶದಲ್ಲಿ ತೋರಿಸುತ್ತೇನೆ, ಸಮಾವೇಶದಲ್ಲೇ ನನ್ನ ಕ್ಷೇತ್ರದ ಜನತೆ ಸಲಹೆ ಪಡೆದು ನನ್ನ ಮುಂದಿನ ನಿರ್ಧಾರ ಪ್ರಕಟಿಸುತ್ತೇನೆ' ಎಂದು ಹೇಳಿ ಇಷ್ಟೊಂದು ಜನರು ಸೇರುವಂತೆ, ಜೆಡಿಎಸ್, ಬಿಎಸ್‌ಪಿ, ಬಿಜೆಪಿಯವರು ಕಾಗೆಗಳಂತೆ ಗುಂಪು ಸೇರಲು ಅವಕಾಶ ಮಾಡಿ, ಆ ಮೂಲಕ ತಮ್ಮ ಬಲ ಪ್ರದರ್ಶನಕ್ಕೆ ಮುಂದಾಗಿದ್ದರೇ? ಅದಕ್ಕಾಗಿಯೇ ಸಮಾವೇಶದಲ್ಲಿ ಅತ್ತು ಕರೆದು ಅನುಕಂಪದ ಕಣ್ಣೀರ ಅಲೆ (ಇತ್ತೀಚಿಗೆ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಪ್ರಸಾದ್ ಮಾತಿನ ಮಧ್ಯೆ ಗದ್ಗದಿತರಾಗುತ್ತಾರೆ) ಎದ್ದೇಳುವಂತೆ ಮಾಡಿ ಆ ಅಲೆಯಲ್ಲಿ ಸಿದ್ದರಾಮಯ್ಯ ಅಂಡ್ ಟೀಮ್ ಅನ್ನು ಅಳಿಯುವ ಉದ್ದೇಶವೇ? ಈ ಸ್ವಾಭಿಮಾನಿ ಸಮಾವೇಶಕ್ಕೂ ಮುನ್ನ ಶ್ರೀನಿವಾಸ ಪ್ರಸಾದ್ ಅವರು "ಸ್ವಾಭಿಮಾನಿ ಸಮಾವೇಶದಲ್ಲಿ ಕಾಂಗ್ರೆಸ್‌ನ ಎಲ್ಲ ಗುಟ್ಟುಗಳನ್ನು ಬಹಿರಂಗ ಪಡಿಸುತ್ತೇನೆ, ನನ್ನ ಮುಂದಿನ ನಡೆಯನ್ನು ತಿಳಿಸುತ್ತೇನೆ" ಎಂದು ಹೇಳಿ ಸಹಸ್ರಾರು ಜನರು ಸಮಾವೇಶಕ್ಕೆ ಆಗಮಿಸುವಂತೆ ಮಾಡಿ ಏನನ್ನೂ ಬಹಿರಂಗಪಡಿಸದೆ, ಮುಂದಿನ ಯಾವ ನಡೆಯನ್ನೂ ತಿಳಿಸದೆ ನೆರೆದಿದ್ದ ಸಹಸ್ರಾರು ಜನರನ್ನು ನಿರಾಸೆಯಲ್ಲಿ ಮುಳುಗಿಸಿದ್ದೇಕೆ? ಇಂತಹ ಹತ್ತಾರು ಪ್ರಶ್ನೆಗಳೊಂದಿಗೇ ಸಮಾವೇಶ ಮುಗಿಯಿತಾದರೂ ಸಂಶಯಗಳಿನ್ನೂ ಸರಿದಾಡುತ್ತಲೇ ಇವೆ.

■ ವರದಿಗಾರ

ಬಲಪಡಿಸುವ ಪ್ರಯತ್ನ ಮಾಡಬೇಕೆ ಹೊರತು ವಿರೋಧಿಸಬಾರದು" ಎಂಬ ಲಿಂಬಾವಳಿಯ ಮಾತುಗಳು ಜಿ.ಎಸ್.ಬಸವರಾಜುಗೆ ಯಡೂರಪ್ಪನ ಕೃಪಾಶೀರ್ವಾದ ದಟ್ಟವಾಗಿರುವುದನ್ನು ಸೂಚ್ಯವಾಗಿ ಬಿಚ್ಚಿಟ್ಟಿದ್ದವು.

ಈ ಸಭೆ ಮುಗಿದ ಕೆಲವೇ ದಿನಗಳಲ್ಲಿ, ಅಂದರೆ ಯಡಿಯೂರಪ್ಪನಿಗೆ ಭ್ರಷ್ಟಾಚಾರದ ಕೇಸ್‌ನಲ್ಲಿ ಕ್ಲೀನ್‌ಚಿಟ್ ಸಿಕ್ಕ ಮರುದಿನವೇ, ರಾಜ್ಯ ಬಿಜೆಪಿಯ ಶಿಸ್ತುಪಾಲನಾ ಸಮಿತಿಯ ಅಧ್ಯಕ್ಷ ಎನ್.ಶಂಕರಪ್ಪ ತುಮಕೂರು ಜಿಲ್ಲೆಯಲ್ಲಿ ಪಕ್ಷವಿರೋಧಿ ಚಟುವಟಿಕೆ ನಡೆಯುತ್ತಿದೆ ಅಂತ ಆರೋಪಿಸಿ ಸೊಗಡು ಶಿವಣ್ಣ ಮತ್ತು ನಂದೀಶ್‌ಗೆ ನೋಟಿಸ್ ಜಾರಿ ಮಾಡಿದ್ದಾರೆ. ಜಿಲ್ಲೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಲು ಕಾರ್ಯಕರ್ತರನ್ನು ಪ್ರೇರೇಪಿಸಿರುವುದು ಮತ್ತು ಪಕ್ಷದ ವಿರುದ್ಧ ಹೇಳಿಕೆ ನೀಡಿರುವುದು, ಪಕ್ಷದ ನಿರ್ಧಾರಗಳಿಗೆ ವಿರುದ್ಧವಾಗಿ ಪ್ರತ್ಯೇಕ ಸಭೆಗಳನ್ನು ನಡೆಸುವ ಮೂಲಕ ಜಿಲ್ಲಾ ಮುಖಂಡರಿಗೆ ಮುಜುಗರ ಉಂಟುಮಾಡಿದ್ದೀರಿ; ಹಾಗಾಗಿ, ನಿಮ್ಮ ಮೇಲೆ ಏಕೆ ಶಿಸ್ತು ಕ್ರಮ ಜರುಗಿಸಬಾರದು ಎಂದು ನೋಟಿಸ್‌ನಲ್ಲಿ ಸ್ಪಷ್ಟನೆಯನ್ನು ಕೇಳಲಾಗಿದೆ.

ಇಂತಹದ್ದೊಂದು ನೋಟಿಸ್ ಕೈಸೇರಿದ್ದೇ ತಡ ಮತ್ತೊಂದು ಮಾಧ್ಯಮಗೋಷ್ಠಿ ಕರೆದ ಶಿವಣ್ಣ "ಈ ಬೆಳವಣಿಯಿಂದ ನಾನು ಮತ್ತಷ್ಟೂ ಪ್ರಕಾಶಮಾನವಾಗಿದ್ದೇನೆ, ಮತ್ತಷ್ಟೂ ಪ್ರಜ್ವಲವಾಗಿರುತ್ತೇನೆ. ಆದರೆ ಬಿಜೆಪಿ ಎಂಬ ದೀಪಕ್ಕೆ, ಕಲಬೆರಕೆ ಎಣ್ಣೆ ಸೇರಿದ್ದು ಅದನ್ನು ಸಂಚಿಗೊಳಿಸಬೇಕು" ಎಂದು ಪರೋಕ್ಷವಾಗಿ ಬಸವರಾಜುವಿನ ಮೇಲೆ ಟೀಕಾಪ್ರಹಾರ ನಡೆಸಿರೋದು ಸಮಸ್ಯೆ ಅಷ್ಟು ಸುಲಭಕ್ಕೆ ಬಗೆಹರಿಯುವಂತದ್ದಲ್ಲ ಎಂಬುದನ್ನು ಸಾಬೀತುಮಾಡಿದೆ. ಈ ಮಧ್ಯೆ ನೋಟಿಸ್ ವಿಚಾರ ಗೊತ್ತಾದ್ದೇ ಸಂಗೊಳ್ಳಿ ರಾಯಣ್ಣ ಬ್ರಿಗೇಡ್‌ಗೆ ಬಹಿರಂಗವಾಗಿ ಬೆಂಬಲ ನೀಡಿದ್ದ ಆಪ್ತ ಸೊಗಡು ಶಿವಣ್ಣನ ಮನೆಗೆ ಈಶ್ವರಪ್ಪ ಭೇಟಿ ನೀಡಿದ್ದು ಹಲವು ಊಹಾಪೋಹಗಳನ್ನು ಹುಟ್ಟುಹಾಕಿದೆ.

■ ಅನಿಲ್‌ಕುಮಾರ್ ಚಿಕ್ಕದಾಳವಟ್ಟಿ

ಹಿಂದೂ ಮೆದುಳು ಮುಸ್ಲಿಂ ದೇಹದಿಂದ ದೇಶ ಕಟ್ಟಬೇಕಂತೆ!

ಇದ್ದಕ್ಕಿದ್ದಂತ ಟಿಪ್ಪು ಸುಲ್ತಾನ್ ವಿರುದ್ಧ ಭುಗಿಲೆದ್ದ ಬಿಜೆಪಿಗಳ ಬಗ್ಗೆ ಯೋಚಿಸುತ್ತ ಕುಳಿತಿರಬೇಕಾದರೆ ಆಫೀಸಿನ ಫೋನ್ ರಿಂಗಾಯ್ತು, ತೆಗೆದುಕೊಂಡೆ. ಅತ್ತಲಿಂದ:

"ಹಲೋ?"

"ಹಲೋ, ಹೇಳಿ."

"ಸಂಪಾದಕರು ಇದ್ದಾರ?"

"ಏನ್ಹೇಳಿ?"

"ಟಿಪ್ಪು ಸುಲ್ತಾನ್ ಬಗ್ಗೆ ಏನಾಥರಾ ಬರದವ್ರುರಲ್ಲಾ?"

"ಯಾವ ತರಾ ಬರದವ್ರುರೆ?"

"ಏನೊ ಅವ್ನು ಮಹಾನಾಯಕ ಅನ್ನಂಗೆ ಹೊಗಳಿ ಬರದಿದಾರೆ."

"ಇರದ ಬರದವ್ರುರೆ. ಯಾಕೆ ಅಂದ್ರೆ ಬಿಜೆಪಿಯ ರಾಷ್ಟ್ರೋತ್ಥಾನದ ಲೇಖಕರು ಇಲ್ಲದ್ನೆ ಬರದಿರೊದ್ರಿಂದ ಅವ್ರುರಿಗೆ ಸರಿಯಾದ ಉತ್ತರ ಕೊಡಬೇಕಾದ್ರೆ ಇರದ್ನೆ ಬರೀಬೇಕಾಗುತ್ತೆ."

"ಹೋಗ್ಲಿ, ಜಯಂತಿ ಆಚರಿಸೊ ಅಂಥೋನಾ ಅವ್ನು? ಆತ ಏನೇನು ಮಾಡಿ ಹೋಗಿದಾನೆ ಅಂತ ಗೊತ್ತ ನಿನಗೆ?"

"ನಿನಿಗೆ ಅಂತಿಯಲ್ಲ, ಎಷ್ಟೊರ್ಸ ನಿಮಗೆ?"

"ಐವತ್ತೊರ್ಸ."

"ಐವತ್ತೋರ್ಸ ಆದ್ರು ನಿಮಗೆ ಬುದ್ಧಿನೆ ಬೆಳವಣಿಗೆ ಆಗಿಲ್ವ?"

"ಸರಿಯಾಗಿ ಮಾತಾಡ್ರಿ."

"ಆಯ್ತು, ಸರಿಯಾಗಿ ಮಾತಾಡ್ತಿನಿ. ನನ್ನಲ್ಲಿ ಇತಿಹಾಸದಿಂದ ಹೆಕ್ಕಿ ತೆಗೆದ ಮಾಹಿತಿ ಇದೆ. ನಾನು ಹೇಳಿದನಂತರ ನೀವು ಟಿಪ್ಪು ಬಗ್ಗೆ ತಿಳಕೊಂಡಿರದ ಹೇಳಿ."

"ಆಯ್ತು ಹೇಳ್ರಿ."

"ನಿಮ್ಮ ಸರೇನು?"

"ಅದೆಲ್ಲ ಯಾಕೆ? ವಿಷಯ ಹೇಳಿ."

"ನೋಡಿ, ಟಿಪ್ಪು ಜಯಂತಿ ಮುಸ್ಲಿಮರಿಗೆ ಬೇಕಿರಲಿಲ್ಲ."

"ಅದೇ ನಾವೇಳದು."

"ಆಧ್ರೆ ಅವ್ನೊಬ್ಬ ಕ್ರಿಯಾಶೀಲ ಕನ್ನಡದ ರಾಜನಾಗಿದ್ದ. ಅದರಲ್ಲೂ ಒಕ್ಕಲು ಮಕ್ಕಳು ಜಾಸ್ತಿಯಿರೊ ಪ್ರದೇಶದಲ್ಲಿ ರಾಜನಾಗಿ ಆತನ ಆಡಳಿತದ ಅವಧೀಲಿ ಒಂದೇ ಒಂದು ಪ್ರಜೆಗಳ ಧಂಗೆ ಇರಲಿಲ್ಲ."

"ಪ್ರಜೆಗಳು ಹೆದರಿಕೊಂಡಿದ್ರೇನೊ."

"ಅಂಗೇನು ಇಲ್ಲ, ಇವತ್ತು ಲಕ್ಷಗಟ್ಟಲೆ ಇರೋ ಮುಸ್ಲಿಮರು ಅವತ್ತು ಕೆಲವು ಸಾವಿರ ಸಂಖ್ಯೆಲಿದ್ರು. 1921ನೇ ಇಸವಿಲಿ ಮೈಸೂರು ಜನಸಂಖ್ಯೆ ಎಷ್ಟು ಗೊತ್ತಾ?"

"ಇಲ್ಲ."

"ಕೇವಲ 38 ಸಾವಿರ. ಅದರಲ್ಲಿ ಸಾಬರು ಎಷ್ಟು ಜನಿದ್ರು? ಹಾಗೇನೆ ಶ್ರೀರಂಗಪಟ್ಟಣದಲ್ಲಿ ಹಿಂದೂಗಳು ಬಹುಸಂಖ್ಯೆಲಿದ್ರು. ಆತನ ರಾಜ್ಯದಲ್ಲೂ ಹಿಂದೂಗಳೇ ಬಹುಸಂಖ್ಯಾತ್ರು. ಅದ್ಕೆ ಆತನ ಸಂಪುಟದಲ್ಲಿದ್ದ ಏಳೆಂಟು ಜನ ಮಂತ್ರಿಗಳಲ್ಲಿ 5 ಜನ ನಿಮ್ಮವರೆ ಇದ್ರು."

"ನಮ್ಮವ್ರುರೆ ಅಂದ್ರೆ?"

"ಬ್ರಾಹ್ಮಣರೇ ಐದು ಜನಿದ್ರು."

"ನಾವು ಗೌಡ್ರು ಸಾ."

"ಗೌಡ್ರೆ, ನಿಮಗೇನು ಬಂದದ್ರೀ? ಹೋಗಿಹೋಗಿ ಹಿಂಗಾಗಿದ್ದಿರಲ್ಲಾ?"

"ಹ್ಯಂಗೂ ಆಗಿಲ್ಲ, ಬಿಜೆಪಿ ಸೇರಿದ್ದೀನಿ."

"ಬಿಜೆಪಿಗ್ಯಾಕೆ ಸೇರಿದೆ."

"ಸಾಬರ ಕಂಡಾಗ್ರದಿಲ್ಲ ಅದ್ಕೆ."

"ಸಾಬರ ಕಂಡ್ರಾಗದೆ ಇದ್ರೆ ಸುಮ್ಮನಿರಬಹುದಿತ್ತಲವಾ? ನೋಡಾ, ಬಿಜೆಪಿಯಾದ ಕ್ಷಣದಿಂದ ನಿನಿಗೆ ಸಾಬರಕಂಡ್ರಾಗಲ್ಲ, ಹರಿಜನರ ಕಂಡ್ರೆ ವಿನಾಕಾರಣ ಅಸಹನೆ. ಅದೇತರ ಕೊರಮರು, ಕೊರಚರು, ಕುರುಬ್ರು, ಕುಂಚಿಟಿಗರು ಕಂಡ್ರೂ ನಿನಗೆ ಸೈರಣೆಯಿಲ್ಲ."

"ಆದೇನು ಮಾಡಬೇಕು?"

"ಬಿಜೆಪಿ ಬಿಟ್ಟು ಮನುಷ್ಯ ಮಾತ್ರದೋನಾಗಿದ್ರು ಸಾಕು. ಮನಸ್ಸಿಗೆ ನೆಮ್ಮದಿನಾದ್ರು ಇರತದೆ."

"ಅದಿರ್ಲಿ ಟಿಪ್ಪು ಏನು ಅಂತ ಹೇಳ್ರಸಾ."

"ನಾನಿನ್ನೂ ಮುಗಿಸಿಲ್ಲ."

"ಹೇಳಿ."

"ಟಿಪ್ಪು ವಿರೋಧ ಚಿದಾನಂದಮೂರ್ತಿ ಅನ್ನೋ ತಲೆಕೆಟ್ಟ ವಿದ್ವಾಂಸನಿಂದ ಸುರುವಾಯ್ತು. ಅದ ಆತ ಬಿಜೆಪಿಗಳ ತಲೆಗಂಟಿಸಿ ಬೆಂಕಿ ಕಾಯಿಸಿಗತಾ ಕುಂತವ್ರುನೆ."

"ಸುಗೇನೊ ಚಿದಾನಂದಮೂರ್ತಿ ಹೇಳದೇ ಚಿನ್ನಾಗ್ಗದೆ ಸಾ."

"ಇರ್ಲಿ ಕೇಳು. ಟಿಪ್ಪು ಬಗ್ಗೆ ಯಾವ ವಿದ್ವಾಂಸರೂ ಬರೀಲಿಲ್ಲ. ಆದ್ರೆ ನಮ್ಮ ಜನ ಲಾವಣಿ ಕಟ್ಟಿ ಹಾಡಿದ್ರು. ಜನಗಳ ಲಾವಣೆಲಿ ಸುಳ್ಳಿರದಿಲ್ಲ. ಎಲ್ಲಾರ ಕೇಳು."

"ಲಾವಣಿ ಹೇಳೋರು ಇನ್ನ ಇದ್ದಾರ?"

"ಬೇಕಾದಷ್ಟು ಜನವ್ರುರೆ. ಅವ್ನ ಮ್ಯಾಲೆ ಬರದಿರೊ ನಾಟಕ ಆಡಿದ ಕಂಪನಿಗಳು ಭಾಳ ಫೇಮಸ್ ಆಗಿದ್ವೊ. ಚಿಂದೋಡಿ, ವೀರಪ್ಪನ ಕಂಪನಿ, ಸಾವ್ರರಾರು ಪ್ರದರ್ಶನ ಮಾಡ್ತು. ವೀರಪ್ಪನೆ ಟಿಪ್ಪು ಆಗಿ ಬರ್ತಿದ್ದ. ಟಿಪ್ಪು ಎರಡ ಮಕ್ಕಳನ್ನ ಬ್ರಿಟಿಷರತ್ರ ಅಡ ಇಡುವಾಗ ಅಳದೇಯಿರೊ ಪ್ರೇಕ್ಷಕನೇ ಇಲ್ಲ."

"ಹೌದೆ?"

"ಈಗ ನಿನ್ನನ್ನೆ ನಿಮ್ಮಪ್ಪ ಯಾರದೊ ಮನೆ ಜೀತಕ್ಕಿಟ್ಟು ಅವ್ರುತ್ರ ಒಂದು ಸಾವಿರ ರೂಪಾಯಿ ಈಸಗಂಡು ಹೊರಟ ಅನ್ನು, ನಿನಿಗೇ ಆಗ್ಲಿ, ನಿಮ್ಮಪ್ಪನಿಗೇ ಆಗ್ಲಿ ಆಗ ಏನನ್ನಸ್ತದೆ?"

"!?"

"ಅಂಥದೊಂದು ಸ್ಥಿತಿನೆ ಟಿಪ್ಪು ಅನುಭವಿಸಿದ್ದ. ಈಗ ಸಿಟಿ ಬಸ್ಟಾಂಡಿದೆಯಲ್ಲ, ಸುಭಾಷ್ ನಗರದ ಕೆರೆ? ಅದು ಮೊದಲೆಂಗಿತ್ತು ಗೊತ್ತ?"

"ಗೊತ್ತು, ಹಿರಣ್ಣಯ್ಯನ ಕಂಪನಿ ನಾಟಕ ಮಾಡ್ತಿತ್ತು."

"ಅದ್ಕು ಮೊದ್ಲು ಕೆಎಸ್‌ಆರ್‌ಟಿಸಿ ನೌಕರರು ಟಿಪ್ಪು ಸುಲ್ತಾನ್ ನಾಟಕ ಮಾಡೋರು. ವೀರಪ್ಪ ಅನ್ನೋ ಡ್ರೈವರ್ ಟಿಪ್ಪು ಸುಲ್ತಾನ್ ಪಾತ್ರ ಮಾಡೋನು. ಥೇಟ್ ಟಿಪ್ಪು ತರನೆ ಇದ್ದ, ಸ್ಟೇಜಿಗೆ ಕುದುರೆ ಮ್ಯಾಲೆ ಬರೋನು. ಜನ



ಯಂಗೆ ನೋಡೋರು ಅಂದ್ರೆ ಆ ನಾಟಕವ, ಇಂಥ ರಾಜ ನಮ್ಮ ಮೈಸೂರಾಳಿದ್ನಲ್ಲ ಅಂತ ಹೆಮ್ಮೆ ಪಡಂಗೆ ಆ ನಾಟಕ ಆಡೋರು."

"ಅದೇನೂ ನಾನು ನೋಡಿಲ್ಲ."

"ನೋಡದೇಯಿದ್ರುವೆ ತಿಳಕಬೇಕಾಗುತ್ತೆ. ಓದಿಕೊಬೇಕಾಗುತ್ತೆ. ಬಿಜೆಪಿಗಳಿಗೂ ಓದಿಗೂ ಸಂಬಂಧವೇ ಇಲ್ಲ. ತಲೆ ತುಂಬ ಸುಳ್ಳು ತುಂಬಿಕೊಂಡೋರು ಏನೂ ಓದಕ್ಕೋಗಲ್ಲ."

"ಅಂಗ್ಯಲ್ಲ ಅನ್ನಬ್ಯಾಡ್ರಿ."

"ನೀನು ಓದ್ತಿಯ?"

"ಊ, ವಿಶ್ವವಾಣಿ, ವಿಕ್ರಮ, ಹೊಸ ದಿಗಂತ ಓದ್ತೀನಿ."

"ನೀನು ನಮ್ಮವ್ನು ಅಂತ ಪ್ರೀತಿಯಿಂದ ಹೇಳ್ತಿನಿ. ಮೊದಲು ಆ ಕಸ ಓದದ ನಿಲ್ಸು."

"ಯಾಕ್ರಿ?"

"ನೀನು ನಮ್ಮೆಲ್ಲರ ಮೆಚ್ಚಿನ ವ್ಯಕ್ತಿ ಆಗಕ್ಕೆ ಇರದೊಂದೇ ದಾರಿ."

"ನಮ್ಮ ಪ್ರತಾಪ ಸಿಮ್ಹನ ಲೇಖನ ಓದಿದ್ರೆ ಹಿಂಗೆ ಮಾತಾಡಲ್ಲ ನೀವು."

"ಓದಿದ್ದಿನಿ ಕಣಯ್ಯ, ನಾನೀಗ ನಿನ್ನತ್ರ ಮಾತಾಡ್ತಾಯಿರದೆ ಅವ್ರುನಿಗುತ್ರ ಸಿಗಲಿ ಅಂತ."

"ಅದೇನು ಜಲ್ದಿ ಹೇಳಿ."

"ಇವತ್ತು ನಿಮ್ಮ ಬಿಜೆಪಿಗಳು ಮತ್ತವ್ರುರ ಹೆಂಗಸರತ್ರ ಇರೋ ರೇಷ್ಮೆ ಸೀರೆ ಬಟ್ಟೆನ ಬೀದಿಗೆಸೀಬೇಕು. ಇಲ್ಲ ಸುಡಬೇಕು."

"ಯಾಕ್ರಿ?"

"ಟಿಪ್ಪು ರಾಜ ಆಗಿದ್ದಾಗ ರೇಷ್ಮೆಗೂಡು ತರಿಸಿ ರೈತರ ಉದ್ಧಾರ ಮಾಡಿದ್ದ."

"ಹೌದೆ?"

"ಅದೇ ತಳಿ ಇವತ್ತೂ ಮುಂದುವರಿದಿದೆ. ಶ್ರೀರಂಗಪಟ್ಟಣದ ಸುತ್ತಮುತ್ತ ಇರೋ ಒಕ್ಕಲ ಮಕ್ಕಳ ಬೇಸಾಯಕ್ಕೆ ಅನುಕೂಲಾಗ್ಲಿ ಅಂತ ಗಂಜಾಂನಲ್ಲಿ ಎತ್ತಿನಗಾಡಿ ನೇಗ್ಲು ನೊಗ ತಯಾರಿಸಿ ಕೊಡುತ್ತಿದ್ದ."

"ಅದು ಗೊತ್ತಿಲ್ಲ ನಮಿಗೆ."

ಥೂತ್ತೇರಿ

— ಯಾಹೂ

"ಆಗ ಕರ್ನಾಟಕದಲ್ಲಿ ಶಕ್ತಿ ದೇವತೆಗಳಿಗೆ, ನರಬಲಿ ಕೊಡ್ತಿದ್ರು. ಅದ ನಿಲ್ಲಿಸ್ದ."

"ಅದೆಲ್ಲಿ ಕೊಡ್ತಿದ್ರು?"

"ಯಾವಗಾರ ಸಿಕ್ಕು, ಕರಕಂಡೋಗಿ ತೋರುಸ್ತಿನಿ. ಅಮ್ಯಾಲೆ ನಿಮ್ಮ ಮೇಲುಕೋಟೆ ದೇವಸ್ಥಾನಕ್ಕೆ ಬೇಕಾದಷ್ಟು ಒಡವೆ ವಸ್ತ್ರ ಕೊಟ್ಟವ್ರುನೆ. ನಂಜನಗೂಡು ನಂಜುಂಡೇಶ್ವರನಿಗೆ ಎಷ್ಟು ಧನಕನಕ ಕೊಟ್ಟಿದ್ದ ಅಂದ್ರೆ ನೀನೇ ಹೋಗಿ ಕೇಳು, ದಾಖಲೆ ತೋರುಸ್ತರೆ."

"ಅದೇನವ್ವನ ಮನೆಯಿಂದ ಕೊಟ್ಟಿದ್ನೆ."

"ಇಲ್ಲ ಕೊಟ್ಟಿಲ್ಲ ಹೇಳು. ಇವತ್ತೇನು ಬೆಳಗಾಂನಲ್ಲಿ ಮರಾಠಿಗರು ಪುಂಡಾಟ ನಡುಸ್ತಾ ಅವ್ರುರೆ. ಅವ್ರುರು ಆಗ ಶೃಂಗೇರಿವರಿಗೂ ಬಂದು ಶಾರದೆ ವಿಗ್ರಹನೆ ಕಿತ್ತು ಯಸ್ಟು ಕೊಳ್ಳೆ ಹೊಡಕಂಡೋಗಿದ್ರು. ಸ್ವಾಮಿನು ಜಾಗ ಖಾಲಿ ಮಾಡಿದ್ರು. ಆಗ ಟಿಪ್ಪು ಸ್ವಾಮಿಗಳಿಗೆ ಪತ್ರ ಬರಿತನೆ."

"ಏನಂತ ಬರದಾ?"

"ಸ್ವಾಮಿ, ನೀವು ನನ್ನ ರಾಜ್ಯದಲ್ಲಿದ್ರೆ ಸುಭಿಕ್ಷವಾಗಿರುತ್ತೆ, ದಯಮಾಡಿ ಬನ್ನಿ ಅಂತ ಕರದು, ಶೃಂಗೇರಿಗೆ ಏನೇನು ಬೇಕೊ ಯಲ್ಲಾನು ಕೊಟ್ಟು, ವಿಗ್ರಹ ಮರುಸ್ಥಾಪನೆ ಆಗಂಗೆ ಮಾಡಿ, ದೇವಸ್ಥಾನದ ಪಾಕಶಾಲೆಲಿ ಮಾಮೂಲಿ ತರ ಬ್ರಾಹ್ಮಣರಿಗೆ ಅಡಿಗೆ ಮಾಡಿ ಹಾಕಂಗೆ ಮಾಡಿದ."

"ಮರಾಠಿ ನನಮಕ್ಕಳು ಅಂಥೋರಾ?"

"ಇವತ್ತು ಬೆಳಗಾವಲ್ಲಿ ಏನು ಮಾಡ್ತಾ ಅವ್ರುರೆ ಅಂತ ನೋಡಿದ್ರೆ ಗೊತ್ತಾಗಲವ ನಿನಿಗೆ?"

"ಅವ್ನು ಕೊಡಗಿನ ಜನರ ಮತಾಂತರ ಮಾಡಿದನಂತೆ, ಕ್ರಿಶ್ಚಿಯನ್ನರಿಗೂ ತೊಂದ್ರೆ ಕೊಟ್ಟನಂತೆ."

"ಕೊಟ್ಟವ್ರುನೆ ಕಣಯ್ಯಾ. ಇವತ್ತು ಸಿದ್ದರಾಮಯ್ಯ ಬಿಜೆಪಿಗಳು ಟಿಪ್ಪು ಜಯಂತಿ ಮಾಡದು ಬೇಡ ಅಂದಿದ್ಕೆ ಹಿಡಿದು ಜೈಲಿಗಾಕಲಿಲವ? ಅಂಗೆ ಆವತ್ತಿನ ರಾಜದ್ರೋಹದ ಕೆಲಸಕ್ಕೆ ಸಂಬಂಧಪಟ್ಟೋರು ತೊಂದ್ರೆ ಅನುಭವಿಸಿರತರೆ."

"ಕ್ರಿಶ್ಚಿಯನ್ನರು ವಿರೋಧ ಮಾಡ್ತವ್ರುರೆ."

"ಮಾಡಬೇಕಾದ್ದೆಯ. ಆ ಅವಿವೇಕಿಗಳು ನಡೆಸಿರೊ ಜಲಿಯನ್‌ವಾಲಾ ಬಾಗ್ ಘಟನೆ ಇತಿಹಾಸದಲ್ಲಿ ಮರಿಯೊ ಅಂಥದಲ್ಲ. ಇಂಗ್ಲಿಷ್‌ನೋರ ವಿರುದ್ಧ ಟಿಪ್ಪು ಹೋರಾಡಿದ್ಕೆ ಈಗವ್ರು ಅಂಗಂದವೆ. ನಿನಿಗಿನ್ನೊಂದು ವಿಷಯ ಗೊತ್ತ."

"ಏನದು?"

"ಈ ದೇಶದ ನೂರಾರು ವರ್ಷ ಆಳಿದ ಕ್ರಿಶ್ಚಿಯನ್ನರು ಸ್ವಾತಂತ್ರ್ಯ ಕೊಟ್ಟು ದೇಶ ಬುಟ್ಟೋದ್ರು ಯಾಕೇಳು?"

"ನೀವೇ ಹೇಳಿ?"

"ಅಪ್ಪರಮಟ್ಟಿಗೆ ನಮಿಗೆ ಮಾಡಬಾರ್ದ ಮಾಡಿದ್ರು. ನಮ್ಮ ಕಿತ್ತೂರ ಚೆನ್ನಮ್ಮನ 7 ವರ್ಷ ಒಂದೇ ಒಂದು ರೂಮಲ್ಲಿಟ್ಟಿದ್ರು. ಟಿಪ್ಪು ಸುಲ್ತಾನನ್ನ ಕೊಂದೆ ಹಾಕಿದ್ರು. ಇದೆಲ್ಲಾ ಕಾರಣಕ್ಕೆ ಹೆದರಿಕೊಂಡು ದೇಶಬುಟ್ಟೋದ್ರು. ಅದೆ ಸಾಬರು ಇಲ್ಲೆ ಉಳುದ್ರು. ಯಾಕೆ ಅಂತ ಹೇಳ್ತಿಯಾ?"

"ಗೊತ್ತಿಲ್ಲ ಹೇಳಿ?"

"ಈ ಸಾಬರು ನಮ್ಮ ಹಳ್ಳಿ ಕಡಿಕೂ ಬಂದು ಅವ್ರುರೂ ಒಂದು ಜಾತಿಯಾಗಿ ಉಳಕೊಂಡು ರೈತನಿಗೆ ಎಷ್ಟು ಅನುಕೂಲ ಮಾಡಿಕೊಟ್ಟವ್ರುರೆ ಗೊತ್ತ? ನಮ್ಮ ಬದುಕೇ ಸಾಬರಿಂದ ಸುರುವಾಗದು. ಅಂಗಾಗಿ ಅವ್ರುರೆಲ್ಲೂ ಹೋಗದೆ ನಮ್ಮ ಜೊತೆ ಉಳಕೊಂಡ್ರು. ಉಳುಕೊಂಡವ್ರುರೆ. ಮುಂದೂ ಉಳಕೊಂಡಿರತರೆ. ನೀವೇನಾರ ಜಾಸ್ತಿ ಗಾಂಚಾಲಿ ಮಾಡಿದ್ರೆ ಸಾಯಕ್ಕೂ ತಯಾರಾಯ್ತರೆ. ಆದ್ರೆ ಸುಮ್ಮಸುಮ್ಮನೆ ಸಾಯಲ್ಲ. ನೀವೆಂಥಾ ಪುಕ್ಕಲ ಬಡ್ಡೆತ್ತವು ಅಂದ್ರೆ ನೀವು ಸ್ಕೂಲ್ ಫೀಲ್ಡಲಿ ಕವಾಯತು ಮಾಡುವಾಗ ಒಬ್ಬನೇ ಒಬ್ಬ ಸಾಬಿ ಮಚ್ಚು ಹಿಡಕೊಂಡು ಬಂದಾ ಅಂದ್ರೆ ಯಂಗೋದ್ತಿರಿ ಗೊತ್ತ? ಓಡಿ ಶೂದ್ರನ ಮನೆ ಸೇರಿಕತ್ತಿರಿ. ಅವ್ನ ಮರೆ ಹೊಕ್ಕು ಉಳಕತ್ತಿರಿ. ಅಂಥಾ ಧೈರ್ಯವಂತ್ರು."


"ನಾವೇನು ಪುಕ್ಕಲರಲ್ಲ, ನಾವೂ ಧೈರ್ಯವಂತ್ರು ಕಂಡ್ರಿ."

"ನೋಡಪ್ಪ, ಈ ದೇಶದಲ್ಲಿ ಶೂದ್ರ ಶಕ್ತಿ ಎದ್ದಿಲ್ಲ, ಸದ್ಯ ವಿಳುಸ್ತಾಯಿದ್ದಿರಿ. ಒಳ್ಳೆದು ನಿಮಗೆ. ಕಡೆದಾಗಿ ಒಂದು ಮಾತೇಳ್ತಿನಿ. ಅದು ವಿವೇಕಾನಂದರು ಹೇಳಿದ್ದು. ಅದೇನಪ್ಪ ಅಂದ್ರೆ, ಹಿಂದೂಸ್ತಾನ ಕಟ್ಟಬೇಕಾದ್ರೆ ಹಿಂದೂ ಮೆದುಳು ಮುಸ್ಲಿಂ ದೇಹದಿಂದ ಕಟ್ಟಬೇಕಂತೆ. ಆಗ ಮಾತ್ರ ಭಾರತ ಬಲಿಷ್ಠವಾಗುತ್ತೆ ಅಂದಿದ್ರು. ಗೊತ್ತಾ?"

"ಗೊತ್ತಿಲ್ಲ ಸಾ."

"ಥೂತ್ತೇರಿ!!" ■

ಮಂಡ್ಯ: ಮನ್‌ಮುಲ್ ನಿರ್ದೇಶಕ ಡಾಲು ರವಿಯ ದೌಲತ್ತು





ಮಂಡ್ಯ ಜಿಲ್ಲಾ ಹಾಲು ಒಕ್ಕೂಟ(ಮನ್‌ಮುಲ್)ದ ನಿರ್ದೇಶಕ ಕೆ.ಆರ್.ಪೇಟೆಯ ಡಾಲು ರವಿಯ ದೌಲತ್ತು ಮಿತಿಮೀರಿದೆ. ಕೆ.ಆರ್.ಪೇಟೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರನ ಬಂಟನಾಗಿರುವ ಈತ ಮನ್‌ಮುಲ್ ನಿರ್ದೇಶಕನಾಗಿ ಗೆದ್ದಿದ್ದೇ ತಡ, ಅವನ ಬ್ಯಾಂಕ್ ಬ್ಯಾಲೆನ್ಸ್‌ನ ಗ್ರಾಫು ಹಿಗ್ಗಾಮುಗ್ಗಾ ಏರುತ್ತಿದೆ. ಕಾಂಗ್ರೆಸ್‌ನಿಂದ ಗೆದ್ದಿರುವ ಈತ ಮನ್‌ಮುಲ್‌ನ ನೇಮಕಾತಿ, ಜಮೀನು ಖರೀದಿಯಲ್ಲಿ ನಡೆಸಿರುವ ಭಾನ್ಗಡಿಗಳಿಂದಾಗಿ ಇವತ್ತು ಏನಿಲ್ಲವೆಂದರೂ ಹಲವು ಕೋಟಗಳಿಗೆ ತೂಗುತ್ತಾನೆ. ಸಿಕ್ಕಿದ್ದಕ್ಕೆಲ್ಲಾ ಬಾಯಿ ಹಾಕಿ ತಿನ್ನುವ ಈತನ ಗೆಬರಾಟ ಕಂಡು ಕಾಂಗ್ರೆಸ್ ಮುಖಂಡರೇ ಥಂಡಾ ಹೊಡೆದು ಹೋಗಿದ್ದಾರೆ. ಒಂದುವೇಳೆ ಈತನೇನಾದರು ಮನ್‌ಮುಲ್‌ನ ಅಧ್ಯಕ್ಷನೇ ಆಗಿಬಿಟ್ಟದ್ದರೆ ಇಷ್ಟೊತ್ತಿಗಾಗಲೇ ಅದನ್ನು ನುಂಗಿ ನೀರು ಕುಡಿಯುತ್ತಿದ್ದುದರಲ್ಲಿ ದೌಟೇ ಬೇಡ. ಹಾಗಂತ ಸ್ವತಃ ಕಾಂಗ್ರೆಸ್ಸಿಗರೇ ಕಿಚಾಯಿಸುತ್ತಿದ್ದಾರೆ.

ತುಘಲಕ್ ದರ್ಬಾರ್

ಮೊನ್ನೆಯಷ್ಟೆ ಮನ್‌ಮುಲ್ ನಿರ್ದೇಶಕ ಡಾಲು ರವಿ ಅಲಿಯಾಸ್ ದೌಲತ್ ರವಿ (ಇದು ಆತನ ಸಹಚರರೇ ನೀಡಿರುವ ಬಿರುದು) ವಿರುದ್ಧ ಅಕ್ಕಿಹೆಬ್ಬಾಳು ಹೋಬಳಿಯ ಅಂಬಿಗರಹಳ್ಳಿ ಪುರ ಗ್ರಾಮಸ್ಥರು ಕೆ.ಆರ್.ಪೇಟೆಯಲ್ಲಿರುವ ಮನ್‌ಮುಲ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದರು. ಇದಕ್ಕೆ ಕಾರಣ ಡಾಲು ರವಿಯ ತೊಘಲಕ್ ದರ್ಬಾರ್. ಅಂಬಿಗರಹಳ್ಳಿಯ ಪುರ ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವಿದ್ದು, ಕಳೆದ ಐದು ವರ್ಷಗಳಿಂದ ಮಹಿಳೆಯರು ಯಾವ ರಾಜಕೀಯಕ್ಕೂ ಆಸ್ಪದವಿಲ್ಲದಂತೆ ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡಿಕೊಂಡು ಬರುತ್ತಿದ್ದರು. ಜೆಡಿಎಸ್ ಪ್ರಾಬಲ್ಯವಿರುವ ಅಂಬಿಗರಹಳ್ಳಿ ಪುರ ಹಾಲು ಉತ್ಪಾದಕರ ಮಹಿಳಾ ಸಂಘದ ಅಧ್ಯಕ್ಷೆ ಜೆಡಿಎಸ್‌ನ ವಿಶಾಲಾಕ್ಷಮ್ಮ ಕಳೆದ ಜಿ.ಪಂ. ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜಿಗಿದ ನಂತರ ಸಂಘದ ವಿಚಾರದಲ್ಲಿ ಮನ್‌ಮುಲ್ ನಿರ್ದೇಶಕ ಡಾಲು ರವಿ ಎಂಟ್ರಿಯಾಗಿ ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನಕ್ಕೆ ಕೈಹಾಕಿದ್ದ.

ಅದರ ಮೊದಲ ಭಾಗವಾಗಿ ಜೆಡಿಎಸ್ ಪ್ರಾಬಲ್ಯವಿರುವ ಸಂಘದಲ್ಲಿ ಕಾಂಗ್ರೆಸ್ ಸದಸ್ಯರನ್ನ ತುಂಬುವ ಸ್ಕೆಚ್ ಹಾಕಿದ್ದಾನೆ. ಅದರಂತೆ ಹಾಲು ಉತ್ಪಾದಕರಲ್ಲದ, ಹಸುವನ್ನೇ ಸಾಕದ ತನ್ನ ಹಿಂಬಾಲಕರಿಗೆ ಮನೆಗೆ ಎರಡು-ಮೂರು ಷೇರುಗಳನ್ನು ಕೊಡಿಸಲು ಮುಂದಾಗಿದ್ದ. ಷೇರು ನೀಡದಿದ್ದರೆ ನಿಮ್ಮ ಡೈರಿಯ ಹಾಲನ್ನೇ ಮನ್‌ಮುಲ್ ಸ್ವೀಕರಿಸದಂತೆ ಮಾಡುತ್ತೇನೆ ಎಂದು ಮಹಿಳಾ ಸದಸ್ಯರಿಗೆ ಧಮಕಿ ಹಾಕಿದ್ದ. ಹಾಲು ಉತ್ಪಾದಕರ ಸಂಘದ ಬೈಲಾ ಪ್ರಕಾರ ಸಂಘದಲ್ಲಿ ಷೇರು ಪಡೆಯಬೇಕಾದ ವ್ಯಕ್ತಿ 180 ದಿನ ಹಾಲು ಹಾಕಿರಬೇಕು. ಸಂಘದ ಸದಸ್ಯರು ಸರ್ವಾನುಮತದ ತೀರ್ಮಾನ ಕೈಗೊಂಡರೆ 20 ದಿನ ಹಾಲು ಹಾಕಿದವರಿಗೂ ಷೇರು ಕೊಡಬಹುದು. ಒಟ್ಟಿನಲ್ಲಿ ಸಂಘದ ತೀರ್ಮಾನವೇ ಅಂತಿಮ. ಆದರೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಂಘದಲ್ಲಿ ಜೆಡಿಎಸ್‌ನ 9 ಮಂದಿ ಸದಸ್ಯರಿದ್ದಾರೆ. ಹಾಲಿ ಅಧ್ಯಕ್ಷೆಯಾಗಿರುವ ವಿಶಾಲಾಕ್ಷಮ್ಮ ಜೆಡಿಎಸ್‌ನಿಂದ ಗೆದ್ದಾಕೆ. ಆಗ ನಡೆದ ಒಪ್ಪಂದದಂತೆ 8 ತಿಂಗಳು ಈಕೆ ಅಧ್ಯಕ್ಷೆಯಾಗಿರಬೇಕಿತ್ತು, ಕಳೆದ ಜಿ.ಪಂ. ಚುನಾವಣೆಯ ವೇಳೆಗೆ, ವಿಶಾಲಾಕ್ಷಮ್ಮ ತನ್ನ ಗಂಡ ಹರೀಶ್‌ಗೌಡನ ಸಮೇತ ಕಾಂಗ್ರೆಸ್ ಪಕ್ಷಕ್ಕೆ ಜಿಗಿದಿದ್ದಳು.

ಹೀಗೆ ಕಾಂಗ್ರೆಸ್‌ಗೆ ಜಿಗಿದ ವಿಶಾಲಾಕ್ಷಮ್ಮ 8 ತಿಂಗಳಾದರೂ ಅಧಿಕಾರ ಬಿಟ್ಟು ಕೊಡಲೇ ಇಲ್ಲ, ಸಂಘಗಳ ನೂತನ ಕಾಯ್ದೆ ಪ್ರಕಾರ ಅಧ್ಯಕ್ಷ-ಉಪಾಧ್ಯಕ್ಷರ ಅಧಿಕಾರಾವಧಿ ಎರಡೂವರೆ ವರ್ಷಗಳಿವೆ. ಅದರಂತೆ ಈಗಾಗಲೇ 22 ತಿಂಗಳು ಅಧ್ಯಕ್ಷೆಯಾಗಿರುವ ವಿಶಾಲಾಕ್ಷಮ್ಮ 30 ತಿಂಗಳುಗಳ ನಂತರವೇ ಅಧಿಕಾರದಿಂದ ಕೆಳಗಿಳಿಯಲು ಸಾಧ್ಯ, ಇದನ್ನು ಅರಿತ ವಿಶಾಲಾಕ್ಷಮ್ಮ, ಆಕೆಯ ಗಂಡ ಹರೀಶ್‌ಗೌಡ, ಡಾಲು ರವಿಯ- ದುಷ್ಟಕೂಟ ಸಂಘಕ್ಕೆ ಕಾಂಗ್ರೆಸ್ ಕಾರ್ಯಕರ್ತರನ್ನು ತುಂಬುವ ಮಾಸ್ಟರ್ ಪ್ಲಾನ್ ... ಅದನ್ನ ಕಾರ್ಯರೂಪಕ್ಕೆ ತರಲು ಹೊರಟಿತ್ತು, ಆತ ... ಕೊಡಿಸಲು ಹೊರಟಿದ್ದು ಹಸುವನ್ನೇ ಸಾಕದ, ತನ್ನ ... ಕೇಳುವ ಹಿಂಬಾಲಕರಿಗೆ. ಹಾಲನ್ನೇ ಹಾಕದ 4... ಮಂದಿಗೆ ಷೇರು ಕೊಡಲು ಇತರೆ ಸದಸ್ಯರು ಒ...

ಆಗ ಡಾಲು ರವಿ ಮನ್‌ಮುಲ್‌ನ ಅಕ್ಕಿ ಹೆ... ಹೋಬಳಿಯ ವಿಸ್ತರಣಾಧಿಕಾರಿ ಮಧುಗೆ ಅಂಬಿಗರ... ಪುರ ಗ್ರಾಮದ ಡೈರಿಯ ಹಾಲನ್ನು ಸ್ವೀಕರಿಸದಂತೆ ... ಹಾಕಿದ್ದ, ಹೆದರಿದ ಮಧು ಹಾಲು ಸಂಗ್ರಹಣೆ ಮಾ... ವ್ಯಾನನ್ನು ತಡೆಹಿಡಿದ. ಪರಿಣಾಮವಾಗಿ ಅಂದು ... ಮತ್ತು ಸಂಜೆ ಸಂಗ್ರಹವಾಗಿದ್ದ 10 ಕ್ಯಾನ್‌ಗೂ ... ಹಾಲು ಹಾಗೇ ಉಳಿಯಿತು. ಡಾಲು ರವಿ ಮ... ಕ್ಷುಲ್ಲಕ, ಸಣ್ಣತನದ ರಾಜಕೀಯಕ್ಕೆ ಬೇಸತ್ತ ಮಹಿಳೆ... ಕ್ಯಾನ್‌ಗಳಲ್ಲಿದ್ದ ನೂರಾರು ಲೀಟರ್ ಹಾಲನ್ನು ಕಣ್ಣೀರಿ... ಚರಂಡಿಗೆ ಸುರಿದರು.

ಮಾರನೆ ದಿನ ಹಾಲು ಉತ್ಪಾದಕರ ಸ... ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರುವ, ತನಗೆ ... ನೀಡದ ಡೈರಿಗಳಿಗೆ ತೊಂದರೆ ಕೊಡುತ್ತಿರುವ ನಿ... ಡಾಲು ರವಿಯ ತುಘಲಕ್ ದರ್ಬಾರ್ ಖಂಡಿಸಿ ... ಹೆಬ್ಬಾಳು ಜಿ.ಪಂ. ಸದಸ್ಯ ಬಿ.ಎಲ್.ದೇವರಾಜ್, ಶಿ... ಜಿ.ಪಂ. ಸದಸ್ಯ ಹೆಚ್.ಟಿ.ಮಂಜುನಾಥ್, ಕೆ.ಆರ್... ತಾ.ಪಂ. ಉಪಾಧ್ಯಕ್ಷ ಜಾನಕೀರಾಂ ನೇತೃತ್ವದಲ್ಲಿ ನೂ... ಮಹಿಳೆಯರು ಮನ್‌ಮುಲ್ ಉಪ ಕಚೇರಿ ... ಪ್ರತಿಭಟನೆ ನಡೆಸಿದ್ದರು. ಸಂಘದ ಅಧ್ಯಕ್ಷೆ ವಿಶಾಲಾ... ಡಾಲು ರವಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ... ಕಳೆದರೂ ಹಾಲು ಉತ್ಪಾದಕರಿಗೆ ಬಟವಾಡೆ ಮಾಡ... ಈ ನಡುವೆ ಪ್ರತಿಭಟನೆ ಮಾಡುತ್ತಿದ್ದ ಮನ್‌ಮುಲ್ ... ಅಧ್ಯಕ್ಷ ಎಂ.ಬಿ.ಹರೀಶ್ 'ಹಾಲು ಉತ್ಪಾದಕರಲ್ಲದ... ಷೇರು ಕೊಡಬಹುದಾ?' ಅಂತ ಮ್ಯಾನೇಜರ್ ಮಧು... ಕೇಳಿದರೆ 'ಇಲ್ಲ' ಎನ್ನುತ್ತಲೇ ಅತ್ತ ಡಾಲು ರವಿ ಹೇಳಿ... ಕುಣಿಯುತ್ತಾ ಎಡಬಿಡಂಗಿಯಂತೆ ಆಡುತ್ತಿದ್ದಾನೆ. ಈ ವಿ... ಮನ್‌ಮುಲ್ ಎಂಡಿ ಗುರುಲಿಂಗಯ್ಯನಿಗೆ ತಿಳಿದಿ... ಆತ ಡಾಲು ರವಿಯ ತುಟಬಿಚ್ಚದಿರುವುದು ಅನು... ಮೂಡುವಂತೆ ಮಾಡಿದೆ.


ಯಾರೀ ಡಾಲು ರವಿ

ಕೆ.ಆರ್.ಪೇಟೆ ತಾಲ್ಲೂಕಿನ ಸಂತೇಬಾಚ... ಹತ್ತಿರವಿರುವ ಕೈಗೋನಹಳ್ಳಿಯ ಡಾಲು ರವಿ ಕೆಲ... ಮುಂಬೈನಲ್ಲಿದ್ದ. ಈತನ ತಂದೆ ಕೃಷ್ಣೇಗೌಡ, ಹೇಮ... ನಾಲಾ ವಿಭಾಗದಲ್ಲಿ ಅಕೌಂಟೆಂಟ್ ಆಗಿದ್ದರು. ಬಾಂಬೆ... ಅದೇನು ದಂಧೆ ನಡೆಸಿದನೋ ಏನೋ ವಾ...


ಗಂಗಾವತಿ: ಬಿಜೆಪಿ ಟಿಕೆಟ್‌ಗಾಗಿ ಮೂರು ಮತ್ತೊಬ್ಬರು




ವಿರೂಪಾಕ್ಷಪ್ಪ



ರಾಮುಲು



ಶಿವರಾಮುಗೌಡ



ಪರಣ್ಣ ಮುನವಳ್ಳಿ

ಕೊಪ್ಪಳ ಜಿಲ್ಲೆಯ ರಾಜಕೀಯ ಶಕ್ತಿ ಕೇಂದ್ರವಾದ ಗಂಗಾವತಿಯಲ್ಲಿ ಮುಂಬರುವ ಎಂಎಲ್ಲೆ ಎಲೆಕ್ಷನ್ನಿಗೆ ಬಿಜೆಪಿಯ ಟಿಕೆಟ್‌ಗಾಗಿ ಈಗಿನಿಂದಲೇ ಭರ್ತಿ ಕದನ ಏರ್ಪಟ್ಟಿದೆ. ಮಾಜಿ ಸಂಸದ ಎಸ್.ಶಿವರಾಮೇಗೌಡ, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಬಿಜೆಪಿ ಜಿಲ್ಲಾಧ್ಯಕ್ಷ ಸಿಂಗನಾಳ ವಿರುಪಾಕ್ಷಪ್ಪ ಹಾಗೂ ಹಿರಿಯ ಮುಖಂಡ ಎಚ್.ಗಿರೇಗೌಡ ವಕೀಲರ ನಡುವೆ ಟಿಕೆಟ್ ವಾರ್ ನಡೆದಿದೆ. ಈ ರೇಸಿನಲ್ಲಿ ಶಿವರಾಮೇಗೌಡ, ಪರಣ್ಣ ಮುನವಳ್ಳಿಯ ಹೆಸರುಗಳು ಮುಂಚೂಣಿಯಲ್ಲಿ ಇವೆಯಾದರೂ ಸಿಂಗನಾಳ ವಿರುಪಾಕ್ಷಪ್ಪ ಮತ್ತು ಗಿರೇಗೌಡ ತಮ್ಮದೇ ರಾಜಕೀಯ ಲೆಕ್ಕಾಚಾರದಲ್ಲಿ ತಾಲೀಮು ಆರಂಭಿಸಿದ್ದಾರೆ.

ಭತ್ತದ ಕಣಜ ಗಂಗಾವತಿಯಲ್ಲಿ ಬಹುತೇಕ ಆಂಧ್ರದಿಂದ ವಲಸೆ ಬಂದವರದ್ದೇ ಕಾರುಬಾರು. ಈ ಕಾಸುವಾಲಾಗಳ ಜಮೀನುಗಳಲ್ಲಿ ಕನ್ನಡಿಗರು ಕೂಲಿ ಆಳುಗಳಾಗಿ ದುಡಿಯುವ ದುರ್ಗತಿಯೇ ಕರ್ನಾಟಕವನ್ನು ಕೆಣಕುವಂತಿರುತ್ತೆ, ಇಲ್ಲಿನ ರಾಜಕಾರಣದಲ್ಲೂ ಆಂಧ್ರಾವಾಲಾಗಳದ್ದೆ ಮೇಲುಗೈ. 1999ಕ್ಕೂ ಮೊದಲು ಬಿಜೆಪಿ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿತ್ತು, ಈ ಕ್ಷೇತ್ರದಲ್ಲಿ ಮೊದಲು ಹೆಂಡದ ಉದ್ದಿಮೆ ಆರಂಭಿಸಿ ಆ ಮೂಲಕ ರಾಜಕೀಯ ಶುರು ಮಾಡಿದ ಎಚ್.ಜಿ. ರಾಮುಲು ಮತ್ತು ಅವರ ಸಂಬಂಧಿ ಮುರಳೀಧರ ಶಾಸಕರಾಗಿ ಮೆರೆದಾಡಿದರು. ನಂತರ ಈ ಕ್ಷೇತ್ರದಲ್ಲಿ ಕಾಂಗ್ರೆಸನ್ನು ಗುತ್ತಿಗೆ ಪಡೆದುಕೊಂಡಂತೆ ವರ್ತಿಸುವ ಆಂಧ್ರ ಮೂಲದ ರಾಜವಂಶಸ್ಥ ಮನೆತನಕ್ಕೆ ಸೇರಿದ ಶ್ರೀರಂಗದೇವರಾಯಲು ನಾಲ್ಕು ಸಲ ಶಾಸಕನಾಗಿ, ಒಮ್ಮೆ ಸಚಿವನಾಗಿ ಮೆರೆದಾಡಿದ್ದರು. 80-90 ರ ದಶಕದಲ್ಲಿ ಕಾಂಗ್ರೆಸ್ಸಿಗೆ ಪರ್ಯಾಯ ಶಕ್ತಿಯಾಗಿ ಗೋಚರಿಸಿದ್ದು ಜನತಾ ಪರಿವಾರ. ಜನತಾದಳದ ಹಿರಿಯ ಮುಖಂಡ ಭತ್ತದ ಮರಿಯಪ್ಪನವರು ಕಾಂಗ್ರೆಸ್ಸಿನ ಎಚ್.ಜಿ.ರಾಮುಲುರನ್ನು ಸೋಲಿಸಿ ಶಾಸಕನಾಗಿ ಆಯ್ಕೆಯಾಗುವ ಮೂಲಕ ಕೈ ಪಾರ್ಟಿಯ ನಾಗಾಲೋಟಕ್ಕೆ ಬ್ರೇಕ್ ಹಾಕಿದ್ದರು. 1999ರಲ್ಲಿ ಜನತಾ ದಳ ವಿನಾಶದಂಚಿಗೆ ತಲುಪಿ ವಿದಳನವಾದಾಗ ಬಿಜೆಪಿ ಮೆಲ್ಲಗೆ ಉಸಿರಾಡಲು ಶುರು ಮಾಡಿತು.

ಇಂಥಾ ಬಿಜೆಪಿಗೆ ಆಸರೆಯಾಗಿ ಬಂದದ್ದು ರೈತಸಂಘದ ಮೂಲಕ ತಮ್ಮ ಹೋರಾಟದ ಬದುಕು ಆರಂಭಿಸಿದ್ದ ಎಚ್.ಗೀರೆಗೌಡ ವಕೀಲರು. ಈತ 1994ರ ವಿಧಾನಸಭಾ ಚುನಾವಣೆಯಲ್ಲಿ ರೈತ ಸಂಘದ ಅಭ್ಯರ್ಥಿಯಾಗಿ ಗಮನ ಸೆಳೆದಿದ್ದಲ್ಲದೆ 1999ರಲ್ಲಿ ಅಂದಿನ ಕಾಂಗ್ರೆಸ್ ಶಾಸಕ ಶ್ರೀರಂಗದೇವರಾಯಲು ವಿರುದ್ಧ ಕೆಲವೇ ಮತಗಳ ಅಂತರದಲ್ಲಿ ಪರಾಭವಗೊಂಡು ಅಚ್ಚರಿ ಮೂಡಿಸಿದ್ದರು. 2004ರಲ್ಲಿ 3ನೇ ಬಾರಿ ಗೆಲುವಿನ ದಡದಲ್ಲಿ ಇದ್ದಾಗ ಬರಸಿಡಿಲಿನಂತೆ ಬಡಿದ ಜೆಡಿಎಸ್‌ನ ಇಕ್ಬಾಲ್ ಅನ್ಸಾರಿ ಕೇವಲ 1500 ಮತಗಳ ಅಂತರದಲ್ಲಿ ಗಿರೇಗೌಡನಿಗೆ ಮತ್ತೊಂದು ಸೋಲಿನ ರುಚಿ ತೋರಿಸಿದ್ದರು.

2008ರಲ್ಲಿ ರಾಜ್ಯಾದ್ಯಂತ ಯಡ್ಡಿ ಘೋಷಿತ ಗಾಳಿ ಬೀಸಿದ್ದಾಗ ಗಂಗಾವತಿಯಿಂದ ಟಿಕೆಟ್‌ಗಾಗಿ ಗಿರೇಗೌಡ ವಿಪರೀತ ಪ್ರಯತ್ನಪಟ್ಟರೂ ಕಾಂಗ್ರೆಸ್ಸಿನಿಂದ ಪಕ್ಷಾಂತರವಾಗಿದ್ದ ಪರಣ್ಣ ಮುನವಳ್ಳಿಗೆ ಟಿಕೆಟು ಒಲಿದು ಬಂದಿತ್ತು. ಅಷ್ಟೊತ್ತಿಗಾಗಲೇ ಇಕ್ಬಾಲ್ ಅನ್ಸಾರಿ ಜನರ ನಡುವೆ ಹೆಸರು ಕೆಡಿಸಿಕೊಂಡಿದ್ದರಿಂದ ಪರ... ಗೆದ್ದು ಶಾಸಕನೂ ಆದರು. ಆದರೆ 2013ರ ವೇ... ಫಲಿತಾಂಶ ಉಲ್ಟಾ ತಿರುಗಿ ಜೆಡಿಎಸ್‌ನ ಅನ್ಸಾರಿ ಬರೋಬ್ಬರಿ 30 ಸಾವಿರ ಮತಗಳ ಅಂತರದಿಂದ ಪರಣ್ಣ ಮುನವಳ್ಳಿಗೆ ಹೀನಾಯ ಸೋಲಿನ ರುಚಿ ಉಣ್ಣಿಸಿದ್ದರು. ಆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪುರಾತನ ಕುಳ ಎಚ್.ಆರ್.ಶ್ರೀನಾಥ ಜುಜುಬಿ ಸಾವಿರ ಮತ ಪಡೆದು ಠೇವಣಿ ಕಳೆದುಕೊಂಡದ್ದು ಗಂಗಾವತಿಯಲ್ಲಿ ಕಾಂಗ್ರೆಸ್‌ಗೆ ಒದಗಿಬಂದಿರುವ ಹೀನಾಯ ಪರಿಸ್ಥಿತಿಗೆ ಕನ್ನಡಿ ಹಿಡಿದಂತಿತ್ತು.

ಆದರೆ 2018ರ ಚುನಾವಣೆಯ ಲೆಕ್ಕಾಚಾರ ಈಗಾಗಲೇ ಭಾರೀ ಸದ್ದು ಮಾಡುತ್ತಿದೆ. ಹಾಲಿ ಜೆಡಿಎಸ್ ಶಾಸಕ ಅನ್ಸಾರಿ ಗೌಡರ ಹಟ್ಟಿಗೆ ಬಂಡಾಯವೆಸೆದು ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಮತ ನೀಡಿ ಜೆಡಿಎಸ್‌ನಿಂದ ಅಮಾನತ್ತಾಗಿದ್ದಾರೆ. ಆದಾಗಲೇ ಕಾಂಗ್ರೆಸ್ ಪಕ್ಷದಲ್ಲಿ ಒಂದು ಕಾಲೂರಿರುವ ಅನ್ಸಾರಿ ಮುಂದಿನ ಎಲೆಕ್ಷನ್‌ನಲ್ಲಿ ಕೈ ಹುರಿಯಾಳಾಗುವ ಸಾಧ್ಯತೆಗಳು ದಟ್ಟವಾಗಿವೆ. ಅನ್ಸಾರಿ ವಿರುದ್ಧ ತೊಡೆತಟ್ಟಲು ಬಿಜೆಪಿಯ ನಾಲ್ವರು ಟಿಕೆಟಿಗಾಗಿ ಕಸರತ್ತು ನಡೆಸುತ್ತಿದ್ದಾರೆ.


ಮಾಜಿ ಸಂಸದ ಶಿವರಾಮೇಗೌಡ ಯಡ್ಡಿಯ ಪರಮಾಪ್ತ, ಈಶ್ವರಪ್ಪನಂತ ಬಾಯಿಬಡುಕನನ್ನು, ... ರವಿಯಂತ ಕೂಗುಮಾರಿಯನ್ನೂ ಸೈಡ್‌ಲೈನ್‌ಗೆ ... ತಾನು ನಡೆದದ್ದೇ ಹಾದಿ ಎನ್ನುವಂತೆ ಕಾಲು ಕೆರೆಯುತ್ತಿರುವ ಯಡ್ಡಿ ಸಾಹೇಬ ಶಿವರಾಮೇಗೌಡ... 'ಟಿಕೆಟು ನಿನಗೇ ಗ್ಯಾರಂಟಿ' ಅನ್ನೋ ಆಶ್ವಾಸನೆ ನೀಡಿದ್ದಾರೆ ಎನ್ನುವ ವದಂತಿ ಕೇಳಿಬರುತ್ತಿದೆ. ಕ್ಷೇತ್ರ... ಬಹುಸಂಖ್ಯಾತ ಜನ ಪಂಚಮಸಾಲಿ ಸಮುದಾಯ... ಸೇರಿರೋದು ಆತನ ಪ್ಲಸ್‌ಪಾಯಿಂಟ್. ಅತ್ತ ಮಾ... ಶಾಸಕ ಬಣಜಿಗ ಸಮುದಾಯದ ಪರಣ್ಣ ಮುನವ... ಕೂಡಾ ಕಡಿಮೆ ನೀರಿನಲ್ಲಿ ಮುಳುಗುವ

ಕೆ.ಆರ್.ಪೇಟೆಗೆ ಬಂದಾಗ ಅವನ ಕೈಯಲ್ಲಿ ಒಂದಷ್ಟು ಹಣ ಹರಿದಾಡುತ್ತಿತ್ತು. ಆರಂಭದ ಕೆಲವರ್ಷ ಸೆಕೆಂಡ್ಸ್ ದಂಧೆಯಲ್ಲಿ ತೊಡಗಿದ್ದ ಡಾಲು ನಿಧಾನಕ್ಕೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಆಪ್ತ ವಲಯದೊಳಕ್ಕೆ ತೂರಿಕೊಂಡು ಮತ್ತಗೆ ಮರಳು ದಂಧೆಯಲ್ಲೂ ಸಾಕಷ್ಟು ಗೆಬ್ಬರಿದ. ಕೆ.ಆರ್.ಪೇಟೆ-ಮೈಸೂರು ಹೆದ್ದಾರಿಯಲ್ಲಿ ಗ್ರೀನ್‌ಪಾರ್ಕ್ ಡಾಬಾ ತೆರೆದಿರುವ ಡಾಲು ರವಿ ಮನ್‌ಮುಲ್ ನಿರ್ದೇಶಕನಾದ ಮೇಲೆ ಬಲಿತುಹೋಗಿ ದೌಲತ್ ರವಿಯಾಗಿ ಮೆರೆದಾಡುತ್ತಿದ್ದಾನೆ. ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ, ನಿರ್ದೇಶಕರಾದ ಬೋರೇಗೌಡ, ಬಳಿದಗಲು ಚಂದ್ರು ಜೊತೆ ಸೇರಿದ ಡಾಲು ರವಿ, ಮನ್‌ಮುಲ್ ನೇಮಕಾತಿಯಲ್ಲಿ ಭರ್ಜರಿ ಹಣ ಮಾಡಿದ್ದಾನೆ. ಅರ್ಹತೆಯಿಲ್ಲದವರನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ದಂಡಿಯಾಗಿ ದುಡಿದಿರುವ ಈ ನಾಲ್ವರ ದುಷ್ಟಕೂಟ ಸಾಕಷ್ಟು ಗೆಬರಿಕೊಂಡಿದೆ.

ಮನ್‌ಮುಲ್ ನೇಮಕಾತಿಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ಈಗಾಗಲೇ ಮದ್ದೂರು ನ್ಯಾಯಾಲಯ ಮನ್‌ಮುಲ್ ಅಧ್ಯಕ್ಷ, ಎಂಡಿ ಸೇರಿದಂತೆ ಎಲ್ಲಾ ನಿರ್ದೇಶಕರ ಮೇಲೆ ಕೇಸು ರಿಜಿಸ್ಟರ್ ಮಾಡುವಂತೆ ಆದೇಶ ನೀಡಿದೆ. ಅಲ್ಲದೆ ರೈತ ಕಲ್ಯಾಣ ಟ್ರಸ್ಟ್‌ನಲ್ಲಿರುವ ಹಣದಲ್ಲಿ ಹಾಲು ಉತ್ಪಾದಕರ ಮಕ್ಕಳಿಗೆ ವಸತಿಶಾಲೆ ತೆರೆಯಲು ಶ್ರೀರಂಗಪಟ್ಟಣದ ಬಳಿ ಕೋಡಿಶೆಟ್ಟಿಪುರದಲ್ಲಿ 8 ಎಕರೆ ಜಾಗ ಖರೀದಿಸುವ ನೆಪದಲ್ಲಿ ಡಾಲು ರವಿಯಿರುವ ನಾಲ್ವರ ಗ್ಯಾಂಗ್ ಮೇಯಲು ಹೊರಟಿದೆ. ಜಮೀನು ರಿಜಿಸ್ಟರ್ ಆಗುವ ಮೊದಲೇ ಕಾನೂನುಬಾಹಿರವಾಗಿ 2.18 ಕೋಟಿ ಹಣವನ್ನು ಜಮೀನು ಮಾಲೀಕರಿಗೆ ನೀಡಲಾಗಿದೆ. 8 ಎಕರೆಯಲ್ಲಿ ದಲಿತರ ಇನಾಂ ಜಮೀನು ಸೇರಿರುವುದರಿಂದ ಈ ಬಗ್ಗೆ ಕೂಡ ನ್ಯಾಯಾಲಯ ಕೇಸು ರಿಜಿಸ್ಟರ್ ಮಾಡುವಂತೆ ಆದೇಶಿಸಿದೆ.

ಒಟ್ಟಾರೆ ಮನ್‌ಮುಲ್‌ನಲ್ಲಿ ನಿರ್ದೇಶಕರು ಹೆಗ್ಗಣಗಳಂತೆ ಮೇಯುತ್ತಿದ್ದಾರೆ. ಈಗಾಗಲೇ ನೇಮಕಾತಿಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಹಾಲು ಉತ್ಪಾದಕರು, ಜನಸಾಮಾನ್ಯರು ತಿರುಗಿ ಬಿದ್ದು ಪ್ರತಿಭಟನೆ ನಡೆಸಿದ್ದಾರೆ. ಅಲ್ಲದೆ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ನ್ಯಾಯಾಲಯಕ್ಕೆ ಮೊರೆಹೋಗಿ ಕೇಸು ದಾಖಲಾಗುವಂತೆ ಮಾಡಿದ್ದಾರೆ. ಹೀಗೆ ಮನ್‌ಮುಲ್‌ನಲ್ಲಿ ಬೇಕಾಬಿಟ್ಟಿಯಾಗಿ ಸಂಪಾದಿಸಿರುವ ಹಡಬೆ ಹಣದಲ್ಲಿ ಕೊಬ್ಬಿರುವ ಡಾಲುರವಿ ತನ್ನ ದೌಲತ್ ಬಿಟ್ಟು ನಡೆದುಕೊಂಡರೆ ಆತನಿಗೆ ಒಳ್ಳೆಯದು. ಇಲ್ಲದಿದ್ದರೆ ಜನರೆ ಮುಂದೆ ತಕ್ಕ ಪಾಠ ಕಲಿಸುತ್ತಾರೆಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ಒಳಿತು.

■ ವರದಿಗಾರರು




...ಸ್ವಾಮಿಯಲ್ಲ, ತನ್ನ ಕುಲಬಂಧು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಮೂಲಕ ಟಿಕೆಟ್‌ಗಾಗಿ ಲಾಬಿ ನಡೆಸಿದ್ದಾರೆ. ಹಿಂದೊಮ್ಮೆ ಶಾಸಕನಾಗಿದ್ದರಿಂದ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಹಿಡಿತ ಹೊಂದಿರೋದು ಆತನ ಬಲ.

ಇನ್ನು ಬಿಜೆಪಿ ಜಿಲ್ಲಾಧ್ಯಕ್ಷ ಸಿಂಗನಾಳ ವಿರುಪಾಕ್ಷಪ್ಪ ಮಾಜಿ ಮಂತ್ರಿ ಶ್ರೀರಾಮುಲುನ ಬಲಗೈಬಂಟ. ರಾಮುಲು ಬಿಎಸ್‌ಆರ್ ಕಟ್ಟಿದಾಗ ಗಂಗಾವತಿಯಲ್ಲಿ ಪಕ್ಷದ ನೊಗವನ್ನು ಎಳೆದದ್ದು ಇದೇ ಸಿಂಗನಾಳ ವಿರುಪಾಕ್ಷಪ್ಪ. ಆಗರ್ಭ ಶ್ರೀಮಂತನಾಗಿರುವ ಇವನಿಗೆ ಚುನಾವಣೆ ವೆಚ್ಚ ಹೊರುವ ತಾಕತ್ತೇ ಶಕ್ತಿ ಬಲಾಢ್ಯ ಶ್ರೀಮಂತ ರೆಡ್ಡಿ ಜನಾಂಗಕ್ಕೆ ಸೇರಿದ ವಿರುಪಾಕ್ಷಪ್ಪ ಮುಂಬರುವ ಚುನಾವಣೆಯಲ್ಲಿ ಒಂದು ಕೈ ನೋಡುವ ಉಮೇದಿಯಲ್ಲಿದ್ದಾನೆ. ಈ 'ತ್ರಿ'ವಳಿಗರ ನಡುವೆ ಆರ್ಥಿಕವಾಗಿ ಕಂಗಾಲಾಗಿರುವಂತೆ ಕಾಣುವ ಮುಂಬರುವ ಗಿರೇಗೌಡ ತನ್ನ ಪಕ್ಷ ನಿಷ್ಠೆ ಹಿಂದೆ ನಡೆಸಿದ್ದ ರೈತ ಹೋರಾಟದ ಮೇಲೆ ಟಿಕೆಟ್‌ಗಾಗಿ ಓಡಾಡುತ್ತಿದ್ದಾನೆ. ಆದರೆ ಅಂತಿಮ ಅದೃಷ್ಟಲಕ್ಷ್ಮಿ ಯಾರಿಗೆ ಒಲಿಯುತ್ತಾಳೋ ಕಾದುನೋಡಬೇಕು.

■ ಸ.ಶರಣಪ್ಪ ಪಾಟೀಲ್ ಕರಮುದಿ

ಬಳ್ಳಾರಿ: ಮದುವೆ ನೆಪದಲ್ಲಿ ಗಣಿಕಳ್ಳರ ಜನದ್ರೋಹ




ಗಣಿ ಲೂಟಿಕೋರನೊಬ್ಬ ವರ್ಷಗಟ್ಟಲೇ ಜೈಲಲ್ಲಿ ಕೂತುಬಂದಾಗ, ರಾಜ್ಯದ ಗಡಿಯನ್ನೇ ತಿರುಚಿ ನಿಭಾಯಿಸಿಕೊಂಡಾಗ, ನ್ಯಾಯಾಧೀಶರನ್ನೇ ಖರೀದಿಸಿ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡು ಮಗಳ ಮದುವೆ ನೆಪದಲ್ಲಿ ಬಳ್ಳಾರಿ ನೆಲಕ್ಕೆ ಕಾಲಿಟ್ಟಾಗ ಆತನ ಬಾಡಿಗೆ ಬಂಟರು ಹಣಸುರಿದು ಜನ ಸೇರಿಸಿ ಅದ್ದೂರಿ ಸ್ವಾಗತ ಕೋರುತ್ತಾರೆಂದರೆ ಅದು ಕರ್ನಾಟಕದ ದುರ್ಗತಿಯಲ್ಲದೆ ಮತ್ತಿನ್ನೇನು. ನೋ ಡೌಟ್, ಇದು ಗಣಿಕಳ್ಳ ಜನ್ನಿ ರೆಡ್ಡಿಯ ವೃತ್ತಾಂತ.

ಆತ ಬಂದಿದ್ದೇ ನೆಪ ಮಾಡಿಕೊಂಡು ಮದ್ಯಪಾನ ಮಾಡಿ, ಕಿರುಚಿ, ಕೂಗಾಡಿ ಮನಬಂದಂತೆ ಪಟಾಕಿ ಸಿಡಿಸಿ ಯದ್ವಾತದ್ವಾ ಬೈಕ್ ರ್‍ಯಾಲಿ ನಡೆಸುತ್ತಾರೆ ಎಂದರೆ ಏನರ್ಥ? ಲೂಟಿ ಹಣದಿಂದ ಪ್ರಜಾತಂತ್ರವನ್ನೇ ಕೊಂಡುಕೊಳ್ಳಲು ಹವಣಿಸುತ್ತಿರುವ ಗಾಲಿ ಜನಾರ್ದನ ರೆಡ್ಡಿಯ ಅಪರಾತಪರಗಳನ್ನು ಹೇಳುತ್ತಾ ಹೋದರೆ ಕೇಳುವುದಕ್ಕೇ ಅಸಹ್ಯವೆನಿಸುತ್ತದೆ.

ಭಾರಿ ಮದುವೆಯ ದುಬಾರಿ ಆಮಂತ್ರಣ ಪತ್ರಿಕೆ

ಜೈಲಿಗೆ ಹೋಗಿಬಂದಮೇಲೆ ಈ ಜನ್ನಿ ಒಂದಿಷ್ಟು ಬುದ್ಧಿ ಕಲಿತಿರಬಹುದು ಅಂತ ಅಸಾಧ್ಯ ಲೆಕ್ಕಾಚಾರ ಹಾಕಿಕೊಂಡಿದ್ದವರಿಗೆಲ್ಲ, ಆತ ಕಾಸ್ಟ್ಲಿ ಶಾಕ್ ಕೊಟ್ಟಿದ್ದು ತನ್ನ ಮಗಳ ಮದುವೆಯ ಆಮಂತ್ರಣ ಪತ್ರಿಕೆಯ ಮೂಲಕ. ನವೆಂಬರ್ 16 ರಂದು ಹೈದರಾಬಾದ್ ಮೂಲದ ಉದ್ಯಮಿ ರಾಜೀವ್‌ರೆಡ್ಡಿಯೊಂದಿಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ತನ್ನ ಮಗಳು ಬ್ರಹ್ಮಿಣಿಯ ಮದುವೆಯ ಆಮಂತ್ರಣ ಪತ್ರವನ್ನು ಇದುವರೆಗೂ ಯಾರು ಮಾಡಿರದಂತ ಆಡಂಬರದ ರೀತಿಯಲ್ಲಿ ಈ ಗಣಿ ಕಳ್ಳ ಮಾಡಿಸಿದ್ದಾನೆ. ಆಮಂತ್ರಣ ಪತ್ರ ತೆರೆದೊಡನೆಯ ಅಲ್ಲಿರುವ ಎಲ್‌ಸಿಡಿ ಪರದೆ ಮೇಲೆ ಇದೇ ರೆಡ್ಡಿ, ಆತನ ಪತ್ನಿ, ಮಗಳು ಮತ್ತು ಭಾವೀ ಅಳಿಯನ ನೃತ್ಯ ಹಾಡಿನೊಂದಿಗೆ ತೇಲಿಬರುತ್ತೆ, ಜೊತೆಗೆ ಬಾದಾಮಿ, ಗೋಡಂಬಿ, ಒಣ ಹಣ್ಣು ಸೇರಿದಂತೆ ಇನ್ನು ಏನೇನೋ ತುಂಬಿ ಹೋಗಿದೆ. ಈ ಪತ್ರಿಕೆ ಮೇಲೊಂದು ಬೆಲೆಬಾಳುವ ಪೆಟ್ಟಿಗೆಯೊಂದನ್ನು ಸೇರಿಸಿ ಕರ್ನಾಟಕ ಬಹಳಷ್ಟು ಗಣ್ಯರಿಗೆ ತಲುಪಿಸುವ ಕೆಲಸವನ್ನು ಆತನ ಬಂಟ ಹಾಲಿ ಬಳ್ಳಾರಿ ಸಂಸದ ಶ್ರೀರಾಮುಲು ಮಾಡುತ್ತಿದ್ದಾನೆ. ಈ ಇನ್ವಿಟೇಷನ್ ಕಾರ್ಡ್ ನೋಡಿದರೆ ದೇಶದ ಪ್ರಜಾತಂತ್ರವೇ ಅಸಹ್ಯಪಟ್ಟುಕೊಳ್ಳುವಂತಿದೆ. ದುರಂತವೆಂದರೆ ಇಂತದ್ದನ್ನೆಲ್ಲ ಖಂಡಿಸಬೇಕಿದ್ದ ಬಹುತೇಕ ಮಾಧ್ಯಮಗಳು ಅದನ್ನೊಂದು ಜಗತ್ತಿನ ಎಂಟನೇ ಅದ್ಭುತದಂತೆ ತಿರುಗಾಮುರುಗಾ ತೋರಿಸಿದ್ದೇ ತೋರಿಸಿದ್ದು. ಗಣಿ ಕಳ್ಳನನ್ನು ಗಣಿ ಧಣಿ ಎಂದು ಕರೆಯುವ ಈ ಮಾಧ್ಯಮಗಳು ಅದರ ವೈಭವ, ಅಂದಚೆಂದ ಹೊಗಳುತ್ತಾ ತಮ್ಮ ಡಂಬಾಚಾರವನ್ನು ಮತ್ತೆಮತ್ತೆ ಬೆತ್ತಲಾಗಿಸಿಕೊಳ್ಳುತ್ತಿವೆ.



ಬಳ್ಳಾರಿ ಪ್ರವೇಶವೆಂಬ ನಾಟಕ

ನವೆಂಬರ್ 1 ರಂದು ಕರ್ನಾಟಕದ ಜನತೆ ಕನ್ನಡ ರಾಜ್ಯೋತ್ಸವ ಆಚರಣೆಯಲ್ಲಿ ನಿರತರಾಗಿದ್ದರೆ ಬಳ್ಳಾರಿಯ ಕೆಲ ಕಿಡಿಗೇಡಿಗಳು ಮಾತ್ರ ಮುಖ್ಯರಸ್ತೆಗಳಲ್ಲಿ ಕುಡಿದು ತೂರಾಡುತ್ತಾ ದುಂಡಾವರ್ತನೆ ಮಾಡುತ್ತಾ ಸಿಕ್ಕಸಿಕ್ಕವರನ್ನೆಲ್ಲಾ ಹೆದರಿಸುತ್ತಾ ಅಬ್ಬರಿಸುತ್ತಿದ್ದರು. ಅದಕ್ಕೆ ಕಾರಣ ಗಣಿ ಕಳ್ಳನೊಬ್ಬ ತಮ್ಮ ಮಗಳ ಮದುವೆ ನೆಪದಲ್ಲಿ ಬಳ್ಳಾರಿ ಪ್ರವೇಶಿಸುತ್ತಿದ್ದುದು. ಗಣಿ ಕಳ್ಳತನ, ಭೂಪಟ ನಾಶದ ಆರೋಪ, ನ್ಯಾಯಾಧೀಶರಿಗೆ ಲಂಚದ ಬಹುಮುಖ್ಯ ಆರೋಪಿಯಾದ ಈತನಿಗೆ ಬಳ್ಳಾರಿ ಜಿಲ್ಲೆಯ ಪ್ರವೇಶವನ್ನು ಕೋರ್ಟ್ ನಿಷೇಧಿಸಿದೆ. ಈತ ಬಳ್ಳಾರಿ ಹೊಕ್ಕರೆ ಬಹಳಷ್ಟು ಸಾಕ್ಷ್ಯ ನಾಶವಾಗುವುದಲ್ಲದೇ, ಮತ್ತಷ್ಟು ಅಕ್ರಮಗಳು ತಲೆಎತ್ತಲಿವೆ ಎಂಬ ಭಯ ಸ್ವತಃ ನ್ಯಾಯಾಲಯಕ್ಕೇ ಇರುವುದರಿಂದ ಇಂಥಾ ದಿಗ್ಬಂಧನ. ಆದರೆ ಮಗಳ ಮದುವೆ ಇರುವುದರಿಂದ ಕೆಲ ದಿನಗಳ ಮಟ್ಟಿಗೆ ಪ್ರವೇಶ ಬೇಕೆಂಬ ಆತನ ಮನವಿಗೆ ಓಗೊಟ್ಟ ಕೋರ್ಟ್ 21 ದಿನಗಳ ನಿಯಮಿತ ಪ್ರವೇಶದ ಅವಕಾಶ ನೀಡಿರೋದರಿಂದ ಈ ಮಹಾನ್ ಲೂಟಿಕೋರ ಇದನ್ನೇ ವಿಜಯೋತ್ಸವದ ರೀತಿಯಲ್ಲಿ ಆಚರಿಸುತ್ತಾ ನಗರ ಪ್ರವೇಶಿಸಿದ್ದಾನೆ.


ಅವತ್ತು ನವೆಂಬರ್ 1 ಆದ ಕಾರಣ ಅಂದು ಜನಾರ್ದನ ರೆಡ್ಡಿ ಕೆಂಪು ಹಳದಿ ಬಣ್ಣದ ಕರ್ನಾಟಕ ಬಾವುಟ ಹೋಲುವ ಶಾಲು ಹಾಕಿಕೊಂಡು ಬಂದಿದ್ದ. ತನ್ನ ಇಡೀ ಉದ್ಯಮ ವ್ಯವಹಾರವನ್ನೆಲ್ಲಾ ವಿದೇಶಿ, ತೆಲುಗು ಉದ್ಯಮಿಗಳ ಜೊತೆ ನಡೆಸುವ ಈತನಿಗೆ ಕನ್ನಡದ ಮೇಲೆ ಎಲ್ಲಿಲ್ಲದ ಪ್ರೀತಿ ಎಂದು ತೋರಿಸಲು ಈ ನಾಟಕ. ಸಾಕಷ್ಟು ಹಣ, ಹೊಟ್ಟೆ ತುಂಬಾ ಬಿರಿಯಾನಿ, ಕಂಠಪೂರ್ತಿ ಹೆಂಡದ ಆಫರ್ ಮುಂದಿಟ್ಟು ಜನರನ್ನು ಜಮಾಯಿಸುವುದು ಆತನ ಚೇಲಾಗಳಿಗೇನೂ ಕಷ್ಟದ ಕೆಲಸವಾಗಿರಲಿಲ್ಲ.

ರೆಡ್ಡಿಯ ಚೇಲಾಗಳು ಸುಟ್ಟ ಪಟಾಕಿ ಅಬ್ಬರ ಎಂತದ್ದಿತ್ತೆಂದರೆ ಅದರ ವಿಷಕಾರಕ ಅತಿ ಹೆಚ್ಚಿನ ಹೊಗೆಯ ಕಾರಣಕ್ಕಾಗಿ ಅಂದು ಬಳ್ಳಾರಿಯಲ್ಲಿ ಬಹಳಷ್ಟು ಅಂಗಡಿ ಮುಂಗಟ್ಟುಗಳು ಸ್ವಯಂಪ್ರೇರಿತವಾಗಿ ಬಾಗಿಲು ಮುಚ್ಚಿದ್ದವು. ರಸ್ತೆ ಬದಿಯ ಹಲವು ಬ್ಯಾನರ್‌ಗಳಿಗೆ ಕಿಡಿ ತಗುಲಿ, ಬೆಂಕಿ ಹತ್ತಿಕೊಂಡು, ಅವುಗಳನ್ನು ನಂದಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಮುಖ್ಯ ರಸ್ತೆಗಳು ಜನಾರ್ದನ ರೆಡ್ಡಿಯ ಮೆರವಣಿಗೆ ಮತ್ತು ಬೈಕ್ ರ್‍ಯಾಲಿಯ ಕಾರಣಕ್ಕಾಗಿ ತುಂಬಿಹೋಗಿದ್ದರಿಂದ ಸಾಮಾನ್ಯ ಜನ ಟ್ರಾಫಿಕ್ ಕಿರಿಕಿರಿ ಅನುಭವಿಸಬೇಕಾಯಿತು. ಬೈಕ್ ರ್‍ಯಾಲಿಯಲ್ಲಿ ಬಹುತೇಕರು ಬಹಿರಂಗವಾಗಿ ಕುಡಿಯುವುದರ ಜೊತೆಗೆ ಬಿಯರ್ ಬಾಟಲಿಯಲ್ಲಿ ನೊರೆಯುಕ್ಕಿಸಿ ಮೋಜು ಮಾಡಿದರು. ಮನಬಂದಂತೆ ಬೈಕ್ ಓಡಿಸಿ ಅಪಾಯಕಾರಿ ವೀಲಿಂಗ್ ಸಹ ಮಾಡಿದರು. ಇಷ್ಟೆಲ್ಲಾ ನಡೆಯುತ್ತಿದ್ದರೂ ಪೊಲೀಸರು ಇವರನ್ನು ತಡೆಯುವ ಗೋಜಿಗೆ ಹೋಗಲಿಲ್ಲ. ಮೆರವಣಿಗೆ, ಬೈಕ್ ರ್‍ಯಾಲಿಗೆ ಅನುಮತಿ ಇಲ್ಲದಿದ್ದರೂ ಪೊಲೀಸರು ಮೌನಕ್ಕೆ ಶರಣಾಗಿದ್ದರು. ರೆಡ್ಡಿಯ ರೋಡ್ ದರ್ಬಾರೆಲ್ಲ ಮುಗಿದು, ತಣ್ಣಗಾದ ನಂತರ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್‌ರು 'ಅನುಮತಿ ಇಲ್ಲದೇ ಮೆರವಣಿಗೆ ನಡೆಸಿದ್ದಕ್ಕೆ, ಸಾರ್ವಜನಿಕ ಸ್ಥಳದಲ್ಲಿ ಬಹಿರಂಗವಾಗಿ ಮದ್ಯಪಾನ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲು ಮಾಡಲಾಗಿದೆ' ಎಂದಷ್ಟೆ ಪತ್ರಿಕಾ ಹೇಳಿಕೆ ನೀಡಿ ಸುಮ್ಮನಾಗಿದ್ದಾರೆ.

ಈ ಮೆರವಣಿಗೆಯಲ್ಲಿ ಸಂಸದ ಶ್ರೀರಾಮುಲು, ಕಂಪ್ಲಿ ಶಾಸಕ ಎಚ್.ಟಿ.ಸುರೇಶ್ ಬಾಬು, ಸಂಬಂಧಿ ಜಿ.ಸೋಮಶೇಖರ್ ರೆಡ್ಡಿ ಜೊತೆಗೆ ಗಣಿ ಕಳ್ಳತನದ ಮತ್ತೊಬ್ಬ ಪ್ರಮುಖ ಆರೋಪಿ ಜನಾರ್ದನ ರೆಡ್ಡಿಯ ಆಪ್ತ ಮೆಹಫೂಜ್ ಅಲಿಖಾನ್ ಕೂಡ ಇದ್ದ. ಈ ರೀತಿ ನೂರಾರು ಜನರೆದುರು ಮೆರವಣಿಗೆಯಲ್ಲಿ ಕಾಣಿಸಿಕೊಳ್ಳುವ ಮೂಲಕ ತನ್ನ ಕುಖ್ಯಾತಿಯನ್ನು ಪ್ರಖ್ಯಾತಿಯಾಗಿ ಪರಿವರ್ತಿಸಿಕೊಳ್ಳುವ ಪ್ರಹಸನ ಪ್ರಯಾಸ ಅವನದ್ದು.

ಶ್ರೀರಾಮುಲು ಮನೆ ಉದ್ಘಾಟನೆ


ಇತ್ತ ರೆಡ್ಡಿ ದುಬಾರಿ ಆಮಂತ್ರಣ ಪತ್ರಿಕೆ, ಬಳ್ಳಾರಿಯ ರೋಡ್‌ಶೋ ಮೂಲಕ ಸದ್ದು ಮಾಡುತ್ತಿದ್ದರೆ ಅತ್ತ ಅವನ ಆಪ್ತ ಬಂಟ ಶ್ರೀರಾಮುಲು ಅದರ ಅರ್ಧದಷ್ಟಾದರು ಸದ್ದು ಮಾಡಲಿಲ್ಲವೆಂದರೆ ಏನು ಚೆನ್ನಾಗಿರುತ್ತೆ, ಅದಕ್ಕೆಂದೇ ಆತ ಕಟ್ಟಿಸಿದ್ದು ಕೋಟಿಗಟ್ಟಲೆ ಬೆಲೆಬಾಳುವ ಭಾರೀ ಬಂಗಲೆಯನ್ನು. ಆ ಬಂಗಲೆಯನ್ನು ಸ್ವತಃ ಜನಾರ್ದನ



ರೆಡ್ಡಿಯೇ ಉದ್ಘಾಟಿಸಿದ್ದರಲ್ಲಿ ಅಚ್ಚರಿಯೇನೂ ಇಲ್ಲ, ಬಳ್ಳಾರಿಯ ಸಿರಗುಪ್ಪ ರಸ್ತೆಯಲ್ಲಿರುವ ಹವಂಭಾವಿಯಲ್ಲಿ ಸುಮಾರು ಒಂದೂವರೆ ಎಕರೆ ಪ್ರದೇಶದಲ್ಲಿ ತಲೆ ಎತ್ತಿರುವ ಈ ಬಂಗಲೆ ಎರಡು ಅಂತಸ್ತುಗಳನ್ನು ಒಳಗೊಂಡಿದ್ದು ಥಿಯೇಟರ್, ಗಾರ್ಡನ್, ದೊಡ್ಡ ಊಟದ ಕೋಣೆ ಇರುವ ಇದಕ್ಕೆ ಅರುಣಾ ಗಾರ್ಡನ್ ಎಂದು ಹೆಸರಿಡಲಾಗಿದೆ. ಇದರ ನಿರ್ಮಾಣಕ್ಕಾಗಿಯೇ ಮುಂಬೈ ಮೂಲದ ಹಲವು ತಂತ್ರಜ್ಞರು ಕೆಲಸ ಮಾಡಿದ್ದು ಇಟಲಿ ಸೇರಿದಂತೆ ಬಹಳಷ್ಟು ಮಾದರಿಯ ಒಳಾಂಗಣ ಮತ್ತು ಹೊರಾಂಗಣ ವಿನ್ಯಾಸಕ್ಕಾಗಿಯೇ ಹಲವು ಕೋಟಿ ಚೆಲ್ಲಿಹೋಗಿದೆ. ಒಂದೆಡೆ ಸಣ್ಣ ನಿವೇಶನ ಮತ್ತು ತುಂಡು ಭೂಮಿಗಾಗಿ ಇದೇ ಬಳ್ಳಾರಿಯ ಬಡಜನರು ಬೆಂಗಳೂರಿಗೆ ಅಲೆದು ಹೋರಾಟ ನಡೆಸುತ್ತಿದ್ದರೆ ಶ್ರೀರಾಮುಲು ಐಷಾರಾಮಿ ಬಂಗಲೆ ಎಬ್ಬಿಸಿಕೊಂಡು ಶ್ರೀಸಾಮಾನ್ಯನನ್ನು ಇನ್ನಿಲ್ಲದಂತೆ ಅಣಕಿಸುತ್ತಿದ್ದಾನೆ. ಒನ್ಸ್ ಎಗೇನ್, ಎಲ್ಲಾ ಮಾಧ್ಯಮಗಳು ಈ ಬಂಗಲೆಯ ಅಂದ ಚೆಂದ ಹೊಗಳುವುದಕ್ಕೆ ಪೈಪೋಟಿ ನಡೆಸುತ್ತಿವೆಯೇ ಹೊರತು ಹಾಲಿ ಜನಪ್ರತಿನಿಧಿಯ ಆದಾಯದ ಮೂಲವನ್ನು ಪ್ರಶ್ನಿಸುವ ತಾಕತ್ತು ತೋರಿಸುತ್ತಿಲ್ಲ.

ರಾಜ್ಯ ತೀವ್ರ ಬರದಿಂದ ನರಳುತ್ತಿದೆ. ನೆಲ-ಗಡಿ-ಜಲದ ವಿಚಾರದಲ್ಲಿ ರಾಜ್ಯ ಹೊತ್ತಿ ಉರಿಯುತ್ತಿದೆ. ಆದರೆ ರೆಡ್ಡಿ ರಾಮುಲು ಜೋಡಿಗೆ ಇದ್ಯಾವುದರ ಪರಿವೆಯೂ ಇಲ್ಲದೆ ತಮ್ಮ ಆಡಂಬರದ್ದೇ ಚಿಂತೆ. ಇಂಥಾ ದುರಂತಕ್ಕೆ ಮಾಧ್ಯಮಗಳ ಸಾಥ್! ಈ ಗಣಿರೆಡ್ಡಿಗಳ ಅದಿರು ದಂಧೆಯನ್ನು ಬಯಲಿಗೆಳೆದಿದ್ದ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು 'ರಾಜ್ಯ ಸರ್ಕಾರಕ್ಕೆ ಕೇವಲ 27 ರೂ. ನೀಡಿ ಚೀನಾ ದೇಶಕ್ಕೆ ಮೆಟ್ರಿಕ್ ಟನ್ ಅದಿರನ್ನು 6500-7000 ರೂ.ಗಳಿಗೆ ಮಾರಾಟ ಮಾಡಿದ್ದ ಜನಾರ್ದನ ರೆಡ್ಡಿ ಆ ಸಂಪತ್ತಿನಿಂದ ಅದ್ದೂರಿ ಮದುವೆ ಮಾಡುತ್ತಿದ್ದಾರೆ' ಎಂದು ನೇರವಾಗಿ ಆರೋಪಿಸಿದ್ದು ಬಿಟ್ಟರೆ ಅಂತಾ ದೊಡ್ಡ ಮಟ್ಟದ ಪ್ರತಿರೋಧವೇ ಕೇಳಿಬಂದಿಲ್ಲ. ಅದ್ಯಾರೋ ಪುಣ್ಯಾತ್ಮ ಕನವರಿಸಿದ್ದ ಅಚ್ಛೇ ದಿನ್ ಅಂದರೆ ಇದೇ ಇರಬೇಕು; ಇಂಥವರಿಗೇ ಇರಬೇಕು...

■ ಮುತ್ತುರಾಜು





ಕುಮಟಾ ವಿಧಾನಸಭಾ ಕ್ಷೇತ್ರ ವಶಕ್ಕೆ 'ಅತ್ಯಾಚಾರ್ಯ'ನ ಆಟ!



ರಾಘವೇಶ್ವರ ಸ್ವಾಮಿ

ರಾಮಚಂದ್ರಾಪುರ ಮಠದ ಮಾನಗೇಡಿ ಸ್ವಾಮಿ ರಾಘು ತನ್ನೆಲ್ಲ ಪಾಪ ಕೂಪದಿಂದ ಪಾರಾಗಲು ಓಟ್ ಬ್ಯಾಂಕ್ ರಾಜಕೀಯ ಶುರುಹಚ್ಚಿಕೊಂಡಿದ್ದಾನೆ. ಹವ್ಯಕರ ಮೊದ್ದುತನ-ಮತಾಂಧತೆಯನ್ನು ಬಂಡವಾಳ ಮಾಡಿಕೊಂಡು ಭೋಗ-ಭಾಗ್ಯ ಅನುಭವಿಸುತ್ತಿರುವ ಈ 'ಅತ್ಯಾಚಾರ್ಯ' ಮಠದ ಪಾರುಪತ್ಯ ಮತ್ತು ಗೋಕರ್ಣ ದೇವಸ್ಥಾನದ ಆಧಿಪತ್ಯ ಭದ್ರಪಡಿಸಿಕೊಳ್ಳಲು ರಾಜಕೀಯ ಷಡ್ಯಂತ್ರವೇ ತಾರಕ-ತಂತ್ರವೆಂಬ ದೃಢ ನಿರ್ಧಾರಕ್ಕೆ ಬಂದಿದ್ದಾನೆ. ತನ್ನ ಅಷ್ಟೂ ಮೋಜು-ಮಜಾಕ್ಕೆ ಮೂಲವಾದ ಕೋಟಿ-ಕೋಟಿ ಆದಾಯದ ಈ ಮಠ-ಮಂದಿರ ಜೋಳಿಗೆಯಿಂದ ಜಾರದಂತಿರಬೇಕೆಂದರೆ ತಾನು ಹೇಳಿದಂತೆ ಕೇಳುವ ಮೂರ್‍ನಾಲ್ಕಾದರೂ ಆಜ್ಞಾನುಧಾರಿ ಶಾಸಕರು ಅಸೆಂಬ್ಲಿಯಲ್ಲಿ ಇರಬೇಕೆಂಬ ಇರಾದೆ ರಾಘುನದು.

ಹವ್ಯಕರಿಗೆ ಗುರುಗಳ ಗಂಡಾಗುಂಡಿ ಗುಣಧರ್ಮವೆಲ್ಲವೂ ಅರ್ಥವಾಗಿದೆ. ಆದರೆ ಮಠಬಾನಿಗಳ ಗೂಂಡಾಗಿರಿ-ಜಾತಿ ಬಹಿಷ್ಕಾರದಂಥ ದಂಡ ಹಿಡಿದು ರಾಘು ಹವ್ಯಕರನ್ನು ಆಳುತ್ತಿದ್ದಾನೆ. ರಾಜಕೀಯ ಎದುರಾದಾಗಲಂತೂ ತಾನು ಹವ್ಯಕ ಕುಲೋದ್ಧಾರನಂತೆ ಪೋಸು ಕೊಟ್ಟು ಮುಗ್ಧ ಹವ್ಯಕರ ದಿಕ್ಕು ತಪ್ಪಿಸಿ ಮಾತು ಕೇಳಿಸುತ್ತಾನೆ. ಇದನ್ನು ವೃತ್ತಿ ರಾಜಕೀಯ ಪುಢಾರಿಗಳು ಕರಾರುವಾಕ್ಕಾಗಿ ಗ್ರಹಿಸಿದ್ದಾರೆ. ಇದು ರಾಘುನ ಆತ್ಮರಕ್ಷಣಾತ್ಮಕ ಆಟಕ್ಕೆ ಅನುಕೂಲಕರವಾಗಿ ಪರಿಣಮಿಸಿದೆ. ಇದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ರಾಘು ಸ್ಕೆಚ್ ಹಾಕಿಕೊಂಡು ಕಾರ್ಯಾಚರಣೆಗೆ ಇಳಿದಿದ್ದಾನೆ.

ಗುಲಾಮ ಶಾಸಕರಿಗಾಗಿ


ಹವ್ಯಕ ಮತದಾರರು ಗಣನೀಯವಾಗಿರುವ ಅಸೆಂಬ್ಲಿ ಕ್ಷೇತ್ರಗಳ ಪಟ್ಟಿ ಸಿದ್ಧ ಮಾಡಿಕೊಂಡು ಅಲ್ಲೆಲ್ಲ ತನ್ನ ಅನೈತಿಕತೆ-ಅಕ್ರಮ-ಅನ್ಯಾಯಕ್ಕೆ ಬೆಂಬಲವಾಗಿ ನಿಲ್ಲುವ ಪುಢಾರಿಗಳನ್ನು ಪ್ರಬಲ ಪಕ್ಷದ ಅಭ್ಯರ್ಥಿಯಾಗಿ ಮಾಡುವ ಮಸಲತ್ತು ರಾಘು ಮಾಡುತ್ತಿದ್ದಾನೆ. ಕಾಂಗ್ರೆಸ್-ಬಿಜೆಪಿ-ಜೆಡಿಎಸ್ ಯಾವ ಪಕ್ಷವಾದರೂ ಪರವಾಗಿಲ್ಲ, ತಾನು ಸಾಯುವ ಸಂದರ್ಭ ಬಂದಾಗ ಕಾಪಾಡುವ ಗುಲಾಮನಾದರೆ ಅಂಥವನಿಗೆ ಶಾಸಕನ ಮಾಡಲು ರಾಘು ಮಂತ್ರಾಕ್ಷತೆ ರೆಡಿ ಮಾಡಿಟ್ಟಿದ್ದಾನೆ. ಸಂಘ ಪರಿವಾರದ ಸರದಾರರು ರಾಘುನ ಮುಟ್ಟಿಸಿಕೊಳ್ಳಲು ಹೇಸುತ್ತಿದ್ದಾರೆ. ಆದರೆ ಬಿಜೆಪಿಯಲ್ಲಿನ ಯಡ್ಡಿ, ಈಶ್ವರಿ, ಕಲ್ಲಡ್ಕ ಭಟ್ಟ ಸಮಾನ ಮನಸ್ಕರು ಆತನ ಅಪ್ಪಿ ಮುದ್ದಾಡುತ್ತಿದ್ದಾರೆ. ಯಡ್ಡಿ ಜತೆಗಿರುವಷ್ಟೇ ಅನ್ಯೋನ್ಯ ನಂಟು ರಾಘುಗೆ ಜೆಡಿಎಸ್‌ನ ಕುಮ್ಮಿಯೊಂದಿಗೂ ಇದೆಯಾದರೂ ಆತನ ಕಾಷಾಯ ಕಾಮ ಧರ್ಮಕ್ಕೆ ಬಿಜೆಪಿಯಲ್ಲೇ ಅವಕಾಶ ಜಾಸ್ತಿ! ಹೀಗಾಗಿ ಬೇರೆ-ಬೇರೆ ಪಾರ್ಟಿಯಲ್ಲಿರುವ ತನ್ನ 'ಶಿಷ್ಯ'ರನ್ನು ಬಿಜೆಪಿಗೆ ತಂದು ಶಾಸಕರಾಗಿಸಿಕೊಳ್ಳುವ ಕರಾಮತ್ತು ರಾಘುನದು.

ರಾಘುನ ಧರ್ಮಕಾರಣದ ಲಿಸ್ಟ್‌ನಲ್ಲಿ ತೀರ್ಥಹಳ್ಳಿ, ಪುತ್ತೂರು, ಸುಳ್ಯ, ಸಾಗರ, ಸೊರಬ, ಶಿವಮೊಗ್ಗ, ಶಿರಸಿ, ಯಲ್ಲಾಪುರ ಮತ್ತು ಕುಮಟಾ, ಭಟ್ಕಳ ವಿಧಾನಸಭಾ ಕ್ಷೇತ್ರಗಳಿವೆಯಾದರೂ ಅರ್ಜೆಂಟಾಗಿ ಆತನಿಗೆ ಕುಮಟಾ ವಶಪಡಿಸಿಕೊಳ್ಳಬೇಕಾದ ದರ್ದು ಎದುರಾಗಿದೆ! ಏಕೆಂದರೆ, ವಾರ್ಷಿಕ ಎಳೆಂಟು ಕೋಟಿ ಆದಾಯವಿರುವ ಮಹಾಬಲೇಶ್ವರ ದೇವಸ್ಥಾನ ಇದೇ ಕುಮಟಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ರಾಘು ಸಕಲ ರಂಗ್‌ರಂಗಿಲಾ ಲೀಲಾ ವಿನೋದದ ದರ್ಬಾರಿಗೆ ಈ ಹುಂಡಿಯೇ ಆಧಾರ. ರಾಕ್ಷಸನ ಜೀವ ಯಾವುದೇ ಹಕ್ಕಿಯ ಹೊಟ್ಟೆಯಲ್ಲಿರುವಂತೆ ರಾಘುನ ಪ್ರಾಣವಿರುವುದೇ ಮಹಾಬಲೇಶ್ವರನ ಹುಂಡಿಯಲ್ಲಿ!

ಜೀವವಾದರೂ ರಾಘು ಕೊಟ್ಟಾನು, ಯಡ್ಡಿ ಸಿಎಂ ಪರ್ವದಲ್ಲಿ ಇನಾಮಾಗಿ ಬಂದ ಗೋಕರ್ಣ ದೇಗುಲ ಮಾತ್ರ ಆತ ಬಿಡಲೊಪ್ಪಲಾರ! ಇಂಥ ಸಮೃದ್ಧ ದೇವಸ್ಥಾನದ ಆಳ್ವಿಕೆ ತನ್ನ ಕೈಯಿಂದ ತಪ್ಪದಂತೆ ನೋಡಿಕೊಳ್ಳುವ ಶಾಸಕನೊಬ್ಬ ಕುಮಟೆಯಲ್ಲಿರುವ ಅನಿವಾರ್ಯತೆ ರಾಘುಗೆ ಎದುರಾಗಿದೆ. ಆ ಶಾಸಕ ಸರ್ಕಾರದ ಮಟ್ಟದಲ್ಲಿ ತನ್ನ ಪರವಾಗಿ ಸುಳ್ಳುಗಳನ್ನೇ ಸತ್ಯವೆಂದು ಮಂಡಿಸಿ, ದೇವಸ್ಥಾನ ಯುಗ-ಯುಗಗಳಿಂದಲೂ ರಾಮಚಂದ್ರಾಪುರ ಮಠಕ್ಕೇ ಸೇರಿದ್ದೆಂದು ವಾದಿಸಿ ರಾಜಕೀಯ ಹಿಕಮತ್ತು ಮಾಡುತ್ತಿರಬೇಕೆಂಬುದು ರಾಘುನ ಬಯಕೆ. ಹೀಗಾಗಿ ಆತ ಕುಮಟೆಯಲ್ಲಿ ತನ್ನ ಮನದಿಚ್ಛೆ ಅರ್ಥಮಾಡಿಕೊಂಡು ಹೋರಾಡುವ ಸಮರ್ಥ ಶೂದ್ರನೊಬ್ಬನ ಹುಡುಕಾಟದಲ್ಲಿ ತೊಡಗಿದ್ದಾನೆ. ಶಾಸಕತ್ವ ಆಕಾಂಕ್ಷಿಗಳಾದ ಸ್ವ-ಜಾತಿ ಹವ್ಯಕ ಹಿರೇಮಣೆಗಳ ನಿಷ್ಠೆ, ರಿಸ್ಕ್ ತೆಗೆದುಕೊಳ್ಳುವ ತಾಕತ್ತಿನ ಬಗ್ಗೆ ಅನುಮಾನ ಇರುವುದರಿಂದಲೇ ರಾಘು ಹುಂಬ ಹಿಂದುಳಿದವರ ನೆಚ್ಚಿಕೊಂಡಿದ್ದಾನೆ!



ರಾಘು ಜತೆ ಪ್ರದೀಪ್ ಇರುವ ಫೋಟೋ



ದಿನಕರ ಶೆಟ್ಟಿ



ಕುಮಟಾಕ್ಕಾಗಿ ಕಟಿಪಿಟಿ

ರಾಘುನ ಕಣ್ಣು ಕುಮಟಾ ಕ್ಷೇತ್ರದ ಮೇಲೆ ಬಿದ್ದಿರುವುದು, ಆತ ತನ್ನ ಹಿಂಬಾಲಕನೊಬ್ಬನ ಶಾಸಕನಾಗಿ ಮಾಡುವ ಹಠಕ್ಕೆ ಬಿದ್ದಿರುವುದು ಸ್ಥಳೀಯ ಎಮ್ಮೆಲ್ಲೆಗಿರಿ ಆಸೆಯ ಅಷ್ಟೂ ಅಡ್ನಾಡಿಗಳಿಗೆ ಪಕ್ಕಾ ಆಗಿಹೋದೆ; ಆತನ ಕೈಯಲ್ಲಿರುವ ಹವ್ಯಕರ ಓಟ ಬುಟ್ಟಿಯ ಗಾತ್ರವೂ ಗೊತ್ತಿದೆ. ಹೀಗಾಗಿ ರಾಘು ಗ್ಯಾಸ್ ಬಿಟ್ಟರೂ ಸಾಕು, "ಸುವಾಸನೆ... ಪರಿಮಳ" ಎಂದು ಭೋಪರಾಕ್ ಹಾಕುತ್ತಿವೆ ಈ ದಂಡಪಿಂಡಗಳು! ಈಚೆಗೆ ಗೋಕರ್ಣ ದೇಗುಲ ಹಸ್ತಾಂತರಕ್ಕೆ ಸಂಬಂಧಿಸಿದ ಕೇಸ್‌ನ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆದಿತ್ತಲ್ಲ; ಆಗ ರಾಘು ಅದೇನೋ ಅಪಶಕುನ ಎದುರಾದಂತೆ ಭಾಸವಾಗಿ ಬೆಚ್ಚಿಬಿದ್ದಿದ್ದ. ತನ್ನ ಜೀವ-ಜೀವನವಾದ ಗೋಕರ್ಣ ದೇಗುಲದ ಹುಂಡಿ ಸರ್ಕಾರದ ಪಾಲಾಗುತ್ತದೆಂಬ ಭಯದಲ್ಲಿ ರಾಘು ಹೊಡೆದಿದ್ದ ಬೊಬ್ಬೆಯ ಸದ್ದಿಗೆ ಮಠಬಾನಿಗಳು ಕಂಗಾಲಾಗಿಹೋಗಿದ್ದರು. ಗುರುವನ್ನು ಸಮಾಧಾನ ಮಾಡಲು ಅಲ್ಲಲ್ಲಿ ಪ್ರತಿಭಟನಾ ಪತ್ರಿಕಾಗೋಷ್ಠಿಗಳನ್ನು ರಾಘುನ ಹಿಂಬಾಲಕರು ನಡೆಸಿದ್ದರು. ಅಂಥದೊಂದು ಮಠಾವಲಂಬಿಗಳು ಸುದ್ದಿಗೋಷ್ಠಿ ಕುಮಟೆಯಲ್ಲಿ ನಡೆದಿತ್ತು. ಅದರದು ಕುಮಟೆಯ ಶಾಸಕತ್ವದ ಹಗಲುಗನಸು ಕಾಣುತ್ತಿರುವ ಕಂತ್ರಿಗಳ ಸಮಾವೇಶದಂತಿತ್ತು!

ಕುಮಟೆಯಲ್ಲಿ ತನಗ್ಯಾರು ಹಿತವರೆಂಬ ಲೆಕ್ಕಾಚಾರದಲ್ಲಿ ರಾಘು ತೊಡಗಿದ್ದಾನೆ. ಅತ್ತ ಗುರುಗಳು ತಮಗೆ ವಿಧಾನಸೌಧದ ಮೆಟ್ಟಲು ಹತ್ತಿಸುತ್ತಾರೆಂದು ಬಿಜೆಪಿ ಮತ್ತು ಜೆಡಿಎಸ್‌ನ ಮುಕ್ಕಾಲು ಡಜನ್‌ನಷ್ಟು ಮುಖೇಡಿಗಳು ಮನಸ್ಸಿನಲ್ಲೇ ಮಂಡಿಗೆ ಮುರಿಯುತ್ತಿದ್ದಾರೆ. ಇವರಲ್ಲಿ ಎದ್ದು ಕಾಣುವುದು ಮಾಜಿ ಶಾಸಕ ಸದ್ಯಕ್ಕೆ ಜೆಡಿಎಸ್‌ನಲ್ಲಿ ತೊಳಲಾಡುತ್ತಿರುವ ದಿನಕರ ಶೆಟ್ಟಿ, ಜಿಪಂನ ಜೆಡಿಎಸ್ ಸದಸ್ಯ ಪ್ರದೀಪ್ ನಾಯಕ ಮತ್ತು ಇತ್ತೀಚೆಗಷ್ಟೇ ಕಾಂಗ್ರೆಸ್‌ನಲ್ಲಿ ಯಾವ ಗಂಜಿ ಕೇಂದ್ರವೂ ಸಿಗಲಿಲ್ಲವೆಂಬ ಬೇಸರದಿಂದ ಬಿಜೆಪಿ ಸೇರಿದ್ದ ಡಾ. ಜಿ.ಜಿ. ಹೆಗಡೆ. ಅಕಸ್ಮಾತ್ ಬಿಜೆಪಿ ಟಿಕೆಟ್ ಸಿಕ್ಕರೆ ಈ ಸ್ವಾಮಿ ಕೃಪಾಶೀರ್ವಾದ ಬೇಕಾಗುತ್ತದೆಂದು ಜಿಪಂನ ಬಿಜೆಪಿ ಸದಸ್ಯರ ಗಾಯತ್ರಿ ಗೌಡ, ಅರಣ್ಯ ಇಲಾಖೆಯಲ್ಲಿ ನಿನ್ನೆ-ಮೊನ್ನೆವರೆಗೂ ಮೆಂದು ಅಕ್ರಮಕಳ್ಳನೆಂಬ ಬಿರುದು ಪಡೆದು ಜೈಲು ಪಾಲಾಗಿ ಹೊರಬಂದಿರುವ ತೊರ್ಕೆಯ ನಾಗರಾಜ್ ನಾಯಕ್ ವಗೈರೆಗಳು ಆತನ ಪಾದಕ್ಕೆ ಡೈ ಹೊಡೆಯುವ ಆತನ ಅಕ್ರಮ-ಅವಾಂತರ-ಅಶ್ಲೀಲತೆ ಸಮರ್ಥಿಸುತ್ತಿದ್ದಾರೆ. ಪಾಪ ಕಳೆದ ಬಾರಿ ಬಿಜೆಪಿಯಿಂದ ಸೋತಿದ್ದ ಸೂರಜ್ ನಾಯ್ಕ್ ಸೋನಿಗೆ ಬಿಜೆಪಿಯಲ್ಲೀಗ ಭರವಸೆಯೇ ಉಳಿದಿಲ್ಲ. ಆದರೂ ಆತ ರಾಘು ಪರ ಪೋಸು ಕೊಡುವುದೇ ಒಂದು ಜೋಕು.

ದಿನಕರ ಶೆಟ್ಟಿ ದಿಕ್ಕೆಟ್ಟಿದ್ದಾಕೆ?

ಲಿವಿಂಗ್ ಟು ಗೆದರ್ ಸಂಸ್ಕೃತಿಯ ಹರಿಕಾರನಂತಿರುವ ರಾಘು ಸ್ವಾಮಿಯ ಪರಮಭಕ್ತ ಮಾಜಿ ಸಿಂ[...] ಕುಮಾರಸ್ವಾಮಿ. ಆತ ಸಿಎಂ ಆಗಿದ್ದಾಗ ರಾಘುನ ಮ[...] ಕೊಟ್ಟ ಅನುದಾನ-ಅವಕಾಶ ಅಪಾರ. ಗೋಕರ್ಣ ದೇವ[...] ರಾಮಚಂದ್ರಾಪುರ ಮಠಕ್ಕೆ ಪರಭಾರೆಯಾದಾಗ ದೇಗುಲ[...] ಕೀಲಿ ಕೈ ರಾಘುಗೆ ಹಸ್ತಾಂತರಿಸಿದ್ದು ಅಂದು ಜೆಡಿ[...] ಶಾಸಕನಾಗಿದ್ದ ದಿನಕರ ಶೆಟ್ಟಿ. ಈ ಇಬ್ಬರಿಗೂ ರಾ[...] ಕರುಣಿಸಿದ ಭಾಗ್ಯ-ಪೂಜೆಗಳು ಉಲ್ಟಾ ಹೊಡೆದಿವೆ. ರಾಘ[...] ಕಾಲ್ಗುಣ-ಕೈಗುಣದಿಂದ ಇಬ್ಬರೂ ಪಡಬಾರದ ಪಾ[...] ಪಟ್ಟಿದ್ದಾರೆ.

ಕುಮ್ಮಿ ಸಿಎಂ ಆಗಿದ್ದಾಗ ರಾಘು ಶಿರಸಿಯ ಅಂಬಾ[...] ಮಠ ಖರೀದಿಸಿ ದೊಡ್ಡ ಫಂಕ್ಷನ್ ಮಾಡಿದ್ದ. ಅ[...] 'ಕುಂಕುಮಾರ್ಚನೆ' ವಿಶೇಷ ಕಾರ್ಯಕ್ರಮವಾಗಿತ್ತು. ಕು[...] ಸರ್ಕಾರಿ ಹೆಲಿಕಾಪ್ಟರ್‌ನಲ್ಲಿ ರಾಘುನ ಪದತಲ[...] ಹಾರಿಬಂದಿದ್ದರು. ಅದರ ಫಲವೆಂಬಂತೆ ಕುಮ್ಮಿ ಕೆಲ[...] ದಿನದಲ್ಲಿ ಸಿನಿ ನಟಿ ರಾಧಿಕಾಗೆ ಕುಂಕುಮ ಭಾಗ್ಯ ಕೊಟ್ಟಿದ್ದ[...] ಆ ಕುಂಕುಮ ಭಾಗ್ಯ ಶಾಶ್ವತವಾಗಿಯಾದರೂ ಉಳಿಯಿತ[...] ಊಹುಂ, ರಾಧಿಕಾ "ನಿನ್ನ ಕುಂಕುಮ ನೀನೇ ಇಟ್ಟುಕೋ[...] ಎಂಬಂತೆ ಸಿಟೆದುಕೊಂಡಳು; ದೊಡ್ಡ ಮೊತ್ತದ 'ದ[...] ಎತ್ತಿ ಕುಮ್ಮಿಯನ್ನು ಬಿಟ್ಟುಹೋದಳು.


ಮಾಜಿ ಶಾಸಕ ದಿನಕರ ಶೆಟ್ಟಿಗೂ ರಾಘುನ ಕೈಗು[...] ದಿಂದ ಅನಾಹುತವೇ ಆಗಿದೆ. ಅದು 2013ರ ವಿಧಾನ[...] ಚುನಾವಣೆ ಸಮಯ. ಅಂದು ಶಾಸಕನಾಗಿದ್ದ ದಿನ[...] ಶೆಟ್ಟಿ ಮರು ಆಯ್ಕೆ ಬಯಸಿ ಅಖಾಡಕ್ಕೆ ಇಳಿದಿದ್ದ[...] ಗೆಲ್ಲುವುದು ಗ್ಯಾರಂಟಿ ಎಂಬಂಥ ವಾತಾವರಣವಿತ್ತು. ಆ[...] ಆತ ನಾಮಪತ್ರ ಸಲ್ಲಿಕೆಗೂ ಮೊದಲು ರಾಘು ಸ್ವಾಮಿ[...] ಶಕುನ ನುಡಿಯಂತೆ ಅದ್ದೂರಿ 'ಪಟ್ಟಾಭಿಷೇಕ ಪೂ[...] ಏರ್ಪಡಿಸಿದ್ದರು. ಸಾಕ್ಷಾತ್ ರಾಘು ಸ್ವಾಮಿಯೇ ಶೆ[...] ಮನೆಗೆ ಬಂದು ಪೂಜೆ ಮಾಡಿದ್ದ!

ಆಗಲೇ ಒಂದು ಮಾತು ರಾಜಕೀಯ-ಧಾರ್ಮಿ[...] ವಲಯದಲ್ಲಿ ಕೇಳಿಬಂದಿತ್ತು. ರಾಮ ಪಟ್ಟಾಭಿಷೇಕ ಪೂ[...] ಮಾಡಿದಾಕ್ಷಣವೇ ಅಧಿಕಾರ ಕಳೆದುಕೊಂಡು ವನವಾ[...] ಹೋಗಬೇಕಾಗಿ ಬಂದಿತ್ತಲ್ಲವಾ? ದಿನಕರ ಶೆಟ್ಟಿ ಪಾ[...] ಅದೇ ಆಗುತ್ತದೆಂದು ಜನ ಮಾತಾಡಿಕೊಂಡರು. ಅ[...] ನಿಜವೂ ಆಯ್ತು. ಆತ ಮಾಜಿಯಾಗಿ ಮೂಲೆ ಸೇ[...] ಮೂರೂವರೆ ವರ್ಷ ಕಳೆದಿದೆ. ಜೆಡಿಎಸ್‌ನಿಂದ ಸ್ಪರ್ಧಿ[...] ಗೆಲ್ಲುವ ಧೈರ್ಯವೂ ಉಳಿದಿಲ್ಲ. ವೈಯಕ್ತಿಕ ಜೀವನದ[...] ಅಲ್ಲೋಲಕಲ್ಲೋಲವೇ ಆಗಿದೆ.

ಬಿಜೆಪಿ ಸೇರಲು ತಿಪ್ಪರಲಾಗ ಹಾಕುತ್ತಿದ್ದಾನೆ. ಸಂ[...] ಅನಂತ್ಕುಮಾರ್ ನಂಬಿ ಬಿಜೆಪಿ ಸೇರಲು ಆತ ಅನುಮಾನಿ[...] ತ್ತಿದ್ದಾನೆ. ಅನಂತ್ಕುಮಾರ್ ತನ್ನನ್ನು ಬಿಜೆಪಿಗೆ ಎಳೆದು ಅಂತಿ[...] ವಾಗಿ ತಾನೇ ಕುಮಟಾ ಬಿಜೆಪಿ ಕ್ಯಾಂಡಿಡೇಟಾದರೆ ಏನೆಂಬ ಆತಂಕದಿಂದ ನಿದ್ದೆಗೆಡುತ್ತಿದ್ದಾನೆ. ರಾಘು ಸ್ವಾ[...] ಒಂದು ಕಡೆ ತನಗೆ ಪಂಪ್ ಹೊಡೆಯುತ್ತ ಮತ್ತೊಂ[...] ಯಿಂದ ತನ್ನ ಎದುರಾಳಿ ಪ್ರದೀಪ್ ನಾಯಕ್‌ಗೆ ಎತ್ತಿಕಟ್ಟು[...] ದ್ದಾನೆಂಬುದು ದಿನಕರನ ಕಂಗೆಡಿಸಿಬಿಟ್ಟಿದೆ. ದಿನಕರನ ದು[...] ಸದ್ಯಕ್ಕಂತೂ ಕೊನೆಗಾಣುವಂತೆ ಕಾಣುತ್ತಿಲ್ಲ. ತನ್ನ ಕೈಯ[...] ಬಿಜೆಪಿ ಟಿಕೆಟ್ ಗಾಯತ್ರಿ ಗೌಡ, ಜಿ.ಜಿ. ಹೆಗಡೆ, ಅನಂತ[...] ಕಸಿಮಕೊಂಡಂತೆ ಆತನಿಗೆ ದುಃಸ್ವಪ್ನ ಬೀಳತೊಡಗಿವ[...]


ಪುಂಡ ಪ್ರದೀಪ್‌ಗೆ ಪಂಚಾಮೃತ!

ದಿನಕರ ಶೆಟ್ಟಿ ರಾಘು ಸ್ವಾಮಿಯನ್ನು ಎಷ್ಟು ನಿಷ್ಠೆಯಿ[...]



ಯಡ್ಡಿ, ಕುಮಾರಸ್ವಾಮಿ, ರಾಧಿಕಾ ಕುಮಾರಸ್ವಾಮಿ

ರಕ್ತ ರಾಜಕೀಯ !!





ಈ ಸಲ ಎಮ್ಮೆಲ್ಲೆ ಆಗದಿದ್ದರೆ, ಸತ್ತೇಹೋಗುತ್ತಾನೇನೋ ಎಂಬಂತ ಟೆನಶನ್‌ನಲ್ಲಿ ಒಬ್ಬ ಅಡಿಕೆ ಮರದಂಥ ಆಸಾಮಿ ಕುಮಟಾದ ಸಂಘಪರಿವಾರ-ಬಿಜೆಪಿ ವಲಯದಲ್ಲಿ ಅಂಡಲೆಯುತ್ತಿದ್ದಾನೆ. ಆತನೆ ಸುಪ್ರಸಿದ್ಧ ಸಿಜರೀನ್ ಡಾಕ್ಟರ್ ಜಿ.ಜಿ. ಹೆಗಡೆ. ಅದ್ಯಾಕೆ ಈತನಿಗೆ ರಾಜಕೀಯದ ಹುಕ್ಕಿ ಬಂತೋ ಆ ರಾಘು ಸ್ವಾಮಿಗೆ ಗೊತ್ತು! ಈತ ರಾಜಕಾರಣಕ್ಕೆ ಬಂದಿದ್ದು 'ಬಂ'ರ ಸಮಾಜವಾದಿ ಪಾರ್ಟಿ ಮೂಲಕ. 2008ರ ವಿಧಾನಸಭೆ ಎಲೆಕ್ಷನ್‌ನಲ್ಲಿ ಎಸ್‌ಪಿ ಕ್ಯಾಂಡಿಡೇಟಾಗಿದ್ದ ಡಾ. ಹೆಗ್ಡೇಜಿ ಸ್ವಜಾತಿ ಹವ್ಯಕರ ಜತೆ 'ಬಂ' ಬಂಧುಗಳಾದ ದೀವರ ಮತದಿಂದ ಗೆದ್ದೇ ಬಿಡುವ ಹುಮ್ಮಸ್ಸಿನಲ್ಲಿದ್ದರು.

ಆದರೆ 'ಬಂ'ರ ದೀವರು ಮತ ಹಾಕಿದರೂ ಈತನನ್ನು ಹವ್ಯಕರೇ ನಂಬಿರಲಿಲ್ಲ, ಠೇವಣಿ ಕಳೆದುಕೊಂಡ ಡಾ. ಹೆಗ್ಡೇಜಿಗೆ ರಾಘು ಸ್ವಾಮಿಯ ಬೆಂಬಲವೂ ಬಚಾಯಿಸಲಿಲ್ಲ. ಹೈಗರ ಓಟು ಒಡೆದು 'ಕಾಫಿರ್' ಎನಿಸಿಕೊಂಡ ಡಾ. ಹೆಗ್ಡೇಜಿಯಿಂದ ಅಂದು ಬಿಜೆಪಿ ಅಭ್ಯರ್ಥಿಯಾಗಿದ್ದ ರಾಮಕೃಷ್ಣ ಹೆಗಡೆ ಮೊಮ್ಮಗ ಶಶಿಭೂಷಣ ಹೆಗಡೆ ಕೂದಲೆಳೆ ಅಂತರದಲ್ಲಿ ಸೋತಿದ್ದರು. ಡಾ. ಹೆಗ್ಡೇಜಿ ಸೂಸೈಡರ್ ಬಾಂಬ್ ಆಗಿದ್ದನ್ನು ಹವ್ಯಕರು ಇವತ್ತಿಗೂ ಮರೆತಿಲ್ಲ.

ಇಂಥ ರಾಜಕೀಯ ಇತಿಹಾಸದ ಡಾ. ಹೆಗ್ಡೇಜಿ ಕುಲಗುರು ರಾಘು ಸ್ವಾಮಿಯ ರಾಮಕಥಾ, ಗೋಕಥಾ, ಗೋಪತ್ರ, ಗೋಯಾತ್ರೆಯಂಥ ವಿವಿಧ "ವಿನೋದಾವಳಿ"ಯಲ್ಲಿ ಉದ್ದ ಶಾಲು ಹಾಕಿಕೊಂಡು ಮುಂದೆ ಹೋಗಿ ನಿಲ್ಲುತ್ತ ಬಂದಿದ್ದಾರೆ. ಎಮ್ಮೆಲ್ಲೆಯಾಗಲು ಈತ ಒದ್ದಾಡುತ್ತಿರುವುದು ಸಾಕ್ಷಾತ್ ರಾಘು ಸ್ವಾಮಿಗೇ ರೇಜಿಗೆ ಹಿಡಿಸಿದ ಆತ 'ಡೋಂಗಿ ಡಾಕ್ಟರ್' ಎಂದ್ಹೇಳಿ ದೂರ ಇಡುತ್ತಿದ್ದಾನೆ. ಆದರೆ ಡಾ. ಹೆಗ್ಡೇಜಿ ಮಾತ್ರ ತಾನೊಬ್ಬ ರಾಘು ಸ್ವಾಮಿಯ ಪರಮಾಪ್ತ ಶಿಷ್ಯ ಎಮ್ಮೆಲ್ಲೆಗಿರಿಗೆ ಗುರುಗಳ ಆಯ್ಕೆ ತಾನೇ ಎಂಬಂತೆ ಪೋಸು ಕೊಡುತ್ತಿದ್ದಾನೆ!

ಎಸ್‌ಪಿ ನಂತರ ಕಾಂಗ್ರೆಸ್ ಸೇರಿದ್ದ ಡಾ. ಹೆಗ್ಡೇಜಿ ಅಲ್ಲಿ ನಿಗಮ-ಮಂಡಳಿ ಕುರ್ಚಿಯೂ ಸಿಗಲಿಲ್ಲ ಎಂದು ಮುನಿಸಿಕೊಂಡು ಬಿಜೆಪಿ ಸೇರಿದ್ದಾನೆ. ಧಾರವಾಡದ ಸಂಸದ ಪ್ರಹ್ಲಾದ್ ಜೋಶಿ, ಪತ್ರಕರ್ತ ವಿಷಭಟ್ಟನ ಪವಾಡದಿಂದ ಕುಮಟಾ ಬಿಜೆಪಿ ಟಿಕೆಟ್ ಗ್ಯಾರಂಟಿ ಎಂದು ಡಾ. ಹೆಗ್ಡೇಜಿ ಕನಸು ಕಾಣುತ್ತಿದ್ದಾನೆ. ಆದರೆ 'ಗುರು' ಮಾತ್ರ ಈತನ ನಂಬುತ್ತಿಲ್ಲ. ವಿಷಭಟ್ಟನ ಹತ್ತಿರದ ಸಂಬಂಧಿಯಾದ ಈತ ಆರ್‌ಎಸ್‌ಎಸ್ ಭೂಪರಿಗೆ ಗಂಟು ಬಿದ್ದಿದ್ದಾನೆ.

ಕಲ್ಲಡ್ಕ ಪ್ರಭಾಕರ ಭಟ್ಟನಂಥ ಸಂಘ ಪರಿವಾರದ ಪ್ರಭಾವಿ 'ಡಾನ್'ಗಳನ್ನು ಕುಮಟೆಗೆ ಆಹ್ವಾನಿಸುವ ಚುನಾವಣಾ ತಂತ್ರಗಾರಿಕೆ ಹೆಣೆದಿರುವ ಡಾ. ಹೆಗ್ಡೇಜಿ ಇದು ತನಗೆ ಬಿಜೆಪಿ ಟಿಕೆಟ್ ಕೊಡಿಸುತ್ತದೆಂದು ನಂಬಿದ್ದಾರೆ. ಕುಮಟೆಗೆ ಯಾವ ಸಂಘಪರಿವಾರದ ಹಿರೇಮಣಿಯೇ ಬರಲಿ ಹೈಜಾಕ್ ಮಾಡಿ ಮನೆಗೆ ಕರೆದೊಯ್ಯುವ ಈತ ಅವರಿಗೆಲ್ಲಾ ಪುಷ್ಕಳ ಭೋಜನ ಹಾಕಿ ಕಳಿಸುವುದನ್ನೇ ಸಿದ್ಧಾಂತ ಮಾಡಿಕೊಂಡಿದ್ದಾನೆ. ಎಮ್ಮೆಲ್ಲೆ ಆಗಲು ಈ ಡಾಕ್ಟರ್‌ಜೀ ರಕ್ತ ರಾಜಕೀಯಕ್ಕೆ ಕೈಹಾಕಿರುವುದು ಅಪಾಯಕಾರಿಯಾಗಿದೆ!

ಈತನ ಕೆನರಾ ಹೆಲ್ತ್‌ಸೆಂಟರ್ ಎಂಬ ದುಬಾರಿ ಆಸ್ಪತ್ರೆ ಶುರುವಾಗಿ ಎರಡು ದಶಕವಾಯ್ತಂತೆ. ಈ ಸಂಭ್ರಮದ ನೆಪದಲ್ಲಿ ಡಾ. ಹೆಗ್ಡೇಜಿ ಕುಮಟಾ-ಹೊನ್ನಾವರ ಅಸೆಂಬ್ಲಿ ಕ್ಷೇತ್ರ ವ್ಯಾಪ್ತಿಯ ಜ್ಯೂನಿಯರ್-ಸೀನಿಯರ್ ಕಾಲೇಜುಗಳಲ್ಲಿ "ಹೆಣ್ಣು ಮಕ್ಕಳಲ್ಲಿನ ರಕ್ತಹೀನತೆ-ಹಿಮೋಗ್ಲೋಬಿನ್ ಕೊರತೆ" ಬಗ್ಗೆ ಉಪನ್ಯಾಸ ಕೊಡುವ ಕಾರ್ಯಕ್ರಮ ಹಾಕಿಕೊಂಡಿದ್ದಾನೆ. ಆ ಮೂಲಕ ಬಿಜೆಪಿ ಕ್ಯಾಂಡಿಡೇಟಾಗಲಿರುವ ತನಗೆ ಹದಿಹರೆಯದ ಯುವಕ-ಯುವತಿಯರ ಓಟು ಬರುವಂತೆ ನೋಡಿಕೊಳ್ಳುವ ಕುತಂತ್ರ ನಡೆಸಿದ್ದಾನೆ.

ಈಚೆಗೆ ಈತ ಕುಮಟಾದ ಸರ್ಕಾರಿ ಪದವಿಪೂರ್ವ ಕಾಲೇಜಲ್ಲಿ ಇಂಥದೊಂದು ಢೋಂಗಿ ಕಾರ್ಯಕ್ರಮ ಮಾಡಿದ್ದ; ಕಾಲೇಜಿನ ಮುಖ್ಯಸ್ಥರನ್ನು ಯಾಮಾರಿಸಿ ಕುಖ್ಯಾತ ಕೋಮುವಾದಿ ಚೆಡ್ಡಿ ಚಿತುರ ಕಲ್ಲಡ್ಕ ಪ್ರಭಾಕರ ಭಟ್‌ನನ್ನು ಈತ ಕಾಲೇಜಿಗೆ ನುಗ್ಗಿಸಿದ್ದ. ಈ ಜೀವವಿರೋಧಿ ಭಟ್ಟ ರಕ್ತಹೀನತೆ ಒಂದು ಬಿಟ್ಟು ಸಂಘ ಪರಿವಾರದ ಪ್ರಣೀತ ಕಮ್ಯುನಲ್ ಕುಚೋದ್ಯ ನಡೆಸಿಹೋಗಿದ್ದಾನೆ. ಘರ್‌ವಾಪ್ಸಿಯಿಂದ ಹಿಂದೂತ್ವದ ವಿವಿಧ ಆಯಾಮ ಎಳೆಎಳೆಯಾಗಿ ವಿದ್ಯಾರ್ಥಿ ಸಮೂಹದ ಮುಂದೆ ಬಿಚ್ಚಿಟ್ಟ ಕಲ್ಲಡ್ಕನ ಮುಖ್ಯ ಗುರಿ ಮುಂದಿನ ಒಂದೂವರೆ ವರ್ಷದಲ್ಲಿ ಮತದಾನದ ಹಕ್ಕು ಪಡೆಯುವ ಪಿಯುಸಿ ಎರಡೂ ವರ್ಷದ ವಿದ್ಯಾರ್ಥಿಗಳ ಬ್ರೈನ್‌ವಾಶ್ ಮಾಡೋದಾಗಿತ್ತು.

ತನ್ಮೂಲಕ ಬಿಜೆಪಿಗೆ ಈ ಯುವಕ, ಯುವತಿಯರು ಮತ ಚಲಾಯಿಸುವಂತೆ ಮಾಡುವ ಎಲೆಕ್ಷನ್ ಪ್ರಚಾರ ಇದಾಗಿತ್ತು. ಮಜಾ ಎಂದರೆ, ಈ ಕಾಲೇಜಿನ ಅಭಿವೃದ್ಧಿ ಕಮಿಟಿಗೆ ಸ್ಥಳೀಯ ಕಾಂಗ್ರೆಸ್ ಶಾಸಕಿ ಶಾರದಾ ಶೆಟ್ಟಿಯೇ ಮುಖ್ಯಸ್ಥೆ. ಆಕೆಗೆ ಮುಂದಿನ ಎಲೆಕ್ಷನ್‌ನಲ್ಲಿ ಓಟು ಬೀಳದಂತೆ ಡಾ. ಹೆಗ್ಡೇಜಿ- ಡಾ. ಭಟ್‌ಜೀ ಮಾಡಿದ್ದಾರೆ. ಸರ್ಕಾರಿ ಕಾಲೇಜಿನಲ್ಲಿ ಮತೀಯ ಮಸಲತ್ತಿಗೆ ಅವಕಾಶ ಆಗಿದ್ದೇ ದೊಡ್ಡ ದುರಂತ. ಅಕ್ಷಮ್ಯವೂ ಹೌದು.

ಇದು ಶಿಕ್ಷಣ ಮಂತ್ರಿ ತನ್ವೀರ್ ಸೇಠ್ ಸಾಹೇಬರಿಗೆ ಗೊತ್ತಿದೆಯಾ? ಪಿಯುಸಿ ಶಿಕ್ಷಣ ಇಲಾಖೆಯ ಪ್ರಭೃತಿಗಳಿಗೆ ತಿಳಿದಿದೆಯಾ? ಎಮ್ಮೆಲ್ಲೆ ಆಗುವ ದುರಾಸೆಯಿಂದ ರಕ್ತಪಾತದ ರಾಜಕೀಯಕ್ಕೂ ಡಾ. ಹೆಗ್ಡೇಜಿ ಮುಂದಾಗಿರುವುದು ನಾಚಿಕೆಗೇಡು. ಇಂಥ ಅನಾಹುತಕಾರಿ ಶಾಸಕನಾದರೆ ಕುಮಟೆಯ ಕತೆ ಏನಾದೀತು?



ಗೋಕರ್ಣ ದೇವಸ್ಥಾನ

...ಳುತ್ತಾನೋ ಅಷ್ಟೇ ಉಲ್ಟಾ ಹೊಡೆಯುತ್ತಿದೆ. ಕಳೆದ ...ನಾವಣೆಯಲ್ಲಿ ಆತನ ಎದುರಾಗಿ ಹವ್ಯಕ ...ಡಿಡೇಟ್‌ಗಳಿರಲಿಲ್ಲ. ಆದರೂ ರಾಘುನ ಹವ್ಯಕ ಶಿಷ್ಯ ...ದಿನಕರನಿಗೆ ಮತ ಹಾಕಲಿಲ್ಲ. ಅಂಥ ಪ್ರಯತ್ನವೂ ... ಮಾಡಿರಲಿಲ್ಲ. ಹೀಗಾಗಿ ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದ ...ನ ದಾಯಾದಿ ಅತ್ತಿಗೆ ಶಾರದಾ ಶೆಟ್ಟಿಗೆ ಬ್ರಾಹ್ಮಣರ ... ಬಿದ್ದು ಆಕೆ ಶಾಸಕಿಯೂ ಆಗಿಬಿಟ್ಟರು.

...ಈಗಲೂ ಅಷ್ಟೇ. ದಿನಕರನೆಂದರೆ ರಾಘುಗೆ ಅಷ್ಟಕ್ಕಷ್ಟೇ. ...ರನಿಗೆ ಸೆಡ್ಡು ಹೊಡೆದು ನಿಂತಿರುವ ಕಳ್ಳ ಚಿಪ್ಪಿ ...ಮಿ ಕಮ್ ಜಿಪಂ ಸದಸ್ಯ ಪ್ರದೀಪ್ ನಾಯಕನೇ ...ನ ಅಚ್ಚುಮೆಚ್ಚಿನ ಶೂದ್ರ ಶೂರ! ಗೋಕರ್ಣ ...ದಲ್ಲಿ ರಾಘು ವಿರುದ್ಧ ಯಾರೇ ಸಣ್ಣ ಸೊಲ್ಲೆತ್ತಿದರೂ ... ಹುಟ್ಟಡಗಿಸಬಲ್ಲ ಗೂಂಡಾ-ಗರ್ದಿ ಪದ್ದುನದು! ... ಹೆಸರು ಕೇಳಿದರು ಸಾಕು, ಕೋಟಿ ತೀರ್ಥದಲ್ಲಿ ...ಗಿದ್ದರೂ ರಾಘುನ ವಿರೋಧಿ-ವೈದಿಕರು ಬೆವರುತ್ತಾರೆ. ...ರ್ಣ ದೇವಾಲಯದ ಹಸ್ತಾಂತರ ಹೊತ್ತಲ್ಲಿ ರಾಘುನ ... ಪಡೆಯಲ್ಲಿದ್ದ ಸ್ವಸಮುದಾಯ (ನಾಡವ) ಡಾನ್ ...ಜ್ ಹಿತ್ತಲಮಕ್ಕಿಯೇ ಮುಂತಾದವರು ರಾಘು ... ಬಿಡುವಂತೆ ತಂತ್ರ ಮಾಡಿದ ಪದ್ದು ಈಗ ಗುರುಗಳ ...ರ್ಡ್ ಬ್ರಿಗೇಡ್‌ನ ಏಕಮೇವಾದ್ವಿತೀಯ ಕಮಾಂಡರ್ ...ಳಾಯಿಸುತ್ತಿದ್ದಾನೆ!

...ಘು ಅದೆಷ್ಟೇ ಹೆಂಗಸರ ಸೀರೆ ಸೆಳೆಯಲಿ, ಗೋಕರ್ಣ ... ಲೂಟಿ ಮಾಡಲಿ, ಶೂದ್ರರ ಶೋಷಿಸಲಿ, ಸ್ವತಃ ... ಹತಾರದಂತೆ ಬಳಸಿ ಮಠದ ಪಾರುಪತ್ಯ ...ಯಿಂದ ಹೊರಗಿಡಲಿ ಪದ್ದುಗೆ ಬೇಸರವೇನೂ ಇಲ್ಲ. ...ಳ್ಳ ಚಿಪ್ಪ ವ್ಯವಹಾರ, ಸಿಲಿಕಾ ಸ್ಯಾಂಡ್ ದರೋಡೆಗೆ ...ಕ್ಷವಾಗಿ ಕೃಪೆ ತೋರುವ ರಾಘುನೆಂದರೆ ಪದ್ದುಗೆ ...ಭಕ್ತಿ. ರಾಘುಗೂ ತನ್ನೆಲ್ಲ ರೇಪ್, ರಗಳೆ, ರಾದ್ಧಾಂತ ...ಸಿ ಜನರನ್ನು ... "ಎಲೆಲೆಲೋ... ರೇಹಾ.... ...ಲೋ... ಕೀss...!!" ಎಂದು ಬೊಬ್ಬಿರಿವ ಪದ್ದು ... ಅಪಾರ ನಂಬಿಕೆ. ಈ ಕಾರಣಕ್ಕೇ ಸದ್ರಿ ಗುಲಾಮನೇ ...ಯ ಶಾಸಕನಾಗಲು ಸರ್ವ ಸಮರ್ಥನೆಂದು ಆಯ್ಕೆ ...ಟ್ಟುಕೊಂಡಿದ್ದಾನೆ ರಾಘು ಸ್ವಾಮಿ! ಜೆಡಿಎಸ್‌ನಿಂದ ... ಬಿಜೆಪಿಗೆ ತಂದು ಕ್ಯಾಂಡಿಡೇಟ್ ಮಾಡುವ ಕಸರತ್ತು ... ತುಂಬ ವ್ಯವಸ್ಥಿತವಾಗಿ ಮಾಡುತ್ತಿದ್ದಾನೆ.

ಪದ್ದು ಜಾತಕ

...ಗೊಮ್ಮೆ ಬಿಜೆ... ...ಲ್ಲಿ ತನ್ನ ಮಾತು ನಡೆಯದೆ ... ಶೆಟ್ಟಿಯೇ ಆ... ..., ಹುರಿಯಾಳಾದರೆ ರಾಘು ...ನಿಂದ ಪದ್ದುವ... ...ಕ್ಕೆ ಇಳಿಸುವುದು ಗ್ಯಾರಂಟಿ. ...ಪ್ಪು ಕಳ್ಳ ಕಾಸು... ...ರುವ ಪದ್ದು ಈ ಪೆದ್ದು ...ಡಿಯಾಗೇ ... ಸಂಸದ ಅನಂತ್ಕಾಣಿಯೇ ... ಟಿಕೆಟ್ ತಂ... ...ನ ರಾಘುನ ನಿಲುವೇನು ... ಪಕ್ಷಗೆ ಮತ... ...ಯಿಂದ ಬರುವ ಉತ್ತರ ...ಂಥ ರಕ್ತ ದಪ್ಪ... ...ದೆ. ಅಂದರೆ ಪದ್ದುಗಾಗ ... ಸೀರೇ ಗತಿ ... ...!

...ಮಾಚಾರ್ಯ... ... ಬಿಜೆಪಿ ಅನಿವಾರ್ಯವಾಗಿ ... ಟಿಕೆಟ್ ಕೆ... ... ಪರಿಸ್ಥಿತಿ ನಿರ್ಮಿಸುವ ... ಮಾಡುತ್ತಿದ್ದಾ... ... ಬಲ-ತೋಳ್ಬಲಗಳಿಂದ ...ಯ-ಸಾಮಾಜಿ... ... ಧೂಮಕೇತುವಿನಂತೆ ...ಸುತ್ತಿರುವ ಪದ... ... ಹವ್ಯಕರ ಕೇರಿಗಳಲ್ಲಿ ಹೆಚ್ಚಿಸಲು ರಾಘು ರಂಗುತಾಲೀಮು ಮಾಡುತ್ತಿದ್ದಾನೆ. ಮಠದ ಮಾಣಿಗಳು ಗುರುಕೃಪೆಯ ಸಭೆ-ಸಮಾರಂಭ-ಸನ್ಮಾನ ಏರ್ಪಡಿಸುತ್ತ ಪದ್ದುನ ತಾರೀಫು ಮಾಡುತ್ತಿದ್ದಾರೆ. ಪದ್ದು ಸದ್ಯಕ್ಕೆ ಮಿರ್ಜಾನ್ ಜಿಪಂ ಕ್ಷೇತ್ರದ ಸದಸ್ಯ. ಹಿಂದಿನ ಬಾರಿ ಪಕ್ಕದ ಗೋಕರ್ಣ ಪ್ರತಿನಿಧಿಸಿದ್ದ ಯಾವ ರಾಜಕೀಯ-ಸಾಮಾಜಿಕ ಬದ್ಧತೆಯಿಲ್ಲದ ಈತನಿಗೆ ಅಪ್ಪಟ ಸಮಯಸಾಧಕತನವೇ ಸಿದ್ಧಾಂತ. ರಾಘು ಸ್ವಾಮಿಯಿಂದ ಮಂತ್ರಿ ದೇಶಪಾಂಡೆವರೆಗೆ, ಅಲ್ಲಿಂದ ಸಂಸದ ಅನಂತ್ಕಾಣಿಯಿಂದ ಶಾಸಕ ಮಂಕಾಳು ವೈದ್ಯನ ತನಕ, ಜಿಪಂನ ಐಎಎಸ್ ಸಿಇಓನಿಂದ ಗ್ರಾಪಂನ ಪಿಡಿಓವರೆಗೆ ಯಾರನ್ನು ಬೇಕಿದ್ದರೂ ತನ್ನ ಕಪ್ಪು ಚಿಪ್ಪಿಗೆ ಕೆಡವಿ ಪಳಗಿಸಬಲ್ಲ ಪ್ರಳಯಾಂತಕನೀತ! ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ದೇಶಪಾಂಡೆ ಪುತ್ರನತ್ತ ಎಲ್ಲೆಡೆ ಹಿನ್ನಡೆ ಅನುಭವಿಸಿದರೂ ಪದ್ದುನ ಪವಾಡದಿಂದ ಗೋಕರ್ಣ ಏರಿಯಾದಲ್ಲಿ ಲೀಡ್ ಮಾಡಿದ್ದ. ಹೀಗಾಗಿ ದೇಶಪಾಂಡೆಗೂ ಪದ್ದು ಎಂದರೆ ಪ್ರೀತಿ. ಜಿಪಂ ಸಿಇಓ ಆಗಿದ್ದ ಐಎಎಸ್ ರಾಮಪ್ರಸಾದ್ ಮನೋಹರ್‌ಗೆ ಪದ್ದು ವಾರಕ್ಕೆರಡು ಬಾರಿ ಗೋಕರ್ಣದ ಬೀಚ್ ರೆಸಾರ್ಟ್‌ನಲ್ಲಿ 'ಮೇಜುವಾನಿ' ಮಾಡುತ್ತಿದ್ದುದೇ ದೊಡ್ಡ ಸುದ್ದಿಯಾಗಿತ್ತು!

ಕಪ್ಪೆಚಿಪ್ಪು ಕಳ್ಳ

ಉತ್ತರ ಕನ್ನಡದ 'ಜನಾರ್ದನ ರೆಡ್ಡಿ' ಎಂದೇ ಕುಖ್ಯಾತನಾಗಿರುವ ಪದ್ದು ಬರೀ ಹತ್ತೇ ವರ್ಷದ ಹಿಂದೆ ಅಬ್ಬೇಪಾರಿಯಂತಿದ್ದ. ಈಗಾತ ಕೋಟಿ-ಕೋಟಿಗೆ ತೂಗುತ್ತಾನೆ. ಜಿಪಂಗೆ ಒಂದು ಕೋಟಿ ಬಜೆಟ್‌ನ ಚುನಾವಣೆ ಎದುರಿಸಿದ ಈತ ಅಸೆಂಬ್ಲಿಗೆ ಎನಿಲ್ಲಾ ಕೋಟಿಯಾದರೂ ಚೆಲ್ಲುವ ಯೋಚನೆಯಲ್ಲಿದ್ದಾನೆ. "ನನ್ಹತ್ರ ಮೂರು ಕೋಟಿ ಇದ... ಎರಡ್ ಕೋಟಿ ಖರ್ಚು ಮಾಡ್ತಿ... ಗೆದ್ದೆ, ಎಮ್ಮೆಲ್ಲೆ... ಇಲ್ಲಿದ್ರೆ ಒಂದು ಕೋಟೀಲಿ ಜೀಪ್ನಾ ಮಾಡ್ತೆ... ಸಾಕು...." ಎಂದು ಜೂಜಾಟಕ್ಕೆ ಸಿದ್ಧನಾಗಿದ್ದಾನೆ. ಈತ ಅದೆಷ್ಟು ಅನಾಹುತಕಾರಿಯಾಗಿ ಬೆಳೆದಿದ್ದಾನೆಂದರೆ, "...ರಾಘು ಸ್ವಾಮಿ ತಂಟೆಗೆ ಬಂದ್ರೆ ಸರ್ಕಾರನೇ ಉರುಳಿಸ್ತೇನ..." ಎಂಬ ಚರ್ಬಿ ಮಾತಾಡುತ್ತಿದ್ದಾನೆ.

ಈತನ ತಾಕತ್ತಿರುವುದೇ ಅಘನಾಶಿನಿ ನದಿಯ ಕಪ್ಪೆ ಚಿಪ್ಪು (oyster) ಹಾಗು ಸಿಲಿಕಾ ಸ್ಯಾಂಡ್ ಕಳ್ಳ ಸಾಗಾಣಿಕೆ ದಂಧೆಯಲ್ಲಿ! ಈತ ಈ ಎರಡು ಅಕ್ರಮ ದಂಧೆಯಲ್ಲಿ ಗಳಿಸಿದ್ದು ವ್ಯಯಿಸಿದ್ದಕ್ಕೆ ಲೆಕ್ಕವೇ ಇಲ್ಲ! ಮಾಜಿ ಶಾಸಕ ದಿನಕರ ಶೆಟ್ಟಿ ಹಿಂಬಾಲಕನಾಗಿ ರಾಜಕೀಯ ಆರಂಭಿಸಿದ್ದ ಪದ್ದು ಆತನ ಎಮ್ಮೆಲ್ಲೆ ಅವಧಿಯಲ್ಲಿ ಅಘನಾಶಿ ಸಂಪತ್ತು ಕೊಳ್ಳೆ ಹೊಡೆದಿದ್ದೇ ಹೊಡೆದದ್ದು! ಈತನ ಆರ್ಭಟಕ್ಕೆ ಒಂದು ಹಂತದಲ್ಲಿ ಶಾಸಕಿ ಶಾರದಾ ಶೆಟ್ಟಿ ಮತ್ತಾಕೆಯ ಮಗ ರವಿಕುಮಾರ್ ಶೆಟ್ಟಿ ಹೌಹಾರಿ ಬಿದ್ದಿದ್ದರು. ಈತನನ್ನು ಹೀಗೇ ಬಿಟ್ಟರೆ ನುಂಗಿ ಹಾಕುತ್ತಾನೆಂಬ ಆತಂಕದಿಂದ ಶಾಸಕಿ ಶೆಟ್ಟಿಯಮ್ಮ ಈಗ ಪದ್ದುನ ದೋ ನಂಬರ್ ದಂಧೆಗೆಲ್ಲ ಕಡಿವಾಣ ಹಾಕಿದ್ದಾರೆ. ಇದರಿಂದ ನಿತ್ಯ ಹರಿದುಬರುತ್ತಿದ್ದ 'ಕರೆನ್ಸಿ' ಹರಿವು ನಿಂತಿದೆ! ರಾಜಕೀಯ ಹಾರಾಟಕ್ಕೆ ಬ್ರೇಕ್ ಬಿದ್ದಿದೆ; ಅಬ್ಬರ ಅಡಗಿದೆ.

ಭಿಕ್ಷುಕರಿಗೆ ಕಾವಿ ತೊಡಿಸಿದ ಪದ್ದು!

ಪದ್ದು ರಾಜಕೀಯವಾಗಿ ಮುಂದೆ ಬಂದಿದ್ದು- ಜಿಪಂ ಸದಸ್ಯನಾಗಿದ್ದು ದಿನಕರ ಶೆಟ್ಟಿ ಬೆಂಬಲದಿಂದ; ಆತನ ದೋ ನಂಬರ್ ದಂಧೆಗೆ ಕಸುವು ಬಂದಿದ್ದೂ ದಿನಕರನ ಪರ್ಸೆಂಟೇಜ್ ಲಾಲಸೆಯಿಂದಲೇ. ಈಗ ಗುರುವಿಗೇ ಪದ್ದು ತಿರುಮಂತ್ರ ಹಾಕುತ್ತಿದ್ದಾನೆ. ತನಗೇ ತಿರುಗಿ ನಿಂತಿರುವ ಪದ್ದುಗೆ ಪಾಠ ಕಲಿಸಲು ಕಳೆದ ಜಿಪಂ ಚುನಾವಣೆ ಹೊತ್ತಲ್ಲಿ ದಿನಕರ ಕರಾಮತ್ತು ಮಾಡಿದ್ದ. ಕ್ಷೇತ್ರ ಬದಲಾವಣೆ ನೆಪವೊಡ್ಡಿ ಟಿಕೆಟ್ ತಪ್ಪಿಸಲು ಹವಣಿಸಿದ್ದ. ಗಡಿಬಿಡಿಗೆ ಬಿದ್ದ ಪದ್ದು ಓಡೋಡಿ ಹೋಗಿ ರಾಘು ಸ್ವಾಮಿ ಪಾದಕ್ಕೆ ಬಿದ್ದಿದ್ದ. ಗಿರಿನಗರ ಮಠದಲ್ಲಿ ರಾಘು ಒಂದು ಸಂಧಾನ ಸಭೆ ನಡೆಸಿದ್ದ. ಅದರಂತೆ ಪದ್ದುಗೆ ಜಿಪಂ ಟಿಕೆಟ್ ಕೊಡುವುದು, ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಪದ್ದು ನಿರಂತರವಾಗಿ ದಿನಕರ್‌ಗೆ ಬೆಂಬಲಿಸುವ ಆಣೆ ಪ್ರಮಾಣದ ಒಪ್ಪಂದ ಸ್ವಾಮಿ ಸಮಕ್ಷಮವೇ ನಡೆಯಿತು. ಆಣೆ-ಪ್ರಮಾಣದ ಷಡ್ಯಂತ್ರದಲ್ಲಿ ನಿಸ್ಸೀಮನಾದ ರಾಘುನ ಶಿಷ್ಯ ಪದ್ದು ಜಿಪಂ ಸದಸ್ಯನಾದ ಮರುದಿನವೇ ದಿನಕರನ ಹಣಿದು ಶಾಸಕನಾಗುವ ತಯಾರಿಯಲ್ಲಿ ತೊಡಗಿಬಿಟ್ಟ! ದಿನಕರ ಬಿಜೆಪಿಗೆ ಹೋದರೆ ತಾನು ಜೆಡಿಎಸ್ ಕ್ಯಾಂಡಿಡೇಟೆಂದು ಪದ್ದು ಹೇಳುತ್ತಾನೆ. ಆದರೆ ಪದ್ದು-ರಾಘು ತೆರೆಮರೆ ತಂತ್ರಗಾರಿಕೆ ಬೇರೆ!


ಸಣೆ ರೇಪ್, ಕೋರ್ಟ್-ಕಚೇರಿ ವ್ಯಾಜ್ಯದಿಂದ ಕಳಂಕಿತನಾಗಿ ಕಳೆಗುಂದಿದ್ದ ರಾಘು ಸ್ವಾಮಿಯ ಚೈತನ್ಯಕ್ಕಾಗಿ ಪದ್ದು 'ವಿಶೇಷ' ಪ್ರಯತ್ನ ಮಾಡಿದ್ದ. ಕಳೆದ ವರ್ಷ ರಾಘು ಬೆಂಬಲಾರ್ಥ ಗೋಕರ್ಣದಲ್ಲಿ ಸಾಧು-ಸಂತ-ಮಠಾಧೀಶರ ಸಮಾವೇಶ ಏರ್ಪಡಿಸಿದ್ದ. ಆದರೆ ಈ ಸಮಾವೇಶದಲ್ಲಿ ಮರ್ಯಾದಸ್ಥ ತೂಕದ ಸಾಧು-ಸಂತರ್ಯಾರೂ ಭಾಗವಹಿಸಿರಲಿಲ್ಲ. ಉತ್ತರ ಕನ್ನಡದ ಸ್ವರ್ಣವಲ್ಲಿ, ಸೋಂಧಾ, ಸ್ವಾದಿ, ಚಿತ್ತಾಪುರ, ಕರ್ಕಿ, ಹಳದೀಪುರ ಮಠಾಧೀಶರೇ ಅತ್ತ ತಲೆ ಹಾಕಿದರೂ ಮಲಗಲಿಲ್ಲ. 'ಅತ್ಯಾಚಾರ್ಯ'ನ ಪರ ಮಾತಾಡಿದರೆ ಮರ್ಯಾದೆಗೇಡೆಂದು ಆ ಸಂತರು ದೂರ ಉಳಿದಿದ್ದರು.


ವೇದಿಕೆ ಖಾಲಿ ಬೀಳುವ ಮುನ್ಸೂಚನೆ ಸಿಕ್ಕಿದ್ದೇ ತಡ, ಪದ್ದು ಗೋಕರ್ಣ ದೇವಸ್ಥಾನ-ರಥಬೀದಿಯಲ್ಲಿ ಭಿಕ್ಷೆ ಬೇಡುತ್ತಿದ್ದವರಿಗೆಲ್ಲ 'ಕಾವಿ ದೀಕ್ಷೆ' ಕೊಟ್ಟು ವೇದಿಕೆ ಹತ್ತಿಸಿದ್ದ! ಅಲ್ಲಿಯ ಮುಖ್ಯ ಆಕರ್ಷಣೆ-ಬಾಡಿಗೆ ಮಾತುಗಾರ ಚಕ್ರವರ್ತಿ ಸೂಲಿಬೆಲೆ ಆಗಿತ್ತು. ಈ ಕೊಳಕ ರಾಸಲೀಲಾ ವಿನೋದವನ್ನು ಅದೆಷ್ಟು ಅಶ್ಲೀಲವಾಗಿ ವರ್ಣಿಸಿ ಪ್ರೇಮಲತಾರನ್ನು ಅವಮಾನಿಸಿದ್ದನೆಂದರೆ, ನೆರೆದ ಜನ ಅದನ್ನು ಕೇಳಲಾಗದೇ ಕಿವಿಮುಚ್ಚಿಕೊಂಡಿದ್ದರು. ಸಂಭೋಗ ಎಂಬ ಶಬ್ದ ಪದೇ ಪದೇ ಚಪ್ಪರಿಸುತ್ತ ಉಚ್ಚರಿಸಿದ್ದ ಚಕ್ರವರ್ತಿ ತನ್ನ ಹಿಂದೂತ್ವದ ಮಟ್ಟ-ಸಂಸ್ಕೃತಿ ಪ್ರದರ್ಶಿಸಿದ್ದ!!

ಘಟ ಸ್ಫೋಟ ಆದೀತಾ?

ಸದ್ಯಕ್ಕಂತೂ ರಾಘು-ಪದ್ದು ಗುರು-ಶಿಷ್ಯ ಸಂಬಂಧ ಅನ್ಯೋನ್ಯವಾಗಿದೆ. ಪದ್ದು ಅಂಗಿ ತೆಗೆಯದೇ ಮಠದಲ್ಲಿ ಎಲ್ಲರೆದುರು ಗುರುವನ್ನು ಮುಟ್ಟಿ ಮೈಲಿಗೆ ಮಾಡಿಯೇ ಮಂತ್ರಾಕ್ಷತೆ ಪಡೆಯುತ್ತಿದ್ದಾನೆ. ಗುರುಗಳೋ ಈ ಶಿಷ್ಯನ ಕಂಡಾಗ ಪೀಠದ ಮೇಲೆಯೇ ಕುಣಿದಾಡುತ್ತಾರೆ. ಈ ನಂಟಿನ ಅಂಟಿನ ಸತ್ವ ಪರೀಕ್ಷೆ ಆಗಬೇಕೆಂದರೆ ಕುಮಟೆಯ ಬಿಜೆಪಿ ಕ್ಯಾಂಡಿಡೇಟ್ ಹವ್ಯಕ ಕುಲದ ಸಂಸದ ಅನಂತ್ಕಾಣಿ ಅಥವಾ ಸಿಜರಿನ್ ಡಾಕ್ಟರ್ ಜಿ.ಜಿ. ಹೆಗಡೆ ಆಗಬೇಕು. ಆಗ ಗೊತ್ತಾಗುತ್ತದೆ ರಾಘುಗೆ ಶೂದ್ರರ ಮೇಲಿರುವ ಭಾವನೆ ಎಂಥದೆಂದು. ಒಂದಂತೂ ಖರೆ. ರಾಘು ರಫ್ ಅಂಡ್ ಟಫ್ ಪದ್ದುಗೆ ಕೈಕೊಟ್ಟದ್ದೇ ಆದರೆ, ಆತನ ಗೋಕರ್ಣ ಪುರ ಪ್ರವೇಶವೇ ಕಷ್ಟವಾಗಲಿದೆಯೆಂದು ಖಂಡಿತ! ರಾಘು-ಪದ್ದು ಪ್ರೇಮಾಲಾಪ ಸ್ವಾರ್ಥ-ವ್ಯವಹಾರಿಕವಷ್ಟೇ. ಇದಕ್ಯಾವುದೇ ಧಾರ್ಮಿಕ-ನೈತಿಕ ಬದ್ಧತೆ ಎಂಬುದೇ ಇಲ್ಲ. ಹಾಗಾಗಿ ಮುಂಬರುವ ಎಲೆಕ್ಷನ್ ಇಬ್ಬರ ಬಣ್ಣ ಬಯಲಾಗಿಸಲಿದೆ!

■ ಶುದ್ಧೋಧನ










ಭೂಪಾಲ್ ಎನ್‌ಕೌಂಟರ್ ಸಾವಿಗೆ ಪತಂಜಲಿ ಟೂತ್‌ಬ್ರಶ್ ಮೂಲಕಾರಣ



ಭೂಪಾಲ್‌ನಲ್ಲಿ ಎಂಟು ವಿಚಾರಣಾಧೀನ ಮುಸ್ಲಿಂ ಕೈದಿಗಳ ನಕಲಿ ಎನ್‌ಕೌಂಟರ್ ನಂತರ ಇನ್ನು ಮುಂದೆ ನಡೆಯಲಿರುವ ಮಧ್ಯ ಪ್ರದೇಶ ಪೊಲೀಸ್ ಸಿಬ್ಬಂದಿ ನೇಮಕಕ್ಕೆ ನಡೆಯಲಿರುವ ಪರೀಕ್ಷೆಗಳಲ್ಲಿ ಕೆಳಗಿನ ಮಾದರಿಯ ಅಬ್ಜೆಕ್ಟಿವ್ ಪ್ರಶ್ನೆಗಳನ್ನು 'ಕೌನ್ ಬನೆಗಾ...' ಸ್ಟೈಲಿನಲ್ಲಿ ಕೇಳಲಾಗುತ್ತದೆಯಂತೆ:

* ಕೈದಿಯು ಪತಂಜಲಿ ಟೂತ್‌ಬ್ರಶ್ (ಬೇವಿನ ಕಡ್ಡಿ) ಯಾವುದಕ್ಕೆಲ್ಲಾ ಬಳಸಬಹುದು?

ಎ) ಹಲ್ಲುಜ್ಜಲು ಬಿ) ತಲೆ ಬಾಚಲು, ಸಿ) ಬೆನ್ನು ಕೆರೆಯಲು, ಡಿ) ಜೈಲಿನ ಭಾರಿ ಬೀಗ ತೆರೆಯಲು.

* ಕೈದಿ ಸ್ಟೀಲ್ ಚಮಚ ಯಾವುದಕ್ಕೆ ಬಳಸಬಹುದು?

ಎ) ಚಹಕ್ಕೆ ಸಕ್ಕರೆ ಹಾಕಲು, ಬಿ) ಪಾಯಸ ತಿನ್ನಲು, ಸಿ) ಜೈಲಿನ ಕಾಂಕ್ರೀಟ್ ಗೋಡೆಗೆ ತೂತು ಮಾಡಲು, ಡಿ) ಚಾಕುವಿನಂತೆ ಕಾವಲುಗಾರನನ್ನು ಇರಿಯಲು.

* ಕೈದಿ ಸ್ಟೀಲ್ ತಾಟನ್ನು ಯಾವುದಕ್ಕೆ ಬಳಸಬಹುದು?

ಎ) ಡಿಸ್ಕಸ್ ಥ್ರೋ ಆಡಲು, ಬಿ) ಹಪ್ಪಳ ಕಾಯಿಸಲು, ಸಿ) ಸ್ವಚ್ಛ ಭಾರತ್ ಅಡಿ ಸೆಗಣಿ ಬಾಚಲು, ಡಿ) ಕಾವಲುಗಾರನ ಕತ್ತು ಕೊಯ್ಯಲು.

* ಕೈದಿ ಬೆಡ್‌ಶೀಟನ್ನು ಯಾವುದಕ್ಕೆ ಬಳಸಬಹುದು?

ಎ) ನೆಲದ ಮೇಲೆ ಹಾಸಿ ಮಲಗಲು, ಬಿ) ಚಾದರಿನಂತೆ ಹೊದ್ದುಕೊಳ್ಳಲು, ಸಿ) ಫ್ಯಾನಿಗೆ ಕಟ್ಟಿ ಆತ್ಮಹತ್ಯೆ ಮಾಡಿಕೊಳ್ಳಲು, ಡಿ) ಮೂವತ್ತೈದು ಅಡಿ ಎತ್ತರದ ಜೈಲಿನ ಗೋಡೆ ಏರಲು.

* ಕೈದಿ ಕೈಯ ಉಗುರನ್ನು ಯಾವುದಕ್ಕೆ ಬಳಸಬಹುದು?

ಎ) ತನ್ನ ಮೈ ಪರಚಲು, ಬಿ) ಇನ್ನೊಬ್ಬರ ಬೆನ್ನು ಕೆರೆಯಲು, ಸಿ) ಮುಖದ ಮೊಡವೆ ಚಿವುಟಲು, ಡಿ) ಜೈಲಿನ ಕಾಂಕ್ರೀಟ್ ಗೋಡೆ ಕೆರೆದು ಕೊರೆದು ಕನ್ನ ಮಾಡಲು.

* ಕೈದಿ ಕೈ ಬೆರಳನ್ನು ಯಾವುದಕ್ಕೆ ಬಳಸಬಹುದು?

ಎ) ಮೂಗಿನ ಹೊಲಸು ತೆಗೆಯಲು, ಬಿ) ಇತರರಿಗೆ ಕಚಗುಳಿ ಇಡಲು, ಸಿ) ಯಾರಿಗಾದರೂ ಉಂಗ್ಲಿ ಮಾಡಿ ಕಿಚಾಯಿಸಲು, ಡಿ) ಜೈಲಿನ ಬೀಗ ಕಿರುಬೆರಳಿಂದ ಮುರಿಯಲು.

* ಕೈದಿ ಕೈಗಳನ್ನು ಯಾವುದಕ್ಕೆ ಬಳಸಬಹುದು?

ಎ) ಊಟ ತುರುಕಲು, ಬಿ) ಕುಂಡಿ ತೊಳೆಯಲು, ಸಿ) ಇನ್ನೊಬ್ಬರ ಕಪಾಳಕ್ಕೆ ಬಾರಿಸಲು, ಡಿ) ಸ್ಪೈಡರ್‌ಮ್ಯಾನ್‌ನಂತೆ ಬರಿಗೈಯಲ್ಲಿ ಜೈಲಿನ ಗೋಡೆ ಹತ್ತಲು.

* ಕೈದಿ ಕಾಲನ್ನು ಯಾವುದಕ್ಕೆ ಬಳಸಬಹುದು?

ಎ) ಇನ್ನೊಬ್ಬರಿಗೆ ಒದೆಯಲು, ಬಿ) 35 ಅಡಿ ಗೋಡೆ ಹತ್ತಿ ಆಚೆ ಜಿಗಿದು ಕಾಲು ಮುರಿದುಕೊಳ್ಳಲು, ಸಿ) ಜೈಲಿನಿಂದ ತಪ್ಪಿಸಿಕೊಂಡು ಓಡಲು, ಡಿ) ಇಬ್ಬರು ಪೊಲೀಸರು ಗಟ್ಟಿಯಾಗಿ ಹಿಡಿದು ಮತ್ತೊಬ್ಬ ಪೊಲೀಸ್ ಕೈದಿಯ ಎದೆಗೆ ಪಾಯಿಂಟ್ ಬ್ಲಾಂಕ್ ಗುಂಡು ಹೊಡೆದಾಗ ಕೈದಿ ನೆಲಕ್ಕೆ ಬಿದ್ದು ಕಾಲು ಝಾಡಿಸುತ್ತಾ ಜೀವ ಬಿಡಲು.

* ಪೊಲೀಸರ ನಾಲಿಗೆ ಯಾವುದಕ್ಕೆ ಉಪಯೋಗ?

ಎ) ಶೀಟಿ ಹೊಡೆಯಲು, ಬಿ) ಮೇಲಧಿಕಾರಿಯ ಕಾಲು ನೆಕ್ಕಲು, ಸಿ) ಮುಸ್ಲಿಮರ ಮೇಲೆ ವಿಷ ಕಾರಲು, ಡಿ) ನಕಲಿ ಎನ್‌ಕೌಂಟರ್ ಮಾಡಿ ಮಾಧ್ಯಮದ ಮುಂದೆ ಹಸಿ ಸುಳ್ಳು ಹೇಳಲು.

* ಪೊಲೀಸರ ಕಣ್ಣುಗಳ ಉಪಯೋಗವೇನು?

ಎ) ಟಿವಿ-ಸಿನಿಮಾ ನೋಡಲು, ಬಿ) ಹುಡುಗಿಗೆ ಲೈನ್ ಹೊಡೆಯಲು, ಸಿ) ಸಿಟ್ಟಿನಿಂದ ಕೆಕ್ಕರಿಸಲು, ಡಿ) ಕೈದಿಗಳನ್ನು ಮರಕ್ಕೆ ಕಟ್ಟಿ ಅವರ ಮೇಲೆ ಬಂದೂಕಿನ ಗುರಿ ಇಡಲು.

* ಪೊಲೀಸರ ಮೂಗಿನ ಉಪಯೋಗವೇನು?

ಎ) ಕಾಸಿನ ವಾಸನೆ ನೋಡಲು, ಬಿ) ಸಿಗರೇಟು ಹೊಗೆ ಬಿಡಲು, ಸಿ) ಉಸಿರಾಡಿ ಜೀವಂತವಿರಲು, ಡಿ) ನಕಲಿ ಎನ್‌ಕೌಂಟರ್ ಮಾಡಿ ಮೂಗೆತ್ತಿ ನಡೆಯಲು.

* ಪೊಲೀಸರ ಬಾಯಿಯ ಉಪಯೋಗವೇನು?

ಎ) ತುತ್ತೂರಿ ಊದಲು, ಬಿ) ಸಾರಾಯಿ ಕುಡಿಯಲು, ಸಿ) ಅಧೀನ ಸಿಬ್ಬಂದಿಗೆ ಮತ್ತು ಕೈದಿಗೆ ಅವಾಚ್ಯ ಬಯ್ಯಲು, ಡಿ) ನಕಲಿ ಎನ್‌ಕೌಂಟರ್ ಮಾಡುವ ಆರ್ಡರ್ ಕೊಡಲು.

* ಪೊಲೀಸರ ಕಿವಿಯ ಉಪಯೋಗವೇನು?

ಎ) ಡ್ರಿಲ್-ಪರೇಡ್ ಆದೇಶ ಕೇಳಲು, ಬಿ) ಇಯರ್ ಫೋನ್ ತಾಗಿಸಲು, ಸಿ) ಮೇಲಧಿಕಾರಿಯ ಬೈಗುಳ ಕೇಳಲು, ಡಿ) ಮೇಲಧಿಕಾರಿಯ ನಕಲಿ ಎನ್‌ಕೌಂಟರ್ ಪ್ಲಾನ್ ಸರಿಯಾಗಿ ಕೇಳಿಸಿಕೊಳ್ಳಲು.

* ಪೊಲೀಸರ ಹಲ್ಲಿನ ಉಪಯೋಗವೇನು?

ಎ) ಪೆದ್ದು ಪೆದ್ದಾಗಿ ಕಿಸಿಯಲು, ಬಿ) ದನದ ಮಾಂಸ ಗುಟ್ಟಾಗಿ ಜಗಿಯಲು, ಸಿ) ಬೀಡಿ ಕಚ್ಚಿ ಹಿಡಿಯಲು, ಡಿ) ಕೈದಿಗಳನ್ನು ಮೋಸದಿಂದ ಕೊಂದು ಕೇಕೆ ಹಾಕಲು.

* ಪೊಲೀಸ್ ವ್ಯಾನುಗಳ ಉಪಯೋಗವೇನು?

ಎ) ಮೇಲಧಿಕಾರಿಯ ಹೆಂಡತಿಯನ್ನು ಶಾಪಿಂಗ್‌ಗೆ ಕರೆದುಕೊಂಡು ಹೋಗಲು ಬಿ) ಪ್ರೇಯಸಿಯನ್ನು ಗುಟ್ಟಾಗಿ ಕರೆತರಲು, ಸಿ) ವಿಚಾರಣಾಧೀನ ಕೈದಿಗಳನ್ನು ಕೋ[illegible] ಕರೆದೊಯ್ಯಲು, ಡಿ) ಮುಸ್ಲಿಂ ಕೈದಿಗಳನ್ನು ದೂರದ [illegible] ಪ್ರದೇಶಕ್ಕೆ ಕೊಂಡು ಹೋಗಿ ಗುಂಡು ಹೊ[illegible] ಸಾಯಿಸಲು.

* ಪೊಲೀಸ್ ಯೂನಿಫಾರ್ಮಿನ ಉಪಯೋ[illegible]

ಎ) ಮಾನ ಮುಚ್ಚಲು, ಬಿ) ಮೇಲಧಿಕಾರಿಯ [illegible] ಮಕ್ಕಳಿಗೆ ತಾನು ಅವರ ಸೇವಕ ಎಂದು ಗೊ[illegible] ಸಿ) ಪೊಲೀಸ್ ದರ್ಪ ತೋರಿ ಬೀದಿ ವ್ಯಾಪಾರ[illegible] ಹಫ್ತಾ ವಸೂಲು ಮಾಡಲು, ಡಿ) ರಾತ್ರಿ ಕತ್ತಲ[illegible] ಎನ್‌ಕೌಂಟರ್ ಮಾಡುವಾಗ ಪೊಲೀಸ್ ಯಾ[illegible] ಯಾರು ಎಂಬ ಭೇದ ಗೊತ್ತಾಗಲು.

* ಪೊಲೀಸರ ಪ್ಯಾಂಟ್ ಜೇಬಿನ ಉಪಯೋ[illegible]

ಎ) ರುಮಾಲು ಇಡಲು, ಬಿ) ಲಂಚದ ಕಾಸು [illegible] ಸಿ) ಚಳಿಗಾಲದಲ್ಲಿ ಕೈ ಜೇಬಲ್ಲಿ ಸೇರಿಸಿ ಗೋಲಿ [illegible] ಡಿ) ನಕಲಿ ಎನ್‌ಕೌಂಟರ್ ಮಾಡಿದ್ದಕ್ಕೆ ರಾಜ್ಯ [illegible] ಹಾಗೂ ಸಂಘಗಳು ಗುಟ್ಟಾಗಿ ಕೊಟ್ಟ ಲಕ್ಷ-ಲ[illegible] ಇಡಲು.

* ಪೊಲೀಸರ ಬಂದೂಕಿನ ಉಪಯೋಗವೇ[illegible]

ಎ) ಹಿಂಬದಿಯಿಂದ ಅಡಿಕೆ ಜಜ್ಜಲು, ಬಿ) ವ್ಯಾ[illegible] ಮಾಡುವಾಗ ಡಂಬೆಲ್ಸ್‌ನಂತೆ ಉಪಯೋಗಿಸ[illegible] ಕುಡಿದು ನಡೆಯುವಾಗ ಮೈ ಬ್ಯಾಲನ್ಸ್ ಮಾಡ[illegible] ನಕಲಿ ಎನ್‌ಕೌಂಟರಿಗೆ ಬಳಸಲು.

* ಪೊಲೀಸರು ನಕಲಿ ಎನ್‌ಕೌಂಟರ್‌ನಲ್ಲಿ [illegible] ಯಾವ ಭಾಗಕ್ಕೆ ಗುಂಡು ಹಾರಿಸಿ ಕೊಲ್ಲಬೇಕು[illegible]

ಎ) ಪಾದಕ್ಕೆ, ಬಿ) ಕುಂಡಿಗೆ, ಸಿ) ಗಾಳಿಗೆ, ಡಿ)[illegible]

* ಯಾರು ಯಾರು ನಕಲಿ ಎನ್‌ಕೌಂಟರ್ [illegible] ಸಾಧ್ಯ?

ಎ) ನ್ಯಾಯಾಲಯ ಮತ್ತು ನ್ಯಾಯಾ[illegible] ನಂಬಿಕೆಯೇ ಇಲ್ಲದವರು, ಬಿ) ಫ್ಯಾಸಿಸ್ಟರು, ಸಿ[illegible] ಸ್ಯಾಡಿಸ್ಟರು, ಡಿ) ದೇವರು ಮತ್ತು ಕರ್ಮದಲ್ಲಿ[illegible] ಇಲ್ಲದವರು.

* ಜಗತ್ತಿನ ಭಯೋತ್ಪಾದನೆ ಮತ್ತು [illegible] ಸಂಘಟನೆಗಳಲ್ಲಿ ಹೆಚ್ಚು [illegible] ಯೊ[illegible] ಸಂಘಟನೆ ಯಾವುದು?

ಎ) ಸಿರಿಯಾದ ಐಸಿಸ್ ಬಿ) ನೈಜೀ[illegible] ಬೊಕೊಹಾರಾಮ್, ಸಿ) ಅಫ಼್ಘಾನಿಸ್ತಾನದ ಅಲ್[illegible]

ಆನೆ ಮತ್ತು ರಾಜಕುಮಾರಿ

ದೊಡ್ಡವರಿಗಾಗಿ ಮಕ್ಕಳ ಕಥೆ

ಒಂದಾನೊಂದು ರಾಜ್ಯದಲ್ಲಿ ಒಬ್ಬ ರಾಜನಿದ್ದ. ಅವನಿಗೆ ಒಬ್ಬಳು ಸುಂದರಿಯಾದ ಮಗಳಿದ್ದಳು. ಆವಳು ಎಷ್ಟು ಸುಂದರಿಯೋ ಅಷ್ಟೇ ವಿದ್ಯಾವಂತಳು. ಯುದ್ಧ ಕಲೆಯಲ್ಲಿ ಕೂಡ ಆಕೆ ಗಂಡಸರಿಗಿಂತ ಕಡಿಮೆಯೇನಿರಲಿಲ್ಲ. ಆಡಳಿತ ವಿಷಯದಲ್ಲಿ ಆಕೆ ಎಲ್ಲಾ ಮಂತ್ರಿ, ಪ್ರಧಾನಮಂತ್ರಿಗಳನ್ನು ಮೀರಿಸುವಂತಿದ್ದಳು. ರಾಜನಿಗೆ ತನ್ನ ಮಗಳ ಮೇಲೆ ಎಷ್ಟೊಂದು ಹೆಮ್ಮೆ ಇತ್ತೆಂದರೆ ಅವಳೇ ಮುಂದ ತನ್ನ ಉತ್ತರಾಧಿಕಾರಿ ಎಂದು ಆತ ಘೋಷಿಸಿದ. ಎಲ್ಲವೂ ಸರಿಯಾಗಿದೆ ಎಂದು ಹೊರನೋಟಕ್ಕೆ ಕಾಣಿಸಿಕೊಂಡರೂ ರಾಜಕುಮಾರಿಯ ಒಂದು ರಹಸ್ಯ ಮಾತ್ರ ಯಾರಿಗೂ ತಿಳಿದಿರಲಿಲ್ಲ! ಅದೇನೆಂದರೆ ಆಕೆಗೆ ಒಂದು ಆನೆಯ ಮೇಲೆ ಇದ್ದಂತ ಪ್ರೇಮ! ಚಿಕ್ಕಂದಿನಲ್ಲಿ ಮರದ ಆನೆಯನ್ನು ಆಟವಾಡಲು ಆಕೆಗೆ ಕೊಟ್ಟಿದ್ದರು. ಸುಂದರವಾಗಿ ಕೆತ್ತಿದ್ದ ಆ ಆನೆ ರಾಜಕುಮಾರಿಗೆ ಎಷ್ಟೊಂದು ಇಷ್ಟವಾಯಿತೆಂದರೆ ಆಕೆ ಅದನ್ನು ಬಿಟ್ಟು ಇದ್ದದ್ದೇ ಇಲ್ಲ. ಪ್ರತಿಕ್ಷಣವೂ ಅದು ಅವಳ ಬಳಿಯಲ್ಲಿಯೇ ಇರುತ್ತಿತ್ತು. ರಾಜಕುಮಾರಿ ನಿಧಾನವಾಗಿ ಬೆಳೆಯುತ್ತಿದ್ದ ಹಾಗೆ ಆ ಮರದ ಆನೆಯೂ ಬೆಳೆಯಿತು. ಬೆಳೆಯುತ್ತಿದ್ದ ಆ ಆನೆಯನ್ನು ಅವಳು ಯಾರಿಗೂ ತಿಳಿಸದ ಹಾಗೆ ರಹಸ್ಯವಾಗಿಟ್ಟಿದ್ದಳು. ಕ್ರಮೇಣ ಅವಳು ಆನೆಯನ್ನು ಪ್ರೇಮಿಸಲು ಶುರು ಮಾಡಿದಳು. ಇವಳ ಪ್ರೀತಿಗೆ ಆ ಮರದ ಆನೆ ಮನಸೋತು ತನ್ನ ನಿಜಸ್ವರೂಪವನ್ನು ತೋರಿತು. ಎತ್ತರವಾದ, ದಷ್ಟಪುಷ್ಟವಾದ ಮತ್ತು ಉದ್ದುದ್ದ ಕೋರೆಹಲ್ಲುಗಳ ನಿಜವಾದ ಆನೆಯನ್ನು ನೋಡಿ ರಾಜಕುಮಾರಿ ಮದುವೆ ಆದರೆ ಆ ಆನೆಯನ್ನೆ ಮದುವೆಯಾಗುವುದು ಎಂದು ಮನಸ್ಸಿನಲ್ಲಿ ನಿಶ್ಚಯ ಮಾಡಿದಳು.

ಗೊತ್ತಾದ ಒಂದು ದಿನ ಆ ರಾಜಕುಮಾರಿಯನ್ನು ರಾಜ್ಯದ ರಾಣಿಯನ್ನಾಗಿ ಮಾಡಲಾಯಿತು. ಆಕೆ ಅತಿ ಶೀಘ್ರದಲ್ಲಿ ಜನಪ್ರಿಯಳಾದಳು. ತನ್ನ ರಾಜ್ಯದ ಜನರಿಗೆ ತೊಂದರೆಯಾಗುತ್ತಿದ್ದ ಎಲ್ಲಾ ವಿಷಯಗಳನ್ನು ನಿವಾರಿಸಿದಳು. ಜನ-ವಿರೋಧಿ ಆಚಾರ-ವಿಚಾರಗಳನ್ನು ರದ್ದುಗೊಳಿಸಿದಳು. ರಾಜಾ ಪ್ರತ್ಯಕ್ಷ ದೇವತಾ ಎಂದು ಹಾಡಿ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದ ಪುರೋಹಿತ-ಶಾಸ್ತ್ರಿಗಳಿಗೆ ಈಗ ರಾಣಿ ಪ್ರತ್ಯಕ್ಷ ದೇವತಾ ಎಂದು ಹೇಳಲು ನಾಲಗೆ ಹೊರಡಲೇ ಇಲ್ಲ. ಹೋಮ, ಹವನಗಳಿಗೆ ಕೊಡುತ್ತಿದ್ದ ಪ್ರಾಣಿಬಲಿಯನ್ನು ನಿಷೇಧಿಸಿದಳು. ದುಡಿದು ತಿನ್ನುವವರಿಗೆ ಮಾತ್ರ ರಾಜ್ಯದಲ್ಲಿ ಜಾಗ ಎಂದು ಆದೇಶಿಸಿದಳು. ಹಾಗಾಗಿ ವಾಸ್ತು ಶಾಸ್ತ್ರಿಗಳಿಗೆ, ಜ್ಯೋತಿಷಿಗಳಿಗೆ ಮತ್ತು ದೇವಸ್ಥಾನದ ಅರ್ಚಕರಿಗೆ ಬೆಲೆಯೇ ಇಲ್ಲದ ಹಾಗೆ ಆಯಿತು. ಹೀಗಿರಬೇಕಾದರೆ ಕೆಲವು ದಿನಗಳ ನಂತರ ಅವಳ ಮದುವೆಗಾಗಿ ರಾಜ ಸ್ವಯಂವರವನ್ನು ಏರ್ಪಡಿಸಿದ. ಇದಕ್ಕಾಗಿ ಆತ ಅನೇಕ ರಾಜಕುಮಾರರಿಗೆ ಆಮಂತ್ರಣ ನೀಡಿದ. ಆದರೆ ಆದದ್ದೆ ಬೇರೆ! ಅದೇನಾಯಿತೋ ಏನೋ ರಾಜಕುಮಾರಿಗೆ ರೋಗ ಬಂದು ಹಾಸಿಗೆ ಹಿಡಿದಳು. ಆಕೆಗೆ ಪ್ರೀತಿಪಾತ್ರವಾದ ಆನೆ [illegible] ರಾಜಕುಮಾರಿಯ ರೋಗದ [illegible] ತಿಳಿಯಲಿಲ್ಲ. ಆಕೆ ಯಾವ ರೋಗದಿಂದ [illegible] ನಿವಾರಿಸಬಹುದೆಂದು [illegible] ವೈದ್ಯರಿಗೂ [illegible]

ಅವರ ವೈದ್ಯರಿಗೂ [illegible] ಇಲ್ಲ. ರಾಜಕುಮಾರಿಯ ರೋಗ ದಿನೇದಿನೇ ಉಲ್ಬಣವಾಗುತ್ತಿತ್ತು. ರಾಜನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಇದುವರೆಗೂ ಭೂಗತವಾಗಿದ್ದ ವಾಸ್ತು ಶಾಸ್ತ್ರಿಗಳು, ಜ್ಯೋತಿಷಿಗಳು ಮತ್ತು ಅರ್ಚಕರು ಇದೇ ತಕ್ಕ ಸಮಯವೆಂದು ಮತ್ತೆ ಪ್ರತ್ಯಕ್ಷರಾದರು. ರಾಜನ ಬಳಿ ಹೋಗಿ, "ರಾಜನ್, ಯಾವ ವೈದ್ಯರಿಂದಲೂ ವಾಸಿಮಾಡಲಾಗದ ರೋಗ ನಿಮ್ಮ [illegible] ಅಂಟಿಕೊಂಡಿದೆ. [illegible] ನಿವಾರಿಸಿಕೊಳ್ಳಬೇಕು [illegible] ಇದು ಕೆಟ್ಟಿಲ್ಲ [illegible] ನಿವಾರಿಸಲು [illegible] ಕುರಿ-ಕೋಳಿಗಳನ್ನು [illegible] ದೇವರ ಪ್ರಸಾದ ಸಾಕು. [illegible] ನೀನು ದಾನ-ಧರ್ಮಗಳನ್ನು [illegible]



[illegible] ನೀಡು. ನಾವು ಒಂದು [illegible] ಜಪ-ತಪ [illegible] ಜನರನ್ನು ಹೊರಡಿಸಿದರು. [illegible] ಆಗಲೇ ನಿನ್ನ ಮಗಳು ಗುಣಮುಖಳಾಗುವುದು" ಹೇಳಿದರು. ಮಗಳು [illegible] ರಾಜ ಹೇಳಿದ್ದನ್ನು ಮಾಡಲು [illegible] ಶುರುಮಾಡಿದ. ಪ್ರಾಣಿಬಲಿಗಳು [illegible] ದಾನ-ಧರ್ಮಗಳು ಹೆಚ್ಚಾದವು. [illegible] ಜ್ಯೋತಿಷಿಗಳು [illegible] ಜ್ಯೋತಿಷ್ಯಕ್ಕೆ ಜನ ಮರುಳಾದರು.

ಇಷ್ಟೆಲ್ಲಾ ಆಗುತ್ತಿದ್ದರೂ [illegible] ಒಂದು [illegible] ಅದರೊಂದು [illegible] ಹೀಗೆ "[illegible] ರಾಜ. [illegible] ನಿನಗೆ ನಿನ್ನ ಮಗಳು [illegible] ಬೇಕೇ!"

ಅದಕ್ಕೆ ರಾಜ, "[illegible] ನನ್ನ ಉಳಿಸಬೇಕು. ಅದಕ್ಕಾಗಿ [illegible] ಏನು [illegible] ಮಾಡುತ್ತೇನೆ" ಎಂದ.

"ಹಾಗಾದರೆ ಕೇಳು. [illegible] ಅನೆಯ ಬಳಿ [illegible] ಜೀವ-ಚೈತನ್ಯವನ್ನು [illegible] ನಿನ್ನ ಉಳಿಯುತ್ತಾಳೆ" ಎಂದು [illegible]

ರಾಜ ಹಾಗೆ ಮಾಡಿದ [illegible] ಆ ಆನೆ [illegible] ಎಲ್ಲಾ ಕಡೆ [illegible] ಎಲ್ಲೂ ಸಿಗಲೇ ಇಲ್ಲ [illegible] ಕುಮಾರಿಯ [illegible] ಏನೂ [illegible] ಮಾಡಿ [illegible]

[illegible]

ಭಾರತದ ಆರ್‌ಎಸ್‌ಎಸ್.

* ನಕಲಿ ಎನ್‌ಕೌಂಟರ್ ಮಾಡಲಾದ ಕೈದಿಗಳಲ್ಲಿ ಇನ್ನೂ ಅರ್ಧ ಜೀವಂತವಿದ್ದರೆ ಏನು ಮಾಡಬೇಕು?

ಎ) ಅವನನ್ನು ಆಸ್ಪತ್ರೆಗೆ ಸಾಗಿಸಿ ಬದುಕಿಸಿ ಮತ್ತೆ ...ಗೆ ತಳ್ಳಬೇಕು, ಬಿ) ಅವನನ್ನು ಬದುಕಿಸಿ ಮಾಫಿ ಮಾಡಬೇಕು, ಸಿ) ಅರೆಸತ್ತವನನ್ನು ಅವನ ...ಂಬಿಕರಿಗೆ ಬಿಟ್ಟು ಕೊಡಬೇಕು, ಡಿ) ಅವನ ತಲೆಗೆ ...ನ್ನೊಂದು ಗುಂಡು ಹೊಡೆದು ಪೂರ್ಣ ಕೊಲ್ಲಬೇಕು.

* ಹೇಳಿ ಸರಿಯೋ ತಪ್ಪೋ: ಪೊಲೀಸ್ ಕೆಲಸಕ್ಕೆ ...ದುಳು ಮತ್ತು ಮನುಷ್ಯತ್ವ ಬೇಕು?

ಎ) ಹೌದು ಸ್ವಲ್ಪ ಬೇಕು, ಬಿ) ಇಲ್ಲ ಬೇಕಾಗಿಯೇ ... ಸಿ) ಮೆದುಳು-ಮನುಷ್ಯತ್ವ ಇದ್ದವರು ನಕಲಿ ...ಕೌಂಟರ್ ಮಾಡುವುದು ಸಾಧ್ಯವಿಲ್ಲ, ಡಿ) ಮೆದುಳಿಲ್ಲದ ...ಂಸಕರು ಮಾತ್ರ ನಕಲಿ ಎನ್‌ಕೌಂಟರ್ ಮಾಡಲು ...ಧ್ಯ.

ಇವೇ ಮೇಲಿನ ಪ್ರಶ್ನೆಗಳನ್ನು 15 ವರ್ಷಗಳ ಹಿಂದೆ ...ರಾತಿನ ಪೊಲೀಸರಿಗೆ ಕೇಳಿಯೇ ಅವರನ್ನು ಆರಿಸಿದ್ದು. ... 15 ವರ್ಷಗಳಿಂದಲೂ ಗುಜರಾತಿನಲ್ಲಿ ಅತ್ಯುತ್ತಮ ...ಲ್ಟ್ ಕೊಡುತ್ತಿದೆ. ಈಗ ಮೊನ್ನೆ ಭೂಪಾಲ್‌ನಲ್ಲಿ ಮಧ್ಯ ...ಶದ ಮೊದಲ ಬ್ಯಾಚಿನ ಪ್ರಾಕ್ಟಿಕಲ್ ಫೀಲ್ಡ್ ಟೆಸ್ಟ್ ...ದು ಎಲ್ಲ ಪೊಲೀಸರೂ ಪಾಸಾದರು. ಸದ್ಯದಲ್ಲಿಯೇ ...ರ ಬಿಜೆಪಿ ಆಡಳಿತದ ರಾಜ್ಯಗಳಲ್ಲಿಯೂ ಇಂತಹದ್ದೇ ...ನಾವಳಿ ಅಲ್ಲಿಯ ಪೊಲೀಸ್ ನೇಮಕಾತಿ ಪರೀಕ್ಷೆಯಲ್ಲಿ ...ಲಾಗುತ್ತದೆ ಹಾಗೂ ನಕಲಿ ಎನ್‌ಕೌಂಟರಿನ ಪ್ರಾ...ಲ್ ಫೀಲ್ಡ್ ಟೆಸ್ಟ್ ಸಹ ಇರಲಿದೆ.

ಮೂಲತಃ 15 ವರ್ಷದ ಹಿಂದೆ ಈ ಪ್ರಶ್ನಾವಳಿ ...ರಾರಿಸಿದವನು ಹಾಗೂ ಪ್ರಾಕ್ಟಿಕಲ್ ಟೆಸ್ಟ್ ...ಮಕೊಂಡವನು ಗುಜರಾತಿನ ಅಮಿತ್ ಜೈನ್ ಎಂಬ ... ಅಹಿಂಸಾವಾದಿ ನಕಲಿ ಎನ್‌ಕೌಂಟರ್ ಸ್ಪೆಷಾಲಿಸ್ಟ್!

ಭೂಪಾಲಿನ ಎಂಟು ಕೈದಿಗಳ ಸಾವಿಗೆ ಪೊಲೀಸರು ...ರಲ್ಲ, ಎಲ್ಲಾ ಶುರುವಾಗಿದ್ದೇ ಪತಂಜಲಿ ಟೂತ್ ...ನಿಂದ. ಎಂಟು ಕೈದಿಗಳು ಎಂಟು ಬೇರೆ ಬೇರೆ ...ಸೆಲ್ಲಿನ ಎಂಟು ಬೇರೆ ಬೇರೆ ಕಂಪನಿಯ ಭಾರೀ ...ಗಳನ್ನು ಒಂದೇ ಕಾಲಕ್ಕೆ ತೆರೆಯಲು ಸಾಧ್ಯವಾಗಿದ್ದರಿಂದ ...ಗೂ ಅದೇ ಬೇವಿನ ಟೂತ್ ಬ್ರಶ್‌ನಿಂದ ...ಲುಗಾರರನ್ನು ಬೆದರಿಸಿದ್ದರಿಂದ. ಹಾಗಾಗಿ ದೇಶದಾದ್ಯಂತ ...ಜಲಿ ಟೂತ್ ಬ್ರಶ್ ನಿಷೇಧಿಸಬೇಕೆಂದು ಬಿಜೆಪಿ ...ರ ನಿರ್ಧರಿಸಿದೆ.


■ ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

... ಅದರ ಬಳಿ ಹೋಗಿ ಪ್ರಾಣಭಿಕ್ಷೆಯನ್ನು ಬೇಡಿ...ತ್ತೇನೆ. ನಿನ್ನ ಮಗಳನ್ನು ಉಳಿಸುತ್ತೇನೆ. ಆದರೆ ಒಂದು ...ತ್ತು" ಎಂದು ಹೇಳಿದ. ರಾಜ ಕೇಳಿದ, "ಏನದು?" ...ಕ ಹೇಳಿದ, "ಅರ್ಧ ರಾಜ್ಯದ ಜೊತೆಗೆ ನಿನ್ನ ಮಗಳನ್ನು ...ಟ್ಟು ನನಗೆ ಮದುವೆ ಮಾಡಿಸಬೇಕು." ರಾಜ ...ಯಿಲ್ಲದೆ ಈ ಷರತ್ತಿಗೆ ಒಪ್ಪಿಕೊಂಡ.

ಭಿಕ್ಷುಕ ಏಳು ನದಿಗಳು, ಏಳು ಪರ್ವತಗಳು ಮತ್ತು ... ಸಮುದ್ರಗಳನ್ನು ದಾಟಿ ಆನೆ ಇರುವ ಒಂದು ...ವರದ ಬಳಿ ಬಂದ. ಅಲ್ಲಿ ಬಂದು ನೋಡಿದಾಗ ...ಗೆ ಆಘಾತ ಕಾದಿತ್ತು. ರಾಜಕುಮಾರಿಯ ಪ್ರಾಣವನ್ನು ...ಕೊಂಡಿದ್ದ ಆ ಆನೆ ಕೂಡ ಸಾಯುವ ಸ್ಥಿತಿಯಲ್ಲಿತ್ತು. ... ಮೈಯೆಲ್ಲಾ ರಕ್ತ-ಸಿಕ್ತವಾಗಿತ್ತು, ನೋವಿನಿಂದ ...ಡುತಿತ್ತು. ಒಂದು ಕಡೆ ಮೊಸಳೆಗಳು ಆನೆಯನ್ನು ... ತಮ್ಮತಮ್ಮಲ್ಲೆ ಬಡಿದಾಡುತ್ತಿದ್ದರೆ, ಮತ್ತೊಂದು ...ಮತ್ತೊಂದು ರಾಜ್ಯದ ರಾಜನ ಸೈನಿಕರು ಆನೆ ತಲೆಯನ್ನು ...ಕೊಂಡು ಹೋಗಿ, ಪೂಜೆ ಮಾಡಲು ಕಾಯುತ್ತಿದ್ದರು. ...ವನ್ನು ನೋಡಿದ ಭಿಕ್ಷುಕನಿಗೆ ದುಃಖ ಉಮ್ಮಳಿಸಿ... ಆನೆಯ ದೈನ್ಯ ಸ್ಥಿತಿಯನ್ನು ನೋಡಲಾಗದೆ ...ವನ್ನು ಪ್ರಾರ್ಥಿಸಿದ. ಅವನ ಭಕ್ತಿಗೆ ಮನಸೋತು ...ರು ಪ್ರತ್ಯಕ್ಷನಾದ, "ವತ್ಸ, ಏನು ಬೇಕು ನಿನಗೆ? ... ಕರೆದೆ ನನ್ನನ್ನು?"

...ಗ ಭಿಕ್ಷುಕ ದೇವರ ಕಾಲಿಗೆ ಬಿದ್ದು "ಓ ದಯಾಳು, ...ಮೂಕಪ್ರಾಣಿಯ ಪ್ರಾಣವನ್ನು ಉಳಿಸು. ಇದರ [illegible]

[illegible]



ಟಿಪ್ಪು ಕಂಡ ಕನಸುಗಳೊಂದಿಗೆ ದುರ್ಗದ ಸ್ವಾಮಿ ಅಪರಂಪಾರ

1834ರಲ್ಲಿ ಕೊಡಗಿನ ಕೊನೆಯ ಅರಸ ಚಿಕ್ಕ ವೀರರಾಜೇಂದ್ರ ಒಡೆಯನನ್ನು ಪದಚ್ಯುತಿಗೊಳಿಸಿ ಕಾಶಿಗೆ ಕಳುಹಿಸಲಾಗುತ್ತದೆ. ಬ್ರಿಟಿಷ್ ಸೈನಿಕರ ಕಣ್ಗಾವಲಿನಲ್ಲಿ ರಾಜನ ಪರಿವಾರ ದಾರಿ ಮಧ್ಯೆ ಕೆಲದಿನ ವೆಲ್ಲೂರಿನಲ್ಲಿ ನಿಂತು ಮುಂದಕ್ಕೆ ಹೋಗುತ್ತದೆ. ಆ ಸಂದರ್ಭ ಇಂಗ್ಲಿಷರ ಬಂಧಿಯಾಗಿ ವೆಲ್ಲೂರಿನ ಕಾರಾಗೃಹದಲ್ಲಿದ್ದ ಸ್ವಾಮಿ ಅಪರಂಪಾರನನ್ನು ಭದ್ರತೆಯ ಕಾರಣಕ್ಕಾಗಿ ತಿರುಚಿರಾಪಳ್ಳಿಯ ಸೆರೆಮನೆಗೆ ಕಳುಹಿಸುತ್ತಾರೆ. ಅಪರಂಪಾರನ ಕಾರ್ಯಾಚರಣೆಯ ಪಾರಮ್ಯಕ್ಕೆ ಬ್ರಿಟಿಷರೂ ಭಯಭೀತರಾಗಿರುತ್ತಾರೆ. ಯಾರೀತ?!

ಚಿತ್ರದುರ್ಗದ ಮರಾಠಿಗರ ಹನುಮಂತಪ್ಪ ಮೈಸೂರು ಸೇನೆಯ ಒಬ್ಬ ಯೋಧ. ಟಿಪ್ಪುವಿನ ಸೈನಿಕನಾಗಿದ್ದ ಆತ ಮೈಸೂರು ಯುದ್ಧದಲ್ಲಿ ಮರಣ ಹೊಂದುತ್ತಾನೆ. ಆ ಹೊತ್ತಲ್ಲಿ ಹನುಮಂತಪ್ಪನ ಮಗ ಕತ್ರಪ್ಪ ಬಾವು ಚಿಕ್ಕ ಹುಡುಗ. ದೊಡ್ಡವನಾಗುತ್ತಿದ್ದಂತೆ ತಂದೆಯ ಸಾವು ಅವನನ್ನು ಅತೀವವಾಗಿ ಕಾಡಲು ತೊಡಗುತ್ತದೆ.

ಟಿಪ್ಪು ಸತ್ತ ನಂತರ ನಾಲ್ಕರ ಹರೆಯದ ಎಳೆಮಗು ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್‌ನನ್ನು, ಭೂಪ್ರದೇಶ ವ್ಯಾಪ್ತಿಯನ್ನು ಕಿರಿದುಗೊಳಿಸಲಾದ ಮೈಸೂರು ದೇಶದ ರಾಜನನ್ನಾಗಿ ನೇಮಿಸಲಾಗುತ್ತದೆ. ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸ್ಥಳಾಂತರಗೊಳಿಸಲಾಗುತ್ತದೆ. ಇಡೀ ಮೈಸೂರು ದೇಶವೇ ವಿದೇಶಿ ಇಂಗ್ಲಿಷರ ನಿಯಂತ್ರಣದಲ್ಲಿರುತ್ತದೆ. ಹಾಗಿದ್ದೂ ದಿವಾನಗಿರಿಯಲ್ಲಿ ಮುಂದುವರಿಸಲ್ಪಟ್ಟಿದ್ದ ವಂಚಕ ಪೂರ್ಣಯ್ಯನ ದುರಾಡಳಿತಕ್ಕೆ ಜನ ಕಂಗಾಲಾಗುತ್ತಾರೆ. ಲಕ್ಷಾಂತರ ಮೊತ್ತದ ಹಣದ ಭ್ರಷ್ಟಾಚಾರದ ಆರೋಪ ಅವನ ಮೇಲಿರುತ್ತದೆ. ವಾರ್ಷಿಕವಾಗಿ 10,000 ಸ್ಟಾರ್ ಪಗೋಡ ವರಮಾನ ಬರುತ್ತಿದ್ದ ಯಲಂದೂರಿನ ಜಮೀನನ್ನು 27-12-1807ರಂದು ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ವಿಶೇಷ ದರ್ಬಾರ್ ಕರೆದು ದಿವಾನ್ ಪೂರ್ಣಯ್ಯನಿಗೆ ಜಹಗೀರಾಗಿ ನೀಡುತ್ತಾರೆ. ತಮಾಷೆಯೆಂದರೆ ಆಗ ಅರಸನ ವಯಸ್ಸು 11-12 ವರ್ಷವಷ್ಟೆ!

1831ರಲ್ಲಿ ಬ್ರಿಟಿಷರು ಮೈಸೂರನ್ನು ಸಂಪೂರ್ಣವಾಗಿ ತಮ್ಮ ಕೈವಶಪಡಿಸಿಕೊಂಡು ಈ ಪ್ರಾಂತ್ಯದ ಆಡಳಿತ ನಡೆಸಲು ಕಮಿಶನರ್ ಒಬ್ಬನನ್ನು ನೇಮಕಗೊಳಿಸಿ ಅರಸರ ಹಕ್ಕುಗಳಿಗೆ ತಿಲಾಂಜಲಿ ಎರೆಯುತ್ತಾರೆ.

ತಂದೆಯ ಸಾವು, ಮೈಸೂರಿನ ಅಧಃಪತನ ಈ ಎಲ್ಲವುಗಳು ಕತ್ರಪ್ಪ ಬಾವುವನ್ನು ವಿಚಲಿತಗೊಳಿಸುತ್ತವೆ. ಈ ದುರಂತಗಳಿಗೆ ಕಾರಣರಾದ ಆಂಗ್ಲರ ವಿರುದ್ಧದ ಈತನ ಆಕ್ರೋಶ ಹೆಚ್ಚಾಗುತ್ತಲೇ ಹೋಗುತ್ತದೆ. ಇದೇ ಸಮಯದಲ್ಲಿ ಕತ್ರಪ್ಪ ಬಾವುವಿಗೆ ಮದುವೆಯಾಗುತ್ತದೆ. ಆದರೆ ಸಾಂಸಾರಿಕ ಜೀವನ ಆತನನ್ನು ಸೆಳೆಯುವುದಿಲ್ಲ. ಬ್ರಿಟಿಷರನ್ನು ಮಟ್ಟಹಾಕಲು ಅಖಂಡ ಭಾರತದಾದ್ಯಂತ ಸಮರವನ್ನು ಸಂಘಟಿಸುವ ಕನಸನ್ನು ಕಾಣತೊಡಗುತ್ತಾನೆ. ಈ ಮಹತ್ವಾಕಾಂಕ್ಷೆಗೆ ಕುಟುಂಬ ಅಡ್ಡಿಯಾಗುತ್ತದೆ. ಕೊನೆಗೊಮ್ಮೆ ಎಲ್ಲ ಬಂಧನಗಳನ್ನು ಕಳಚಿ ಸನ್ಯಾಸಿಯಾಗಲು ತೀರ್ಮಾನಿಸುತ್ತಾನೆ. ಸ್ವಾಮಿ ಅಪರಂಪಾರನೆಂಬ ಹೆಸರಲ್ಲಿ ಸಂಸಾರದ ಕಟ್ಟುಗಳನ್ನು ಕಳಚಿಕೊಳ್ಳುತ್ತಾನೆ. ಅಲ್ಲಿಗೆ ಅವನ ಸುದೀರ್ಘ ಹೋರಾಟದ ಮಜಲು ತೆರೆದುಕೊಳ್ಳುತ್ತದೆ.

ಸ್ವಾಮಿ ಅಪರಂಪಾರ ತದನಂತರ ದೇಶದಾದ್ಯಂತ ಸಂಚರಿಸಲು ಆರಂಭಿಸುತ್ತಾನೆ; ಜನಸಾಮಾನ್ಯರನ್ನು, ರಾಜರುಗಳನ್ನು, ಪಾಳೆಯಗಾರರನ್ನು ಭೇಟಿ ಮಾಡಿ ಬ್ರಿಟಿಷರ ವಿರುದ್ಧದ ಮನಃಸ್ಥಿತಿಯನ್ನು ಸಜ್ಜುಗೊಳಿಸಲು ತೊಡಗುತ್ತಾನೆ. ಜೊತೆಗೆ ಏಕಕಾಲದಲ್ಲಿ ಇಂಗ್ಲಿಷರ ವಿರುದ್ಧ ಕಾದಾಟ ಆರಂಭಿಸಲು ಒಕ್ಕೂಟವೊಂದನ್ನು ರಚಿಸುವುದು ಅವನ ಹಂಬಲವಾಗಿತ್ತು, ತನ್ನ ಅನುಯಾಯಿ ಹುಲಿಕಡಿದ ನಂಜಯ್ಯನ ಜೊತೆಗೂಡಿ ಈತ ಧಾರವಾಡ, ನಗರ, ಊಟಿ, ಬಳ್ಳಾರಿ, ಮೈಸೂರು, ಮಡಿಕೇರಿ, ಮಂಗಳೂರು, ಹೈದರಾಬಾದ್, ಪೂನಾ, ಸತಾರ, ಕೊಲ್ಲಾಪುರ, ಗ್ವಾಲಿಯರ್, ಲಾಹೋರ್, ಪೇಶಾವರ ಮುಂತಾದೆಡೆಗಳಲ್ಲಿ ಸಂಚರಿಸಿರುತ್ತಾನೆ. ಮೈಸೂರಿನ ಅರಸನೊಂದಿಗೆ ಈತನಿಗೆ ನಿಕಟ ಸಂಪರ್ಕ ಇರುತ್ತದೆ. ಮೈಸೂರು ಒಡೆಯರ ಸಂಬಂಧಿ ಅರಮನೆ ಬಸಪ್ಪಾಜಿ ಅರಸನೊಂದಿಗೆ ಆಪ್ತತೆಯಿರುತ್ತದೆ.

ಸ್ವಾಮಿ ಅಪರಂಪಾರ ವರ್ಚಸ್ವೀ ವ್ಯಕ್ತಿತ್ವವನ್ನು ಹೊಂದಿದ್ದ. ಆತ ಒಳ್ಳೆಯ ಹಾಡುಗಾರನೂ ಆಗಿದ್ದ ಅವನಿಗೆ ಪಾರಂಪರಿಕ ವೈದ್ಯದ ಜ್ಞಾನವಿತ್ತು, ಸಮರ ಸಂಘಟನೆಯ ಉದ್ದೇಶದಿಂದ ಊರಿಂದೂರಿಗೆ ತತ್ವಪದಗಳನ್ನು ಹೇಳುತ್ತಾ, ರೋಗಿಗಳನ್ನು ಉಪಚರಿಸುತ್ತಾ ಸಾಗುತ್ತಿದ್ದ. ಇದರಿಂದಾಗಿ ಗುಪ್ತವಾಗಿ ಕೆಲಸ ನಿರ್ವಹಿಸಲು ಅವನಿಗೆ ಅನುಕೂಲವಾಗುತ್ತಿತ್ತು.

ಈ ಸಮಯದಲ್ಲಿ ಕೊಡಗು ರಾಜಕೀಯ ದಳ್ಳುರಿಗೆ ಈಡಾಯಿತು. ಒಂದೆಡೆ ಚೆನ್ನಬಸಪ್ಪ ಎಂಬ ಹೆಸರಲ್ಲಿ ಲಿಂಗಾಯತ ಧರ್ಮಕ್ಕೆ ಮತಾಂತರಗೊಂಡು ತನ್ನ ತಂಗಿಯನ್ನು ವರಿಸಿದ್ದ ಮುಕ್ಕಾಟಿರ ಐಪಣ್ಣ ಎಂಬಾತ ಆತನ ಮಗನಿಗೆ ಮುಂದೆ ರಾಜಪಟ್ಟ ದೊರಕಬೇಕೆಂದು ವರಾತ ತೆಗೆದದ್ದು, ಇನ್ನೊಂದೆಡೆ ಇಂಗ್ಲಿಷರು ಮಡಿಕೇರಿ ಮುಖಾಂತರ ಮಲಬಾರಿಗೆ ರಸ್ತೆ ನಿರ್ಮಾಣಕ್ಕೆ ಒತ್ತಡ ತಂದುದು, ಮತ್ತೊಂದು ಕಡೆ ಈಸ್ಟ್ ಇಂಡಿಯಾ ಕಂಪೆನಿ ತನ್ನಲ್ಲಿ ಇರಿಸಿಕೊಂಡಿದ್ದ ಡಿಪಾಸಿಟ್ ಹಣವನ್ನು ಹಿಂದಿರುಗಿಸಲು ನಿರಾಕರಿಸತೊಡಗಿದ್ದು ಇವೆಲ್ಲವೂ ಕೊಡಗಿನ ಕೊನೆಯ ಅರಸ ಹಾಲೇರಿ ಚಿಕ್ಕವೀರರಾಜನ ಪಿತ್ತವನ್ನು ಕೆರಳಿಸಿತು. ಆತ ವಿದೇಶಿ ಆಂಗ್ಲರ ವಿರುದ್ಧ ತೊಡೆತಟ್ಟಲಾರಂಭಿಸಿದ. ಮೈಸೂರಿನ ಅರಮನೆ ಬಸಪ್ಪಾಜಿ ಅರಸ, ಪಡುವಾರಳ್ಳಿ ಬೋರೇಗೌಡ ಮತ್ತು ಹಲವು ಮುಸ್ಲಿಂ ಮುಂದಾಳುಗಳ ಸಹಕಾರದೊಂದಿಗೆ ದೀರ್ಘ ಕಾಲ ವೈಷಮ್ಯದ ಸಂಬಂಧವಿದ್ದ ಮೈಸೂರಿನೊಂದಿಗೆ ಹೊಸದೊಂದು ಬಾಂಧವ್ಯ ಏರ್ಪಡಿಸಿದ. 1826ರಲ್ಲಿ ಮೈಸೂರಿನಲ್ಲಿ ದಂಗೆಗೆ ಪ್ರಯತ್ನಿಸಿದ ಗುಲಾಮ್ ಮಹಮ್ಮದ್ ಖಾನ್‌ನೊಂದಿಗೆ ಸಂಪರ್ಕ ಸಾಧಿಸಿದ. ಈ ಗುಲಾಮ್ ಮಹಮ್ಮದ್ ಖಾನ್ ಒಬ್ಬ ಮತಾಂತರಿಯಾಗಿದ್ದು, ಆತನ ಸೋದರಮಾವ ನಾರಾಯಣರಾವ್ 1830-32ರ ನಗರ ರೈತ ಬಂಡಾಯದ ನಾಯಕರಲ್ಲೊಬ್ಬನಾಗಿದ್ದ. ಚಿಕ್ಕವೀರರಾಜ ಬೆಂಗಳೂರು, ಮೈಸೂರು ಮತ್ತು ನಗರದಲ್ಲಿ ದಂಗೆ ನಡೆಯುವಂತೆ ಸ್ಫೂರ್ತಿ ನೀಡಿದ. ಪ್ರಥಮವಾಗಿ ನಗರದಲ್ಲಿ ದಂಗೆ ಆರಂಭಗೊಂಡುದು ಈತನ ಇಚ್ಛೆಯ ಪ್ರಕಾರವೇ ಆಗಿತ್ತು ಎಂದು ಕೊಡಗಿನ ದಾಖಲೆಗಳು ತಿಳಿಸುತ್ತವೆ. ಬೆಂಗಳೂರಿನಲ್ಲಿ 1832ರಲ್ಲಿ ಕಂಟೋನ್ಮೆಂಟ್ ಪಿತೂರಿಯೆಂಬ ಹೆಸರಿನ ಒಳಸಂಚೊಂದು ನಡೆಯುವ ಹೊತ್ತಲ್ಲಿ ಕೊಡಗಿನ ರಾಜನ 400 ಮಂದಿ ಯೋಧರು ಮೈಸೂರಿನಲ್ಲಿ ಮತ್ತು 300 ಮಂದಿ ಯೋಧರು ಬೆಂಗಳೂರಿನಲ್ಲಿ ನಿಯೋಜಿಸಲ್ಪಟ್ಟಿರುತ್ತಾರೆ. ಉದ್ದೇಶಿತ ದಂಗೆ ವಿಫಲವಾದ ನಂತರ ಈ ಪಿತೂರಿಯ ಮುಖ್ಯ ಆರೋಪಿ ಅಬ್ಬಾಸ ಸಾಹೇಬನಿಗೆ ಚಿಕ್ಕವೀರರಾಜ ಮಡಿಕೇರಿಯಲ್ಲಿ ಆಶ್ರಯ ನೀಡುತ್ತಾನೆ. ಬ್ರಿಟಿಷರ ವಿರೋಧವಾಗಿ ಹೋರಾಟ ನಡೆಸುವ ಉದ್ದೇಶವನ್ನು ಹೊಂದಿದ್ದ ಪಂಜಾಬಿನ ರಾಜ ರಣಜಿತ್ ಸಿಂಹನೊಂದಿಗೆ ಈತ ಗೆಳೆತನ ಬೆಳೆಸುವ ಪ್ರಯತ್ನವನ್ನೂ ನಡೆಸಿದ. ಗಂಜಂನ ಫಕ್ರುದ್ದೀನ್ ಎಂಬಾತ ಮಡಿಕೇರಿಯ ರಾಜನೊಂದಿಗೆ ಒಪ್ಪಂದವೊಂದಕ್ಕೆ ಭಾಗಿಯಾಗಿ 2000 ಸಿಪಾಯಿಗಳನ್ನು ಕೊಡಗಿಗೆ ಕಳುಹಿಸಲು ಒಪ್ಪುತ್ತಾನೆ. ಬ್ರಿಟಿಷರೊಂದಿಗೆ ಯುದ್ಧವಾಗುವ ಸಾಧ್ಯತೆಯನ್ನು ವಿವರಿಸಿ ಸೈನ್ಯದ ಸಹಾಯವನ್ನು ಕೋರಿ ಹೈದರಾಬಾದಿನ ನವಾಬ್ ಮುಖ್ತಾರನಿಗೆ ಚಿಕ್ಕವೀರರಾಜ ಪತ್ರವೊಂದನ್ನು ಬರೆದಿರುತ್ತಾನೆ. ಅದಲ್ಲದೆ ಮೈಸೂರಿನ ವಿವಿಧ ಪಾಳೆಯಗಾರರೊಂದಿಗೆ ಈತ ಸಂಪರ್ಕ ಇಟ್ಟುಕೊಂಡಿರುತ್ತಾನೆ. ಚಿರಕಲ್ ರಾಜನಲ್ಲಿಗೆ ರಾಜಧೂತನನ್ನು ಕಳುಹಿಸುತ್ತಾನೆ. ಮಲಬಾರಿನ ಕೇಳಿಯತ್ ನಂಬಿಯಾರ್‌ನನ್ನು ತನ್ನಲ್ಲಿ ಬರಮಾಡಿಕೊಳ್ಳುತ್ತಾನೆ. ಬಳ್ಳಾರಿ, ಸುರಪುರ, ಚಿತ್ರದುರ್ಗ ಮತ್ತು ಬಳ್ಳಾಪುರದ ಪಾಳೆಯಗಾರರು ಉದ್ದೇಶಿತ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಚಿಕ್ಕವೀರರಾಜನಿಗೆ ತಮ್ಮ ಸಹಮತವನ್ನು ಸೂಚಿಸುತ್ತಾರೆ. ನಗರ ರೈತ ಹೋರಾಟದ ಮುಂದಾಳುಗಳಲ್ಲೊಬ್ಬನಾದ ತರಿಕೆರೆಯ ಪಾಳೆಯಗಾರ ಸರ್ಜಪ್ಪ ನಾಯಕನಿಗೆ ಚಿಕ್ಕವೀರರಾಜ ಕೊಡಗಿನಲ್ಲಿ ಆಶ್ರಯ ನೀಡಿದ್ದ ಈ ಹಂತದಲ್ಲಿ

▶▶| 19



...ನನ್ನಿಂದ ಸಾಧ್ಯವಿಲ್ಲ. ಇದಕ್ಕೆ ಈ ದುಸ್ಥಿತಿಯನ್ನು ತಂದವರು ನಿನ್ನ ರಾಜನ ಜನಗಳೆ. ರಾಜಕುಮಾರಿ ಜನಪ್ರಿಯವಾಗುತ್ತಿದ್ದುದನ್ನು ಸಹಿಸದ ಮಂತ್ರಿ, ಪ್ರಧಾನ ಮಂತ್ರಿಗಳು ವಾಸ್ತುಶಾಸ್ತ್ರಿ, ಜ್ಯೋತಿಷಿ ಮತ್ತು ಅರ್ಚಕರ ಜೊತೆಗೂಡಿ ಈ ಆನೆಯನ್ನು ಹೊಡೆದು, ಬಡಿದು ಅದರ ಕೋರೆಹಲ್ಲುಗಳನ್ನು ಕಿತ್ತು ವಿದೇಶಿಯರಿಗೆ ಮಾರಿ, ಇದನ್ನು ಇಲ್ಲಿ ಸಾಯಲು ಬಿಸಾಕಿ ಹೋಗಿದ್ದಾರೆ."

ಭಿಕ್ಷುಕ, "ರಾಜಕುಮಾರಿಯ ಜನಪ್ರಿಯತೆಗೂ, ಈ ಆನೆಗು ಏನು ಸಂಬಂಧ? ಈ ಆನೆಯನ್ನು ಯಾಕೆ ಅವರು ಸಾಯುವ ಹಾಗೆ ಮಾಡಿದರು" ಎಂದು ಗಾಬರಿಯಿಂದ ಕೇಳಿದ.

ದೇವರು, "ಮರಿ, ರಾಜಕುಮಾರಿಗೂ, ಈ ಆನೆಗು ಪ್ರೇಮ ಏತ್ತು, ನನ್ನನ್ನು ಮದುವೆಯಾಗು ಎಂದು ರಾಜಕುಮಾರಿ ಆನೆಯನ್ನು ಕೇಳಿಕೊಂಡಳು. ಆನೆ ಒಪ್ಪಿಕೊಂಡಿತು. ರಾಜಕುಮಾರಿಗೆ ರಾಜ್ಯ ದೊರೆತಾಗ ಈ ಆನೆಯೂ ರಹಸ್ಯವಾಗಿ ರಾಜಕುಮಾರಿಯ ಜೊತೆಗೂಡಿ ರಾಜ್ಯದಲ್ಲಿ ಅನೇಕ ಬದಲಾವಣೆಗಳನ್ನು ತರಲು ಪ್ರಯತ್ನಿಸಿತು. ರಾಜಕುಮಾರಿ ರಾಜ್ಯದಲ್ಲಿ ಹೋಮ, ಹವನಗಳಿಗೆ ಕೊಡುವ ಪ್ರಾಣಿಬಲಿಯನ್ನು ನಿಷೇಧಿಸಿದಳು. ಅದಕ್ಕೆ ಇಂಬು ಕೊಡುವ ಜ್ಯೋತಿಷ್ಯ ಶಾಸ್ತ್ರವನ್ನು ರದ್ದುಗೊಳಿಸಿದಳು. ವಾಸ್ತು ಶಾಸ್ತ್ರದ ವಿದ್ಯೆಯನ್ನು ತೆಗೆದುಹಾಕಿದಳು. ಬಡವರಿಗೆ ದುಡಿಯಲು ಭೂಮಿ ಹಂಚಿದಳು. ಎಲ್ಲರಿಗೂ ವಿದ್ಯೆ ಕೊಟ್ಟಳು. ನನ್ನ ಹೆಸರಿನಲ್ಲಿ ನಡೆಯುತ್ತಿದ್ದ ಅನೇಕ ಅನಿಷ್ಟ ಪದ್ಧತಿಗಳನ್ನು ಇಲ್ಲವಾಗಿಸಿದಳು. ತಾವು ದಿನಾಲು ಕಾಣುತ್ತಿದ್ದ ಕನಸಿನ ರಾಜ್ಯವನ್ನು ಕಟ್ಟಲು ನಿಮ್ಮ ರಾಜಕುಮಾರಿ ಮತ್ತು ಈ ಆನೆ ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಇವರಿಬ್ಬರ ಸಂಬಂಧವನ್ನು ಹೇಗೋ ತಿಳಿದುಕೊಂಡ ರಾಜನ ಸುತ್ತಮುತ್ತಲಿನವರು ಈ ಆನೆಯನ್ನು ಕೊಂದರೆ ಮಾತ್ರ ನಮಗೆ ಉಳಿಗಾಲವೆಂದು ತಿಳಿದು ಆನೆಗೆ ಈ ದುಸ್ಥಿತಿಯನ್ನುಂಟು ಮಾಡಿದ್ದಾರೆ. ಇವರಿಬ್ಬರ ಕನಸು ನುಚ್ಚುನೂರಾಯಿತು" ಎಂದು ಇದುವರೆಗೂ ನಡೆದಿದ್ದನ್ನು ಹೇಳಿದ.

ಆನೆಯ ದುಸ್ಥಿತಿಗೆ ಕಾರಣವನ್ನು ತಿಳಿದ ಭಿಕ್ಷುಕ ಹತಾಶೆಯಿಂದ, "ಹಾಗಾದರೆ, ಈ ಆನೆಯನ್ನು ಉಳಿಸುವುದು ಹೇಗೆ? ರಾಜಕುಮಾರಿ ಮತ್ತೆ ಚೇತರಿಸಿಕೊಳ್ಳುತ್ತಾಳೆಯೇ?" ಎಂದು ಗೋಗರೆದ.

ಇದಕ್ಕೆ ದೇವರು, "ವತ್ಸ, ಆನೆ ಮತ್ತು ರಾಜಕುಮಾರಿಯ ಕನಸಿನ ರಾಜ್ಯ ಮತ್ತೆ ಮರಳಿ ಬಂದರೆ ಮಾತ್ರ ಇಬ್ಬರ ಪ್ರಾಣ ಉಳಿಯುತ್ತದೆ" ಎಂದು ಹೇಳಿ ಅದೃಶ್ಯನಾದ.

ರಾಜನಿಗೆ ನಡೆದ ಎಲ್ಲಾ ಸಂಗತಿಗಳು ತಿಳಿದವು. ಒಂದು ಕಡೆ ಜ್ಯೋತಿಷಿ, ಅರ್ಚಕರು ಮತ್ತು ವಾಸ್ತು ಶಾಸ್ತ್ರಿಗಳು ಆನೆಯನ್ನು ಉಳಿಸಲು ಗಜೇಂದ್ರ ಮೋಕ್ಷ ಸ್ತೋತ್ರವನ್ನು ನಡೆಸಲು ತಯಾರಿ ನಡೆಸುತ್ತಿದ್ದಾರೆ. ಮತ್ತೊಂದು ಕಡೆ ಆನೆ ಮತ್ತು ರಾಜಕುಮಾರಿಯ ದುಸ್ಥಿತಿ ಹಾಗೆ ಇದೆ. ರಾಜ ಗಜೇಂದ್ರ ಮೋಕ್ಷ ಸ್ತೋತ್ರಕ್ಕೆ ಅನುಮತಿ ನೀಡುವುದೋ ಅಥವಾ ಆನೆ ಮತ್ತು ರಾಜಕುಮಾರಿಯ ಕನಸಿನ ರಾಜ್ಯವನ್ನು ತರುವುದೋ ಗೊತ್ತಾಗದೆ, ಹತಾಶಗೊಂಡು ತಾಸಿಗೆ ಹಿಡಿದಿದ್ದಾನೆ.

■ ಡಾ. ವಿಜಯಕುಮಾರ ಎಂ ಬೋರಟ್ಟಿ

ರೈತ ಕಾರ್ಮಿಕರ ಬಂಧು ಟಿಪ್ಪು ಸುಲ್ತಾನ

ಜಾಗತಿಕ ಚರಿತ್ರೆ ಕಂಡ ಓರ್ವ ಅತ್ಯಂತ ಜನಪರ ರಾಜನಾಗಿಯೂ ಟಿಪ್ಪುವಿನಷ್ಟು ವಿಕೃತಿಗೊಳಿಸಲಾದ ಇನ್ನೊಬ್ಬ ರಾಜ ವಿಶ್ವಚರಿತ್ರೆಯಲ್ಲೇ ಸಿಗಲಾರನೇನೋ? ಟಿಪ್ಪುವನ್ನು ಓರ್ವ ಮೂಢ, ಮತಾಂಧ ಅರಸನೆಂದು ಬಲಪಂಥೀಯ ಇತಿಹಾಸಕಾರರು, ಸಾಹಸುಶಾಹಿಪರ ಇತಿಹಾಸಕಾರರು ದಾಖಲಿಸಿದ್ದಕ್ಕೆ ಮತ್ತು ಬಲಪಂಥೀಯ ರಾಜಕೀಯ ಪ್ರವೃತ್ತಿಗಳು ಬಿಂಬಿಸುತ್ತಿರುವುದಕ್ಕೆ ಎಡಪಂಥೀಯ ಮತ್ತು ಎಡ ಮತ್ತು ಬಲ ಎಂಬ ಯಾವುದೇ ಪಂಥದೊಂದಿಗೆ ಗುರುತಿಸಿರದ ಇತಿಹಾಸಕಾರರು ಅದನ್ನು ಸುಳ್ಳಿನ ಕಂತೆಗಳೆಂದು ಸಾಬೀತುಪಡಿಸುವ ಧಾರಾಳ ವಿಚಾರಗಳನ್ನು ಗಟ್ಟಿ ದಾಖಲೆಗಳ ಮೂಲಕ ವಾದ ಮಂಡಿಸುತ್ತಲೇ ಬಂದಿದ್ದಾರೆ. ಇಂದಿನ ಕೋಮು ದ್ವೇಷದ ಪರಿಕಲ್ಪನೆಯೂ ಸುಮಾರು ಎರಡೂ ಕಾಲುಶತಮಾನಗಳ ಹಿಂದೆ ಇರಲಿಲ್ಲ. ಅದೇರೀತಿ ಆಧುನಿಕ ಸೆಕ್ಯುಲರಿಸಂನ ಪರಿಕಲ್ಪನೆಯೂ ಆ ಕಾಲದಲ್ಲಿ ಇರಲಿಲ್ಲ. ಎಲ್ಲೋ ಅಲ್ಲಿ ಇಲ್ಲಿ ಅಂತಹದ್ದು ನಡೆದಿದ್ದರೆ ಅದು ವೈಯಕ್ತಿಕ ಕಾರಣವಾಗಿತ್ತೇ ಹೊರತು ಅದರ ಹಿಂದೆ ಯಾವುದೇ ರಾಜಕೀಯ ಉದ್ದೇಶವೂ ಇರಲಿಲ್ಲ. ದುರಂತವೇನೆಂದರೆ ಟಿಪ್ಪುವಿನಂತಹ "ಸಹಜ ಸೆಕ್ಯುಲರ್‌ವಾದಿ"ಯ ಚರ್ಚೆ ಪ್ರಾರಂಭವಾಗುವುದೇ ಕಮ್ಯುನಲಿಸಂನ ಕೊಳಚೆ ಮನಸ್ಸುಗಳಿಂದ ಎಂಬುದನ್ನು ನಾವು ನೋಡುತ್ತಾ ಬಂದಿದ್ದೇವೆ ಮತ್ತು ಟಿಪ್ಪುವಿನ ಕುರಿತ ಚರ್ಚೆಗಳೂ ಉಪಾಂತ್ಯಗೊಳ್ಳುವುದು ಟಿಪ್ಪು ಮತಾಂಧನೋ ಅಲ್ಲವೋ ಎಂಬ ಸೀಮಿತ ಚೌಕಟ್ಟಿನ ಒಳಗೆ ಎನ್ನುವುದು ಬೇಸರದ ಸಂಗತಿ. ಕೇವಲ ಇಂತಹ ಚರ್ಚೆಯಲ್ಲೇ, ಟಿಪ್ಪು ಎಂಬ ಜನಪರ ರಾಜನ ವ್ಯಕ್ತಿತ್ವ ಮುಗಿದು ಹೋಗಬಾರದು. ಬಹಳಷ್ಟು ವಸ್ತುನಿಷ್ಠ ಇತಿಹಾಸಕಾರರು ಟಿಪ್ಪುವಿನ ರೈತ ಪರ, ಕಾರ್ಮಿಕ ಪರ ಮುಖವನ್ನು ವಿಸ್ತೃತವಾಗಿ ದಾಖಲಿಸಿದ್ದಾರೆ. ಈ ನಿಟ್ಟಿನಲ್ಲಿ ಒಂದೆರಡು ವಿಚಾರಗಳತ್ತ ಬೆಳಕು ಚೆಲ್ಲುವ ಪ್ರಯತ್ನ ಇಲ್ಲಿದೆ.

ಜಗತ್ತಿನಲ್ಲಿ ಪ್ರಪ್ರಥಮ ಬಾರಿಗೆ ದುಡಿವ ಕೈಗಳಿಗೆ ಭೂಮಿಯ ಹಕ್ಕು ಕೊಟ್ಟಿದ್ದರೆ ಅದು ಫ್ರೆಂಚ್ ಕ್ರಾಂತಿ. ಜಾಗತಿಕ ಇತಿಹಾಸದಲ್ಲಿ ಎರಡನೇ ಬಾರಿಗೆ ಉಳುವ ಕೈಗಳಿಗೆ ಭೂಮಿಯ ಒಡೆತನ ಕೊಟ್ಟ ರಾಜ ಟಿಪ್ಪು ಸುಲ್ತಾನ್. ಟಿಪ್ಪು ಹುತಾತ್ಮರಾಗಿ 217 ವರ್ಷಗಳೇ ಸಂದರೂ ಇಂದಿಗೂ ಟಿಪ್ಪುವಿನ ವಿರುದ್ಧದ ಯುದ್ಧವನ್ನು ಜೀವಂತವಿಟ್ಟಿರುವವರಲ್ಲಿ ಅಥವಾ ಕಾಲಾಳುಗಳಲ್ಲಿ ಟಿಪ್ಪುವಿನ ಭೂ ಸುಧಾರಣೆಯ ಫಲಾನುಭವಿಗಳ ಸಂತತಿಯವರೂ ಇರಬಹುದು.

ಟಿಪ್ಪು 1787 ರಲ್ಲಿ ಹೊರಡಿಸಿದ ಕಂದಾಯ ನಿಯಮಾವಳಿಗಳು

"ಉಳುಮೆದಾರ ಅಥವಾ ಅವನ ವಾರಸುದಾರರು ಕಂದಾಯವನ್ನು ಸರಿಯಾಗಿ ಕೊಡುತ್ತಿದ್ದರೆ ಅವರ ಜಮೀನನ್ನು ಬಿಡಿಸುವಂತಿಲ್ಲ, ಭೂಮಾಲೀಕ ಸ್ವತಃ ಜಮೀನನ್ನು ಸಾಗುವಳಿ ಮಾಡುತ್ತಿರಬೇಕು. ಇಲ್ಲವಾದರೆ ಅವನು ಜಮೀನು ಕಳೆದುಕೊಳ್ಳುತ್ತಾನೆ. ರೈತ ಹೊಸದಾಗಿ ಜಮೀನನ್ನು ಉಳುಮೆ ಮಾಡಿದ ಮೊದಲ ಮೂರು ವರ್ಷ ಕಂದಾಯವನ್ನು ಕೊಡಬೇಕಾಗಿಲ್ಲ, ಮಳೆ ಬಾರದ ಹಾಗೂ ನೀರಾವರಿ ವ್ಯವಸ್ಥೆ ಸರಿಯಾಗಿ ಕೆಲಸ ಮಾಡದಿದ್ದ ಕಷ್ಟ ಕಾಲದಲ್ಲಿ ಕಂದಾಯವನ್ನು ಕಡಿಮೆ ಮಾಡಬೇಕು. ಇಲ್ಲವೇ ಸಂಪೂರ್ಣ ಮನ್ನಾ ಮಾಡಬೇಕು. ಭೂಮಿ ಹೆಚ್ಚು ಬೆಳೆ ಕೊಡುವಂತೆ ಮಾಡಬೇಕು. ರೈತನ ಅಭ್ಯುದಯಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು".

ಕಮ್ಯೂನಿಸ್ಟ್ ಚಿಂತನೆಗಳು ಕಣ್ಣು ಬಿಡದೇ ಇದ್ದ ಕಾಲದಲ್ಲಿ ಇಷ್ಟೊಂದು ಸ್ಪಷ್ಟ ಸ್ವರೂಪದ ರೈತ ಸ್ನೇಹಿ ಕಾನೂನನ್ನು ಜಾರಿಗೆ ತಂದ ಇನ್ನೋರ್ವ ರಾಜನನ್ನೋ, ಆಡಳಿತಾಧಿಕಾರಿಯನ್ನೋ ಇತಿಹಾಸದಲ್ಲಿ ನಾವು ಕಾಣಲು ಸಾಧ್ಯವಿಲ್ಲ. 21ನೇ ಶತಮಾನದ ಯಾವ ಪ್ರಜಾತಾಂತ್ರಿಕ ಸರಕಾರವೂ ಇಂತಹ ಅದ್ಭುತ ಕಂದಾಯ ನೀತಿಯನ್ನು ಜಾರಿಗೆ ತಂದಿಲ್ಲ, ಇಲ್ಲಿ ಕಾರ್ಪೊರೇಟ್ ದರೋಡೆಕೋರರಿಗೆ ತೆರಿಗೆ ವಿನಾಯಿತಿ ಕೊಡಲಾಗುತ್ತದೆಯೇ ಹೊರತು ನಾಡಿನ ಅನ್ನದಾತರಿಗಲ್ಲ. ಬರ ಪರಿಹಾರದ ಹೆಸರಲ್ಲೂ ಖಜಾನೆಯನ್ನು ಲೂಟುವ ಆಧುನಿಕ ಪ್ರಜಾತಾಂತ್ರಿಕ ಪ್ರಭುಗಳಿಗೆ ಟಿಪ್ಪುವಿನ ಈ ಕಂದಾಯ ನಿಯಮಾವಳಿಯಿಂದ ಕಲಿಯುವುದು ಬಹಳಷ್ಟಿದೆ.

ಟಿಪ್ಪು ಸುಲ್ತಾನರು 1788 ರಲ್ಲಿ ತನ್ನ ಸಾಮ್ರಾಜ್ಯದ ಎಲ್ಲಾ ಜಿಲ್ಲೆಗಳ ಅಮಲ್ದಾರರಿಗೆ ಹೊರಡಿಸಿದ ಸುತ್ತೋಲೆಯೊಂದು ಇಂತಿದೆ:

"ವ್ಯವಸಾಯವು ರಾಷ್ಟ್ರದ ಜೀವಾಳ. ಶ್ರೀಮಂತ ಹಾಗೂ ಫಲವತ್ತಾದ ಈ ಭೂಮಿಯು ತನ್ನ ಮೇಲೆ ಕಷ್ಟಪಟ್ಟು ಕೆಲಸ ಮಾಡುವವರಿಗೆ ತಕ್ಕ ಪ್ರತಿಫಲವನ್ನು ನೀಡಿಯೇ ನೀಡುತ್ತದೆ. ಕ್ಷಾಮ ಮತ್ತು ಕೊರತೆಗಳು, ಮೈಗಳ್ಳತನ, ಮೌಢ್ಯ ಮತ್ತು ಭ್ರಷ್ಟಾಚಾರದ ಪರಿಣಾಮಗಳು. ಶೀಘ್ರ ತಕ್ಷಣ ಕಾರ್ಯರೂಪಕ್ಕೆ ತರಲೆಂಬ ಉದ್ದೇಶದಿಂದ ಕಂದಾಯ ಸಂಹಿತೆಯ 127 ಕಟ್ಟಳೆಗಳನ್ನು ಮಾಡಲಾಗಿದೆ. ಸಾಗುವಳಿ ಮಾಡದ ಭೂಮಿಯನ್ನು ಉಳುಮೆಗೆ ತೆಗೆದುಕೊಳ್ಳಬಯಸುವ ಬಡ ರೈತರಿಗೆ ಮುಂಗಡ ಹಣವನ್ನು ಕೊಡುವ ಬಗ್ಗೆ, ಬೀಳು ಭೂಮಿಯನ್ನು ವಶಪಡಿಸಿಕೊಳ್ಳುವ ಸಂಬಂಧ, ಉಳುಮೆದಾರ ಮತ್ತು ಅವನ ವಾರಸುದಾರರಿಗೆ ರಕ್ಷಣೆ ಕೊಡುವ ಕುರಿತು ಇರುವ ಕಾನೂನುಗಳತ್ತ ನಿಮ್ಮ ತುರ್ತು ಗಮನವನ್ನು ವಿಶೇಷವಾಗಿ ಸೆಳೆಯಲಾಗಿದೆ. ಸಾಂಪ್ರದಾಯಿಕ ಬೆಳೆಗಳನ್ನು ಬಿಟ್ಟು ಹೊಸ ಬೆಳೆಗಳನ್ನು ಬೆಳೆಯಲು ವಿಶೇಷ ಪ್ರೋತ್ಸಾಹ ಕೊಡಬೇಕು. ಕಬ್ಬು, ವೀಳ್ಯದೆಲೆ, ತೆಂಗು ಮುಂತಾದ ಬೆಳೆಗಳನ್ನು ಬೆಳೆಯುವವರಿಗೆ ಕೊಡಬೇಕಾದ ತೆರಿಗೆ ವಿನಾಯಿತಿಗಳನ್ನು ತಡಮಾಡದೇ ಜಾರಿಗೆ ತರಬೇಕು. ಹಳ್ಳಿಗೆ 200 ರಂತೆ ಮಾವು ಮುಂತಾದ ಒಳ್ಳೆಯ ಸಸಿಗಳನ್ನು ನೆಟ್ಟು ಬೆಳೆಸಲು ಪ್ರೋತ್ಸಾಹ ಕೊಡುವುದೂ ಅಷ್ಟೇ ಅವಶ್ಯಕ. ಗೃಹ ಬಳಕೆಗೆ ಮತ್ತು ರಫ್ತು ಮಾಡಲು ತೇಗ, ಶ್ರೀಗಂಧ ಮತ್ತಿತರ ಮರಗಳ ರಕ್ಷಣೆಯೂ ಅಗತ್ಯವಾದುದು."

ಈ ಸುತ್ತೋಲೆಯಲ್ಲಿ ನಾವು ಗಮನಿಸಬೇಕಾದ ಹಲವು ಅಂಶಗಳಿವೆ. ಮೊದಲನೆಯದಾಗಿ ಶ್ರಮ ಜೀವಿ ರೈತರ ಬಗ್ಗೆ ಟಿಪ್ಪುವಿನ ಕಾಳಜಿ. ಎರಡನೆಯದಾಗಿ ರೈತರಿಗೆ ಕೃಷಿ ಸಾಮಗ್ರಿ ಕೊಳ್ಳಲು ಸರಕಾರವೇ ಮುಂಗಡ ದುಡ್ಡು ಕೊಡುವುದು (ಬಡ್ಡಿಗೆ ನೀಡುವ ಸಾಲವಲ್ಲ) ಸುಮಾರು ಎರಡೂ ಕಾಲು ಶತಮಾನಗಳ ಹಿಂದೆಯೇ ಟಿಪ್ಪುವಿಗೆ ಅದೆಂತಹ ದೂರದೃಷ್ಟಿಯಿತ್ತು. ಇಂದು ಆಧುನಿಕ ಪ್ರಜಾತಾಂತ್ರಿಕ ಸರಕಾರವು ರೈತರಿಗೆ ಬಡ್ಡಿಯ ಮೇಲೆ ಸಾಲ ನೀಡುತ್ತದೆಯೇ ಹೊರತು ಕೃಷಿ ಪರಿಕರ ಖರೀದಿಸಲು ಮುಂಗಡ ಹಣ ನೀಡುವ ಪರಿಪಾಠವಿಲ್ಲ. ಟಿಪ್ಪುವಿನ ಕಾಲದಲ್ಲಿ ರೈತರು ಬೆಳೆಯನ್ನು ಬೆಳೆದು ಅದರಿಂದ ಬಂದ ಲಾಭದಿಂದ ಮುಂಗಡವಾಗಿ ಪಡೆದ ಸಾಲವನ್ನು ಸಂದಾಯ ಮಾಡಿದರೆ ಸಾಕಾಗುತ್ತಿತ್ತು. ಮೂರನೆಯದಾಗಿ ಪಾಳು ಬಿದ್ದ ಭೂಮಿಯನ್ನು ಜಮೀನುದಾರರಿಂದ ವಶಪಡಿಸಿ ಉಳುವ ಕೈಗಳಿಗೆ ನೀಡುವ ಭೂ ಸುಧಾರಣಾ ಕಾನೂನನ್ನು ಟಿಪ್ಪು ಆ ಕಾಲದಲ್ಲಿಯೇ ಜಾರಿಗೆ ತಂದಿದ್ದರು ಮತ್ತು ಉಳುಮೆದಾರರಿಗೆ, ಅವರ ವಾರಸುದಾರರಿಗೆ ಶ್ರೀಮಂತ ಜಮೀನುದಾರರಿಂದ ಆಗಬಹುದಾದ ಸಂಭಾವ್ಯ ಅಪಾಯಗಳನ್ನು ಟಿಪ್ಪು ಮುಂಚಿತವಾಗಿಯೇ ಗ್ರಹಿಸಿ ಕಾನೂನು ಜಾರಿ ಮಾಡಿದ್ದರು. ನಾಲ್ಕನೆಯದಾಗಿ ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ನೀಡಿದ್ದು ಈ ಸುತ್ತೋಲೆಯಲ್ಲಿ ಕಂಡುಬರುತ್ತದೆ. ಐದನೆಯದಾಗಿ ರೈತರಿಗೆ ತೆರಿಗೆ ವಿನಾಯಿತಿ ನೀಡಿದ್ದನ್ನು ಇಲ್ಲಿ ನಾವು ಗಮನಿಸಬಹುದು. ಇಂದು ನಮ್ಮ ಪ್ರಜಾತಾಂತ್ರಿಕ ಸರಕಾರಗಳು ಏನು ಮಾಡುತ್ತಿವೆ? ರೈತರ ಭೂಮಿಯನ್ನು ಬಲವಂತವಾಗಿ ಕಸಿದು ಕಾರ್ಪೊರೇಟ್ ಕುಳಗಳಿಗೆ ಧಾರೆಯೆರೆದು ಕೊಡುತ್ತಿವೆ. ರೈತರ ಸಾಲಕ್ಕೆ ಬಡ್ಡಿಯ ಮೇಲೆ ಬಡ್ಡಿ, ಚಕ್ರ ಬಡ್ಡಿ ಹಾಕಿ ಅವರನ್ನು ಕಂಗಾಲಾಗಿಸಿ ಆತ್ಮಹತ್ಯೆಗೆ ದೂಡುತ್ತಿವೆ. ಕಾರ್ಪೊರೇಟ್ ಕುಳಗಳಿಗೆ ತೆರಿಗೆ ವಿನಾಯಿತಿ ನೀಡುತ್ತಿವೆ. ಟಿಪ್ಪು ರೈತರಿಗೆ ತೆರಿಗೆ ವಿನಾಯಿತಿ ನೀಡುವಂತಹ ಮಹತ್ವದ ಕಾನೂನನ್ನು ಆ ಕಾಲದಲ್ಲೇ ಜಾರಿಗೆ ತಂದಿದ್ದರು.

ಇದೇ ಸುತ್ತೋಲೆಯಲ್ಲಿ ಮುಂದುವರಿದು ಟಿಪ್ಪು ಬರೆಯುತ್ತಾರೆ, "ದಂಡ ಹಾಕಿಸುವಂತಹ ಚಿಕ್ಕಪುಟ್ಟ ಅಪರಾಧಗಳನ್ನು ರೈತರು ಮಾಡಿದಾಗ ಅಂಥವರು ತಮ್ಮ ಹಳ್ಳಿಯ ಬಳಿ ಎರಡು ಮಾವಿನ ಹಾಗೂ ಎರಡು ಬಾದಾಮಿ ಗಿಡಗಳನ್ನು ನೆಟ್ಟು ಅವು ಮೂರು ಅಡಿ ಎತ್ತರ ಬೆಳೆಯುವವರೆಗೆ ನೀರು ಹಾಕಿ ಬೆಳೆಸಲು ಒಪ್ಪಿದರೆ ಅವರಿಗೆ ಆ ದಂಡದಿಂದ ವಿನಾಯಿತಿ ಕೊಡಬಹುದು." ಎಂತಹ ಅದ್ಭುತ ದೂರದೃಷ್ಟಿ ನೋಡಿ. ಶಿಕ್ಷೆಯೂ ಸರಳ, ಶಿಕ್ಷೆಯ ಮೂಲಕ ಪರಿಸರ ಸಂರಕ್ಷಣೆಗೆ, ಕೃಷಿಗೆ ಉತ್ತೇಜನ. ಇಂದು ನಮ್ಮ ಸರಕಾರಗಳು ಅಭಿವೃದ್ಧಿಯ ವೇಷದಲ್ಲಿ ಇದ್ದ ಮರಗಳನ್ನೂ ಕಡಿಸುತ್ತವೆ. ನಾಟಾ ಕಳ್ಳರು ಸರಕಾರದ ಕೃಪಾಕಟಾಕ್ಷದಲ್ಲೇ ಬೆಳೆದು ಕೊಬ್ಬಿದ್ದಾರೆ.

1794 ರಲ್ಲಿ ಕಾವೇರಿ ನದಿಗೆ ಅಣೆಕಟ್ಟು ಕಟ್ಟಲು (ಇಂದಿನ ಕೆ.ಆರ್.ಎಸ್. ಡ್ಯಾಂ) ಟಿಪ್ಪು ಸುಲ್ತಾನ್ ಅಸ್ತಿಭಾರ



ಹಾಕಿದಾಗ ಕೆತ್ತಿಸಿದ ಶಿಲಾ ಫಲಕದಲ್ಲಿ ಹೀಗೆ ಬರೆಯಲಾಗಿತ್ತು:

"ಲಕ್ಷಾಂತರ ಪಗೋಡಗಳನ್ನು ವೆಚ್ಚ ಮಾಡಿ, ದೇವರ ಹೆಸರಿನಲ್ಲಿ ಈ ಅಣೆಕಟ್ಟೆಯನ್ನು ಖುದಾದಾದ್ ಸರ್ಕಾರವು ಕಟ್ಟಿಸುತ್ತಿದೆ. ಇದುವರೆಗೆ ಸಾಗು ಮಾಡದಿದ್ದ ಭೂಮಿಗೆ ಈ ಅಣೆಕಟ್ಟೆಯ ನೀರನ್ನು ಬಳಸಿ ಬೆಳೆಗಳು, ತರಕಾರಿಗಳು ಹಾಗೂ ಹಣ್ಣುಗಳನ್ನು ಬೆಳೆಯುವವರಿಗೆ ಖುದಾದಾದ್ ಸರಕಾರವು ಎಲ್ಲಾ ರೀತಿಯ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕೊಡುತ್ತದೆ. ಈ ರೀತಿ ಹೊಸದಾಗಿ ಸಾಗು ಮಾಡಿದ ಜಮೀನು ಅದನ್ನು ಉಳುಮೆ ಮಾಡಿದವನು ಮತ್ತು ಅವನ ವಾರಸುದಾರರಿಗೆ ಸೇರುತ್ತದೆ. ಅದನ್ನು ಅವರಿಂದ ಯಾರೂ ಕಿತ್ತುಕೊಳ್ಳಲಾರರು."

ಇಂದು ನಮ್ಮ ದೇಶದಲ್ಲಿ ಅನೇಕ ಸರಕಾರಗಳು ರೈತರ ಹೆಸರಲ್ಲಿ ಅಣೆಕಟ್ಟು ಕಟ್ಟಿಸುತ್ತವೆ ಅಥವಾ ಹಿಂದಿನವರು ಕಟ್ಟಿರುತ್ತಾರೆ. ಆದರೆ ಕೃಷಿಯ ಅಭಿವೃದ್ಧಿಗಾಗಿ



ಕಟ್ಟಿಸಿದ ಅಣೆಕಟ್ಟುಗಳ ನೀರು ತೆರಿಗೆವಂಚಕ, ಕಳ್ಳ ಕಾರ್ಪೊರೇಟ್, ಉದ್ಯಮಿಗಳ ಕೈಗಾರಿಕೆಗಳಿಗೆ ಪುಗಸಟ್ಟೆ ನೀಡುತ್ತವೆ. ರೈತರು ಕೃಷಿಗೆ ನೀರಿಲ್ಲದೇ ಆತ್ಮಹತ್ಯೆಯ ಹಾದಿ ತುಳಿಯುತ್ತಿದ್ದಾರೆ. ಇಂದಿನ ಸರಕಾರಗಳು ರೈತರ ಕೃಷಿ ಭೂಮಿಯ ಬಗ್ಗೆ ಕಿಂಚಿತ್ತೂ ಗಮನ ಕೊಡದೇ ಅಣೆಕಟ್ಟುಗಳ ಎತ್ತರವನ್ನು ಅವೈಜ್ಞಾನಿಕವಾಗಿ ಏರಿಸುತ್ತಿದ್ದಾರೆ. ಆದರೆ ಎರಡೂ ಕಾಲು ಶತಮಾನಗಳ ಹಿಂದೆಯೇ ಟಿಪ್ಪು ಯೋಜನೆ ಹಾಕಿದ್ದ ಇಂದಿನ ಕೆ.ಆರ್.ಎಸ್. ಡ್ಯಾಂ ಅತ್ಯಂತ ರೈತಸ್ನೇಹಿಯಾಗಿತ್ತು.

ಕಾರ್ಮಿಕ ಬಂಧು ಟಿಪ್ಪು ಸುಲ್ತಾನ್

ಟಿಪ್ಪುವಿಗೆ ದುಡಿಯುವ ವರ್ಗದ ಜನರ ಮೇಲೆ, ಅವರ ಹಕ್ಕುಗಳ ರಕ್ಷಣೆ ಇತ್ಯಾದಿಗಳ ಕುರಿತಂತೆ ಸ್ಪಷ್ಟವಾದಂತಹ ಒಂದು ಪರಿಕಲ್ಪನೆಯಿತ್ತು. ಆ ನಿಟ್ಟಿನಲ್ಲಿ 1789 ರಲ್ಲಿ ಟಿಪ್ಪು ತನ್ನ ಮಂತ್ರಿಮಂಡಲವನ್ನು ಉದ್ದೇಶಿಸಿ ಮಾಡಿದ ಭಾಷಣ ಟಿಪ್ಪುವಿಗೆ ಶ್ರಮಜೀವಿ ವರ್ಗದ ಮೇಲಿರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಅದರ ಒಂದು ಭಾಗ ಇಲ್ಲಿದೆ:

'ಫರೋಗಳು (ಪ್ರಾಚೀನ ಈಜಿಪ್ಟ್ ದೊರೆಗಳು) ತಮ್ಮ ಗುಲಾಮರ ಪರಿಶ್ರಮದಿಂದ ಪಿರಮಿಡ್‌ಗಳನ್ನು ಕಟ್ಟಿದರು. ಚೀನಾ ಮಹಾಗೋಡೆಯ ದಾರಿಗುಂಟ ಬಲವಂತಕ್ಕೊಳಗಾಗಿ ಅದನ್ನು ಕಟ್ಟಿದ. ಹಾಗೆ ಕಟ್ಟುವಾಗ ತಮ್ಮ ಮೇಲೆ ಮೇಲ್ವಿಚಾರಕರ ಚಾಟಿ ಮತ್ತು ಕೊರಡೆಗಳಿಂದ ಪೆಟ್ಟು ತಿಂದ ಗುಲಾಮರ ರಕ್ತ ಹಾಗೂ ಮೂಳೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ರೋಮ್ ಸಾಮ್ರಾಜ್ಯ, ಬ್ಯಾಬಿಲೋನ್, ಗ್ರೀಸ್ ಮತ್ತು ಕಾರ್ಥೇಜ್‌ಗಳ ಭವ್ಯ ಕಟ್ಟಡಗಳನ್ನು ನಿರ್ಮಿಸಲು ಅಸಂಖ್ಯಾತ ಜನಗಳು ಗುಲಾಮರು ಸರಪಳಿಗಳಿಂದ ಬಂಧಿಸಲ್ಪಟ್ಟರು. ಸಾವಿರ-ಸಾವಿರ ಜನರು ರಕ್ತ ಹರಿಸಿ ಸಾವನ್ನಪ್ಪಿದ... ದೃಷ್ಟಿಕೋನದಲ್ಲಿ ಪ್ರತಿಯೊಂದು ಕಲೆ ಮತ್ತು ... ಕಲೆಯು ಅದು ನಮ್ಮ ದೇಶದ ಪೂರ್ವ ... ಪಶ್ಚಿಮದಲ್ಲಿರಲಿ ಅದು ಅದನ್ನು ನಿರ್ಮಿಸಲು ಆದ... ಸ್ಮಾರಕವಾಗಿರದೆ, ನಿರ್ಮಾಣದ ಸಮಯದಲ್ಲಿ ... ತೆರಬೇಕಾಗಿ ಬಂದ ನತದೃಷ್ಟರ ವೇದನೆ, ಪರಿಶ್ರಮ ಮತ್ತು ಕಣ್ಣೀರುಗಳ ಸ್ಮಾರಕವಾಗಿದೆ.

ಇಟ್ಟಿಗೆ ಅಥವಾ ಕಲ್ಲಿನಲ್ಲಿ ನಿರ್ಮಿಸಿದ ... ಕಟ್ಟಡವು ಯಾವುದರ ಸ್ಮಾರಕ? ಅದರ ಪಕ್ಕದಲ್ಲಿ ... ದಾರಿಹೋಕರಿಗೆ ಅದು ನೀಡುವ ಸಂದೇಶವೇನು ... ಕೈಲಾಗದ ದರ್ಪಿಷ್ಠ ರಾಜನೊಬ್ಬನ ಪೊಳ್ಳು ... ಹಂಬಲಕ್ಕಾಗಿ, ಅವನ ದಬ್ಬಾಳಿಕೆಗೊಳಗಾಗಿ ... ಮನೆಮಠಗಳಿಂದ ಎಳೆ ತಂದು ಗುಲಾಮರನ್ನಾಗಿ ... ಸರಪಳಿಗಳಿಂದ ಬಂಧಿತರಾದ ಜನರ ನೋವು ನರ... ಹುಟ್ಟಿಕೊಂಡ ಸಾಮ್ರಾಜ್ಯವೊಂದರ ಅವಶೇಷ ... ಎಂಬುವುದು ಅದರ ಸಂದೇಶವೆಂದು ನನ್ನ ... ನಮ್ಮ ರಸ್ತೆಗಳು ಮತ್ತು ಅಣೆಕಟ್ಟುಗಳ ಅಡಿಪಾಯ ... ಮಾನವರ ರಕ್ತ ಮತ್ತು ಕಣ್ಣೀರು ಬೆರೆಯು... ಯಾವ ಕೀರ್ತಿಯಾಗಲಿ ಹೆಚ್ಚುಗಾರಿಕೆಯಾಗಲಿ ಇರು...

ರಾಜಸತ್ತೆಯ ಕಾಲದಲ್ಲೂ ಜೀತಪದ್ಧತಿಯ ... ಧ್ವನಿ ಎತ್ತಿದ ಟಿಪ್ಪುವಿನ ಮಾನವೀಯ ಮುಖವ... ಟಿಪ್ಪುವಿನ ಈ ಭಾಷಣದಿಂದ ಗಮನಿಸಬಹು... ದೇಶದಲ್ಲಿ ಇಮಾರತುಗಳನ್ನು ಕಟ್ಟಿದ ರಾಜರ ... ಹಾಡಿ ಹೊಗಳಲಾಗುತ್ತದೆ. ಆದರೆ ... ಮುಖ್ಯವಾದುದು ಶ್ರಮಜೀವಿ ವರ್ಗದ ಬದುಕ... ಯೋಚಿಸಿದ್ದ ಟಿಪ್ಪುವಿಗೆ ಖಳನಾಯಕನ ಪಟ್ಟ ಕಟ್ಟ... ಹೌದು ಟಿಪ್ಪು ಧರ್ಮನಿಷ್ಠ ಮುಸ್ಲಿಮನೇ ಇದ್ದ... ಆದರೆ ಟಿಪ್ಪು ಅನುಸರಿಸುತ್ತಿದ್ದ ಇಸ್ಲಾಂ ಉಳ್ಳವರ ... ಶಾಸ್ತ್ರೀಯ ಇಸ್ಲಾಂ ಆಗಿರಲಿಲ್ಲ. ಟಿಪ್ಪು ತನ್ನ ಈ ಭಾ... ಅತ್ಯಂತ ಸ್ಪಷ್ಟವಾಗಿ "ದುಡಿದವನ ಬೆವರಿನ ಹ... ಮುನ್ನ ಆತನ ಸಂಬಳ ಕೊಡಿ" ಎಂಬ ಇಸ್ಲಾಮಿನ ... ಪರ ನೀತಿಯನ್ನು ಎತ್ತಿ ಹಿಡಿಯುವುದು ಗೋಚ...

"ಮಲಬಾರಿನ ಗವರ್ನರ್‌ರಿಂದ ಪತ್ರ ... ಬಂದಿರುವ ಹಿನ್ನೆಲೆಯಲ್ಲಿ ನಾನು ನಿಮಗೆ ಈ ... ಹೇಳುತ್ತಿದ್ದೇನೆ. ತಮ್ಮ ಪ್ರಾಂತ್ಯದಲ್ಲಿ ಅತ್ಯ... ಕುಶಲಕರ್ಮಿಗಳು ಇರುವರೆಂದೂ ಸರ್ಕಾರಿ ಕ... ಕಟ್ಟಲು ಅವರನ್ನು ತಾನು ಪುಕ್ಕಟೆ ಬಳಸಿಕೆ... ವುದಾಗಿಯೂ ಅವರು ತಿಳಿಸಿದ್ದಾರೆ. ದರಿಯಾ... ಅರಮನೆಯನ್ನು ವಿಸ್ತರಿಸುವ ನನ್ನ ಯೋಜನೆ... ತಿಳಿದ ಅವರು ಆ ಕುಶಲಕರ್ಮಿಗಳನ್ನು ಈ... ಕಳಿಸಿಕೊಡುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ನನ್ನ ತಂ... ಪ್ರೀತಿಯಿಂದ ಕಟ್ಟಿಸಿದ ಈ ಅರಮನೆಯು ಒ... ಒತ್ತಾಯದ ಶ್ರಮದಿಂದ ಕಲುಷಿತವಾಗುವುದು ... ನಾನು ಈ ಗವರ್ನರ್‌ರಿಗೆ ಹೇಳಬಯಸುತ್ತೇನೆ... ಈ ಕೆಲಸಗಾರರು ಇದುವರೆಗೆ ಸಾರ್ವಜನಿಕ ಕ... ಕಟ್ಟಿದ ಬಾಬ್ತು ಅವರಿಗೆ ಸಲ್ಲಬೇಕಾದ ಸಂಭಾವ... ಕೂಡಲೇ ಸಂದಾಯ ಮಾಡಬೇಕೆಂದೂ, ಇನ್ನು ... ನನ್ನ ರಾಜ್ಯದಲ್ಲಿ ಯಾರೂ ಒತ್ತಾಯದ ... ಪಡೆಯುವುದಾಗಲೀ, ಅದಕ್ಕೆ ಅನುಮತಿ ... ನ್ನಾಗಲೀ ಮಾಡಕೂಡದೆಂದೂ ಅಪ್ಪಣೆ ಮಾ... ನನಗೆ ಆ ಪತ್ರ ಬಂದನಂತರ ಅಮಲ್ದಾರರು ಸ್ವ... ಅಥವಾ ಬೇರೆ ಬೇರೆ ಇಲಾಖೆಗಳ ಬೇಡಿಕೆಗಳ... ಇಂತಹ ಉಚಿತ ಸೇವೆಗಳನ್ನು ಪಡೆಯುತ್ತಿ... ಕೇಳಿದ್ದೇನೆ. ಆದ್ದರಿಂದ ನಾನು ನನ್ನ ಈ ... ಕಟ್ಟುನಿಟ್ಟಾಗಿ ಪಾಲಿಸಲು ಕೂಡಲೇ ತಿಳಿವಳಿಕೆ ... ಅವರಿಗೆ ಈ ಮೂಲಕ ಆದೇಶಿಸುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ಇಂತಹ ಪದ್ಧತಿಯು ಗುಲಾಮ... ಹುಟ್ಟುಹಾಕುತ್ತದೆ."

ದರಿಯಾ ದೌಲತ್ ಅರಮನೆಗೆ ಕುಶಲ... ಶ್ರಮಜೀವಿಗಳ ದುಡಿಮೆಯನ್ನು ಪುಗಸಟ್ಟೆ ಪಡೆಯ... ಎಂಬ ವಿಚಾರ ತಿಳಿದೊಡನೆ ಅದನ್ನು ವಿರೋ... ಬಾಕಿ ಸಂದಾಯ ಮಾಡುವಂತೆ ಆದೇಶ... ಶ್ರಮಜೀವಿ ವರ್ಗದ ಪರ ಕಾಳಜಿ ಇರುವಂತಹ ... ಅರಸನನ್ನು ಹುಡುಕಿ ತರುವುದು ಕಷ್ಟಸಾಧ್ಯ ... ಎಂದಮೇಲೆ ರಾಜನ ಮಾತೇ ಅಂತಿಮ. ... ಕಾಲದಲ್ಲೂ ದುಡಿಮೆ ದುಡಿದವನ ಹಕ್ಕೇ ... ಅದು ಆಳುವವನ ಮರ್ಜಿಗೆ ತಕ್ಕಂತಿರಬೇಕ... ಹೊಸ ಕಲ್ಪನೆಯನ್ನು ಸೃಷ್ಟಿಸಿದ ರಾಜ ಟಿಪ್ಪು ...

ಟಿಪ್ಪುವನ್ನು ಕೇವಲ ಮುಸ್ಲಿಂ ಎಂಬ ಕಾ... ಕೊಂಡು ದ್ವೇಷಿಸುವವರು ಬಲಪಂಥೀಯರ ... ಜೊತೆಜೊತೆಗೇ ಪಂಥಗಳ ಸಂಕೋಲೆಯಲ್ಲಿ ಬಿ... ಇತಿಹಾಸಕಾರರ ದಾಖಲೆಗಳನ್ನೂ ಕಣ್ತೆರೆದು ...

■ ಇಸ್ಮತ್ ...

(ಆಧಾರ: *The Sword of ... Sulthan*, *Bhagvan S. G...*)

ಟಿಪ್ಪು ಚರ್ಚೆ ಕಥನವೋ, ಕದನವೋ...





ಕಳೆದ ವರ್ಷದಿಂದ ಸರ್ಕಾರ ಟಿಪ್ಪು ಜಯಂತಿಯನ್ನು ...ಂದು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸುವ ...ರ್ಧಾರವನ್ನು ಕೈಗೊಂಡ ಮೇಲೆ ಕರ್ನಾಟಕದ ಮಟ್ಟಿಗಂತೂ ...ತ್ತ ಮಹತ್ವದ ಚರ್ಚೆಯ ವಿಷಯವಾಗಿ ಮಾರ್ಪಟ್ಟಿದ್ದಾನೆ. ...ಪ್ಪು ಪರ ಮತ್ತು ವಿರೋಧಗಳ ಚರ್ಚೆ ಬೌದ್ಧಿಕ ...ಲಯವನ್ನು ದಾಟಿ ರಾಜಕೀಯ ಹೋರಾಟವಾಗಿ ...ಪುಗೊಳ್ಳುವಷ್ಟು ತಾರಕಕ್ಕೆ ಏರಿದೆ.

ಕಳೆದ ಕೆಲವು ದಿನಗಳಿಂದ ಟಿಪ್ಪು ಜಯಂತಿಯ ಪರ/ ...ರೋಧ ವಾದಿಸುತ್ತಿರುವ ಎರಡೂ ಗುಂಪುಗಳು ...ಸುತ್ತಿರುವ ಒಟ್ಟು ಚರ್ಚೆಯನ್ನು ಗಮನಿಸಿದರೆ, ಈ ...ರ್ಚೆ ಟಿಪ್ಪುವನ್ನು ಐತಿಹಾಸಿಕವಾಗಿ ಅರ್ಥಮಾಡಿಕೊಳ್ಳುವ ...ಹತ್ವದ ವೈಜ್ಞಾನಿಕ ಕ್ರಮವನ್ನೆ ಬದಿಗೆ ಸರಿಸಿ ಅವನನ್ನು ...ರ್ತಮಾನದ ಪಕ್ಷ ರಾಜಕೀಯದ ತಾತ್ವಿಕತೆಗೆ ಒಗ್ಗಿಸಿಕೊಂಡು ...ರೂಪಿಸುವ ಶುಷ್ಕ ಅಧಿಕಾರ ರಾಜಕೀಯದ ಕಸರತ್ತಿನಂತೆ ...ಣುತ್ತಿದೆ.

ಆ ಅರ್ಥದಲ್ಲಿ ಟಿಪ್ಪು ಜಯಂತಿಯ ಹಿನ್ನೆಲೆಯಲ್ಲಿ ...ಯುತ್ತಿರುವ ಸಾರ್ವಜನಿಕ ಚರ್ಚೆಯ ಮಾದರಿಯು ...ಜಕೀಯ ಪಕ್ಷಗಳ ತಾತ್ವಿಕತೆಗಳನ್ನು ಮೀರಿ ಒಂದು ...ಜ್ಞಾನಿಕ ವಿಧಾನವಾಗಿ ನಮ್ಮ ಚರಿತ್ರೆಯನ್ನು ನಿರೂಪಿಸಲು ...ಯುತ್ತಿರುವ ಬೌದ್ಧಿಕ ಪ್ರಯತ್ನದಂತೆ ಕಾಣದೆ ಈ ...ಲದ ಸಂಕುಚಿತ ರಾಜಕೀಯ ಅಗತ್ಯವಾಗಿದೆ ಎನ್ನಿಸುತ್ತಿದೆ.

ಈ ಕಾರಣಕ್ಕೆ ಆ ಒಟ್ಟೂ ಚರ್ಚೆಯಲ್ಲಿ ನಮ್ಮ ಕಾಲದ ...ಹುತ್ವದ ತಾತ್ವಿಕತೆಯನ್ನು ಆಧರಿಸಿದ ಜನಕೇಂದ್ರಿತ ...ರಿತ್ರೆಯೊಂದನ್ನು ಕಟ್ಟಿಕೊಳ್ಳಲು ಅಗತ್ಯವಾದ ಆಳವಾದ ...ಮಾಜಿಕ ಮತ್ತು ತಾತ್ವಿಕತೆಯ ಪ್ರಶ್ನೆಗಳೇ ಗೈರಾಗಿವೆ ...ನಿಸುತ್ತಿದೆ.

ಹೀಗಿದ್ದಾಗಲೂ ನಮ್ಮ ಕಾಲದಲ್ಲಿ ಗಂಭೀರ ಐತಿಹಾಸಿಕ ...ವ್ಯಯನಕ್ಕೊಳಪಡಬೇಕಾದ ಟಿಪ್ಪುವನ್ನು ಏಕಕಾಲಕ್ಕೆ ...ಕಾರಾತ್ಮಕ ಮತ್ತು ನಕಾರಾತ್ಮಕ ಈ ಎರಡೂ ನೆಲೆಗಳಲ್ಲಿ ...ರೂಪಿಸಲು ಏಕೆ ಸಾಧ್ಯವಾಗುತ್ತಿದೆ? ಎಂಬ ಮಹತ್ವದ ...ಶ್ನೆ ಹಾಗೇ ಉಳಿಯುತ್ತದೆ. ಗತ/ಪುರಾಣಗಳ ಕಥೆಗಳನ್ನೇ ...ತಿಹಾಸದ ಆಕರವಾಗಿ ಗುರುತಿಸಿ ಬಳಸುವ ಭಾರತದಲ್ಲಿನ ...ತಿಹಾಸ ಅಧ್ಯಯನದ ವೈಧಾನಿಕತೆಯಲ್ಲಿನ ಸಮಸ್ಯೆಗಳನ್ನು ...ರ್ಥಮಾಡಿಕೊಂಡಾಗ ಮಾತ್ರ ನಮಗೆ ನಮ್ಮ ಕಾಲದ ...ಟಿಪ್ಪುವಿನ ಕುರಿತಾದ ಈ ಬಗೆಯ ಮೇಲ್ಮೈನ ಪರ/ ...ವಿರೋಧದ ಚರ್ಚೆಗೆ ಇರುವ ತಾತ್ವಿಕ ಚೌಕಟ್ಟಿನ ಮಿತಿ ...ರ್ಥವಾಗುತ್ತದೆ.

...ನನ್ನ ಓದಿನ ಹಿನ್ನೆಲೆಯಲ್ಲಿ ನೋಡುವುದಾದರೆ ...ರತೀಯರಿಗೆ ಚರಿತ್ರೆಯನ್ನು ರೂಪಿಸಿಕೊಳ್ಳುವ ಕ್ರಮ ...ಡು ರೀತಿಯಲ್ಲಿ ದಕ್ಕಿದೆ: ಸಿದ್ಧ ಧಾರ್ಮಿಕ ಚೌಕಟ್ಟಿನ ...ನೆಲೆಯಲ್ಲಿ ಪುರಾಣವನ್ನಾಧರಿಸಿದ ಗತವನ್ನೆ ಚರಿತ್ರೆಯಂತೆ ...ಕೊಳ್ಳುವ ಮತ್ತು ಅದು ಮಾತ್ರವೆ ನೈಜ ಚರಿತ್ರೆಯೆಂದು ...ಪಿಸಬಯಸುವ "ಕೋಮುವಾದ" ಎಂದು ಗುರುತಿಸುವ ...ಒಂದಾದರೆ, ಮತ್ತೊಂದು ಬದಲಾದ ಕಾಲದಲ್ಲಿ ...ರೋಪಿಯನ್ ವಸಾಹತು ಕಲಿಕಾ ಕ್ರಮ ರೂಪಿಸಿಕೊಟ್ಟ ...ದಾರವಾದಿ ನಿರೂಪಣೆಗಳ ಚೌಕಟ್ಟಿಗೆ ಭಾರತೀಯ ...ಮಾಜಿಕ/ಐತಿಹಾಸಿಕ ವಾಸ್ತವಗಳನ್ನು ಜೋಡಿಸಿ ...ರತೀಯರೂ ಉದಾರವಾದಿ ನೆಲೆಯ ಅಂತಃಸತ್ವ ...ಂದಿದ್ದವರು ಎಂಬುದನ್ನು ನಿರೂಪಿಸುವ "ಪ್ರಗತಿಪರ" ...ದು ಗುರುತಿಸುವ ಕ್ರಮ ಇನ್ನೊಂದು.

ಈ ಎರಡೂ ಕ್ರಮಗಳು ಒಂದೇ ನಾಣ್ಯದ ಎರಡು ...ಖಗಳಿದ್ದಂತೆ. ಒಂದು ಯುರೋಪಿಯನ್ ಧಾರ್ಮಿಕ ...ಯಾಲಜಿ ಕಟ್ಟಿಕೊಟ್ಟ ಚರಿತ್ರೆಯನ್ನು ನೋಡುವ ...ವಾದರೆ ಮತ್ತೊಂದು ಯುರೋಪಿಯನ್ ಉದಾರವಾದಿ ...ಜಕೀಯ ಐಡಿಯಾಲಜಿ ನಮ್ಮ ಚರಿತ್ರೆಯನ್ನು ಗುರುತಿಸಲು ಕಲಿಸಿಕೊಟ್ಟ ಕ್ರಮವಾಗಿದೆ. ಆದ್ದರಿಂದ ಬಹುಪಾಲು ಬುದ್ಧಿಜೀವಿಗಳು ಬಳಸುತ್ತಿರುವ ಈ ಎರಡೂ ಮಾದರಿಗಳು ನಮ್ಮ ಸಾಮಾಜಿಕ/ಐತಿಹಾಸಿಕ ವಾಸ್ತವಗಳ ಮಾಹಿತಿಯನ್ನು ಈಗಾಗಲೇ ಬೌದ್ಧಿಕ ವಲಯದಲ್ಲಿ ಪ್ರಖ್ಯಾತವಾಗಿರುವ "ಕೋಮುವಾದಿ" ಮತ್ತು "ಉದಾರವಾದಿ" ಎಂಬ ಚಿಂತನಾ ಚೌಕಟ್ಟುಗಳಿಗೆ ಹೊಂದಿಸಿ ವಿವರಿಸುವ ಕೆಲಸವನ್ನಷ್ಟೆ ಮಾಡುತ್ತಿವೆಯೇ ಹೊರತು ಭಾರತೀಯ ಸನ್ನಿವೇಶದಲ್ಲಿ ಈ ಎರಡು ವಿವರಣಾ ಚೌಕಟ್ಟುಗಳ ಮಿತಿಗಳೇನು? ಇವುಗಳು ನಿಜವಾಗಿಯೂ ಗತವನ್ನು ಆಧರಿಸಿದ ವರ್ತಮಾನದ ಭಾರತೀಯ ಜನಜೀವನವನ್ನು ಅದು ಇರುವಂತೆಯೇ ನಿರೂಪಿಸಿವೆಯೇ? ಎಂಬುದರ ಕುರಿತಂತೆ ಏನನ್ನೂ ಚರ್ಚಿಸುತ್ತಿಲ್ಲ.

ನಮ್ಮ ನಡುವೆ ಜನಪ್ರಿಯವಾಗಿರುವ ಚರಿತ್ರೆಯನ್ನು ನೋಡುವ ಈ ನಿರ್ದಿಷ್ಟ ಕ್ರಮ "ಇತಿಹಾಸ" ಎಂಬ ಅಧ್ಯಯನ ಶಿಸ್ತನ್ನು ಗತದ ಸಾಮಾಜಿಕತೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ವರ್ತಮಾನವನ್ನು ಅದರ ಜೊತೆಗಿಟ್ಟು ಅರ್ಥಮಾಡಿಕೊಳ್ಳಬೇಕಾದ ಅಗತ್ಯ ವೈಜ್ಞಾನಿಕ ಅಧ್ಯಯನ ಕ್ರಮ ಎಂಬ ಅಂಶವನ್ನು ನಗಣ್ಯಗೊಳಿಸಿದೆ. ಮಾತ್ರವಲ್ಲ ಈ ಒಟ್ಟೂ ಚರ್ಚೆಯನ್ನು ಸೀಮಿತ ಚೌಕಟ್ಟಿನಲ್ಲಿ ವಿವರಿಸುವ ಅಧಿಕಾರ ರಾಜಕೀಯ ನಿರೂಪಣೆಯಾಗಿ ಬದಲಾಯಿಸಿದೆ.

ಈ ಅಧ್ಯಯನ ಕ್ರಮವನ್ನು ಬಳಸಿ ನೀವು ಯಾವುದೇ ಐತಿಹಾಸಿಕ ವ್ಯಕ್ತಿ ಮತ್ತು ಸಂಗತಿಗಳಿಗೆ ಪರ/ವಿರೋಧ ನಿರೂಪಣೆಗಳನ್ನು ಸರಳವಾಗಿ ಆರೋಪಿಸಬಹುದು. ಏಕೆಂದರೆ ಈ ಬಗೆಯ ಅಧ್ಯಯನ ಮಾದರಿಗಳು ಸಿದ್ಧಮಾದರಿಗಳಾಗಿ ಈಗಾಗಲೇ ಜನಪ್ರಿಯವಾಗಿರುವುದರಿಂದ ಇವುಗಳ ಮೂಲಕ ಸಂಶೋಧನೆಗಳಿಂದ ದಕ್ಕುವ ವ್ಯಕ್ತಿ ಅಥವಾ ಘಟನೆಯ ಕುರಿತಾದ ಮಾಹಿತಿಗಳನ್ನು ನೀವು ಒಪ್ಪುವ ಚೌಕಟ್ಟಿಗೆ ಪೋಣಿಸಿದರೆ ಸಾಕು ಬೇಕಾದ ರೂಪ ದಕ್ಕುತ್ತದೆ. ಇಂದು ನಮ್ಮ ನಡುವೆ ನಡೆಯುತ್ತಿರುವ ಟಿಪ್ಪುವಿನ ಚರ್ಚೆಯ ವಿಚಾರದಲ್ಲಿಯೂ ಇದೇ ಆಗುತ್ತಿರುವುದು. (ಇಲ್ಲಿ ಟಿಪ್ಪು ಉದಾಹರಣೆ ಮಾತ್ರ. ಶಿವಾಜಿ, ವಿವೇಕಾನಂದ, ಗಾಂಧಿ, ಅಂಬೇಡ್ಕರ್ ಸೇರಿದಂತೆ ಯಾವುದೇ ಚಾರಿತ್ರಿಕ ವ್ಯಕ್ತಿತ್ವಗಳನ್ನು ಹೀಗೆ ಬೈನರಿಯಾಗಿ ಇಟ್ಟು ಓದುವ ಕ್ರಮ ಚಾಲ್ತಿಯಲ್ಲಿದೆ. ಈ ರೀತಿಯ ಚರ್ಚೆಗೆ ಕೊನೆಯೂ ಇಲ್ಲ ಯಾವ ಪ್ರಯೋಜನವೂ ಇಲ್ಲ) ಆ ಕಾರಣಕ್ಕೆ ಟಿಪ್ಪುವಿನ ಚರಿತ್ರೆಯ ಕುರಿತು ನಡೆಯುತ್ತಿರುವ ಒಟ್ಟು ಚರ್ಚೆ ಒಂದು ದಿಕ್ಕಿನಲ್ಲಿ ಅಧಿಕಾರ ರಾಜಕಾರಣಕ್ಕೆ ಅನುಕೂಲಕರವಾಗುವಂತೆ ಕಟ್ಟಲು ಹೊರಟ ಹಾಸ್ಯಾಸ್ಪದ ಸಾಂಸ್ಕೃತಿಕ ನಿರೂಪಣೆಯಂತೆ ಕಂಡರೆ, ಮತ್ತೊಂದು ಕಡೆ ಇದರ ವಿರುದ್ಧವಾಗಿ ಟಿಪ್ಪುವನ್ನು ಧಾರ್ಮಿಕಗೊಳಿಸಿ ವಿವರಿಸುತ್ತಿರುವ ಚಾರಿತ್ರಿಕ ನಿರೂಪಣೆಯು ವರ್ತಮಾನದಲ್ಲಿ ಬಹುತ್ವದ ಮೌಲ್ಯ ಪರಂಪರೆಯನ್ನಾಧರಿಸಿದ ನಮ್ಮ ಪ್ರಜಾಪ್ರಭುತ್ವ ಜೀವನಕ್ರಮಕ್ಕೆ ಧಕ್ಕೆಯನ್ನುಂಟುಮಾಡುವ ಅಪಾಯಕಾರಿ ಲಕ್ಷಣಗಳು ಕಾಣುತ್ತಿವೆ.

ಈ ಎರಡೂ ಬದಿಯ ಜನರು ಬಳಸುತ್ತಿರುವ ಬೌದ್ಧಿಕ ಚೌಕಟ್ಟಿನ ಮಿತಿಗಳ ಕುರಿತು ಗಮನ ಸೆಳೆಯಬೇಕಾದ ಬೌದ್ಧಿಕ ವರ್ಗ ಯಾವುದೋ ಒಂದು ವಾದಕ್ಕೆ ಪೂರಕವಾಗಿ ನಿಲ್ಲುತ್ತಿರುವುದು ಆತಂಕದ ವಿಷಯ. ಆ ಕಾರಣಕ್ಕೆ ಟಿಪ್ಪುವಿನ ಕುರಿತಾಗಿ ಐತಿಹಾಸಿಕ ದಾಖಲೆಗಳಿಂದ ಹೆಕ್ಕುತ್ತಿರುವ ಮಾಹಿತಿಗಳನ್ನು ಆಧರಿಸಿ ನಡೆಯುತ್ತಿರುವ ಚರ್ಚೆಗಳೆಲ್ಲವೂ ಒಂದು ಕೋಮುವಾದಿ ನೆಲೆಯಲ್ಲಿ ಸಾಮಾನ್ಯರನ್ನು ಪ್ರಚೋದಿಸಲು ಬಳಕೆಯಾಗುತ್ತಿವೆ. ಮತ್ತೊಂದು ಆ ಕಾಲದ ರಾಜಸತ್ತೆಯ ವ್ಯವಸ್ಥೆಯೊಳಗಿನ ಇತಿಮಿತಿಗಳನ್ನು ನಗಣ್ಯಗೊಳಿಸಿ ಉದಾರವಾದಿ ನೆಲೆಯಿಂದ ವೈಭವೀಕರಣಕ್ಕೆ ಒಳಗಾಗಿ ರೂಪುಗೊಳ್ಳುತ್ತಿವೆ. ಆದರೆ ವಾಸ್ತವದಲ್ಲಿ ಟಿಪ್ಪುವಿನ ಕುರಿತ ಈ ಎರಡೂ ಲೋಕದೃಷ್ಟಿಗಳು ಮಿತಿಯನ್ನು ಹೊಂದಿವೆ ಎಂದೆನಿಸುತ್ತಿದೆ.

ಆ ಕಾರಣಕ್ಕೆ ಇವೆರಡನ್ನೂ ಹೊರತುಪಡಿಸಿ ಒಬ್ಬ ವ್ಯಕ್ತಿಯಾಗಿ, ಸಮುದಾಯದ ನಾಯಕನಾಗಿ ತನ್ನೆಲ್ಲ ಮಿತಿಗಳ ಒಳಗೆ ಟಿಪ್ಪುವಿನ ಕೊಡುಗೆ ಏನು? ಅದನ್ನು ವರ್ತಮಾನಕ್ಕೆ ಪೂರಕವಾಗಿ ಹೇಗೆ ಕಟ್ಟಿಕೊಳ್ಳಬೇಕು ಎಂಬುದನ್ನು ನಿರೂಪಿಸಿಕೊಳ್ಳಲು ಬೇಕಾದ ವೈಜ್ಞಾನಿಕ ಅಧ್ಯಯನ ವಿಧಾನದ ಕುರಿತು ನಾವು ಹೆಚ್ಚು ಆಸಕ್ತಿಯಿಂದ, ಸ್ಪಷ್ಟವಾಗಿ ಚರ್ಚಿಸಬೇಕಿದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಪುರಾಣಗಳನ್ನು ಪ್ರತೀಕಗಳಂತೆ ನೋಡುವ ಪಾಶ್ಚಿಮಾತ್ಯ ಲೋಕದೃಷ್ಟಿ ಮತ್ತು ಇಲ್ಲಿನ ಪುರಾಣಗಳ ಅಮೂರ್ತತೆಯನ್ನೇ ವೈಭವೀಕರಿಸಿ ಅದನ್ನೆ ಚರಿತ್ರೆಯಾಗಿಸಲು ಬಯಸುತ್ತಿರುವ ರಾಷ್ಟ್ರೀಯವಾದಿ ದೃಷ್ಟಿಕೋನಗಳ ಪ್ರತಿಪಾದನೆಯಲ್ಲಿ ಕಳೆದುಹೋಗಿರುವ ಬಹುಪಾಲು ಶೋಧನೆಗಳು ಈ ನೆಲದ ಬಹುತ್ವವನ್ನು ಗೌರವಿಸುವ, ವಿವಿಧತೆಯಲ್ಲಿ ನಂಬಿಕೆ ಹೊಂದಿರುವ, ಸಮುದಾಯ ಕೇಂದ್ರಿತ ಚರಿತ್ರೆಯ ಕಟ್ಟುವಿಕೆಗೆ ಅಗತ್ಯವಾದ, ಸಮಾಜದಲ್ಲಿನ ಬೇರೆ ಬೇರೆ ಜನ ವರ್ಗಗಳ ಕೂಡು ಬದುಕಿನ ಚಲನಶೀಲ ಭೌತಿಕ ಅಸ್ತಿತ್ವವನ್ನೇ ನಿರ್ಲಕ್ಷಿಸಿವೆ ಎಂಬ ಅಂಶವನ್ನು ಅರಿಯುವುದು ನಮ್ಮ ಕಾಲದ ಸಂಶೋಧನೆಯ ಮುಖ್ಯ ಸಂಗತಿಯಾಗಬೇಕಿದೆ.

ಈ ಕಾರಣಕ್ಕೆ ನಮ್ಮ ನಡುವೆ ನಡೆಯುತ್ತಿರುವ ಟಿಪ್ಪು ಚರ್ಚೆ ಹುಟ್ಟುಹಾಕಿರುವ ಗೊಂದಲ ಕೇವಲ ಮತ ಅಥವಾ ಅಧಿಕಾರ ರಾಜಕೀಯ ಸಂಗತಿ ಮಾತ್ರ ಅಲ್ಲ! ಬದಲಾಗಿ ಭಾರತೀಯ ಸಾಮಾಜಿಕ ಸನ್ನಿವೇಶವನ್ನು ವಸಾಹತು ಉತ್ಪನ್ನವಾದ ಕೋಮುವಾದಿ/ಉದಾರವಾದಿ ಚರಿತ್ರೆಯಾಗಿಸುವ ಕ್ರಮದಲ್ಲಿನ ಸಮಸ್ಯೆಯಿಂದ ಉದ್ಭವಿಸಿದ ಪರಿಣಾಮ ಎಂಬ ವಿಶಾಲ ನೆಲೆಯಲ್ಲಿ ನಾವು ಗ್ರಹಿಸಿಕೊಂಡು ವಿಶ್ಲೇಷಣೆ ನಡೆಸಬೇಕಿದೆ.

ಬಹಳ ಮುಖ್ಯವಾಗಿ ನಮ್ಮ ಚರಿತ್ರೆಯನ್ನು ಗ್ರಹಿಸಲು ಅನ್ಯವಾದ ಈ ಎರಡೂ ಲೋಕದೃಷ್ಟಿಗಳ ಮಿತಿಗಳನ್ನು ಮೀರಿ ಪರ್ಯಾಯವಾಗಿ ಹೇಗೆ ಭಾರತೀಯ ಗತದಲ್ಲಿನ ಸಾಮಾಜಿಕ ವಾಸ್ತವವನ್ನು ವರ್ತಮಾನದ ಬದುಕಿಗೆ ಪೂರಕವಾಗಿ ನಿರೂಪಿಸಿಕೊಳ್ಳಬೇಕು ಎಂಬ ನೆಲೆಯ ಶೋಧನೆಗಳ ಕಡೆ ಹೆಚ್ಚು ಗಮನವನ್ನು ಕೇಂದ್ರೀಕರಿಸಬೇಕಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ನಮ್ಮ ಎಲ್ಲಾ ಚಾರಿತ್ರಿಕ ಸಂಗತಿಗಳು ವರ್ತಮಾನದ ಪೀಳಿಗೆಗಳ ಬದುಕಿಗೆ ನೆರವಾಗುವ ಬದಲು ಎರಡು ಅಲುಗಿನ ಕತ್ತಿಯಂತೆ ಮನಬಂದಂತೆ ಬಳಸಿದ ಕಡೆಯಲ್ಲೆಲ್ಲಾ ಹಿಂಸೆಯನ್ನೇ ಹೆಚ್ಚಾಗಿಸುವ ಸಂಕುಚಿತ ರಾಜಕೀಯಕ್ಕೆ ಬಳಕೆಯಾಗುವ ಅಸ್ತ್ರವಾಗುವ ಅಪಾಯವನ್ನು ಪ್ರಜ್ಞಾವಂತರೆಲ್ಲರೂ ತುರ್ತಾಗಿ ಮನಗಾಣಬೇಕಿದೆ (ಅದರ ಲಕ್ಷಣಗಳು ಈಗಾಗಲೇ ಅಲ್ಲಲ್ಲಿ ಕಾಣುತ್ತಿವೆ).


ಟಿಪ್ಪು ಕುರಿತಾದ ಚರ್ಚೆ ಅದಕ್ಕೊಂದು ವೇದಿಕೆ ಒದಗಿಸಿದೆ ಅನ್ನಿಸುತ್ತಿದೆ. ಆದರೆ ನಮ್ಮ ಬಹುಪಾಲು ಚಿಂತಕರು ನಮ್ಮ ಸಾಮಾಜಿಕ ನೆಲೆಗೆ ಅನ್ಯವಾದ ಚೌಕಟ್ಟುಗಳ ವಕ್ತಾರಿಕೆಯನ್ನೇ ಮಹತ್ವದ ಬೌದ್ಧಿಕ ಚರ್ಚೆ ಎಂಬಂತೆ ವಾದಿಸುತ್ತಿರುವುದು ಮತ್ತು ಐತಿಹಾಸಿಕ ಸಂಗತಿಗಳನ್ನು ಅವುಗಳ ಸಮರ್ಥನೆಗೆ ಆಕರವಾಗಿ ಬಳಸುತ್ತಿರುವುದು ತನ್ಮೂಲಕ ನೂರಾರು ವರ್ಷಗಳ ಕಾಲ ಬಹುತ್ವವನ್ನು ಆಧರಿಸಿ ಜನರು ಕಟ್ಟಿದ ಸಹಬಾಳ್ವೆಯ ಚರಿತ್ರೆಯನ್ನು ಧಾರ್ಮಿಕಗೊಳಿಸುತ್ತಿರುವುದು ನಮ್ಮ ನಡುವಿನ ಆತಂಕವನ್ನು ಇನ್ನೂ ಹೆಚ್ಚಾಗಿಸುತ್ತಿದೆ...

■ ಡಾ.ಕಿರಣ್.ಎಂ.ಗಾಜನೂರು

...ಮಾಧ್ವ ಮಾಲಿನ್ಯವನ್ನು ತೊಳೆಯಲು ಎಷ್ಟು ಗ್ಯಾಲನ್ ಗಂಜಲ ಬೇಕು ಶ್ರೀಗಳೇ?

ಉಡುಪಿಯ ಪೇಜಾವರರ ಮೇಲೆ ಸಂತ, ...ರಾಜಸುಧಾರಕ, ಸನ್ಯಾಸಿ, ದಲಿತೋದ್ಧಾರಕ ಎಂಬಿತ್ಯಾದಿ ...ನೇಕಾನೇಕ "ಆರೋಪ"ಗಳಿವೆ. ಇವೆಲ್ಲ ಅವರಿಗೆ ...ಪ್ತಕಸ್ತ್ರಗಳಲ್ಲ ಎಂಬ ಕಾರಣಕ್ಕೆ ಇವನ್ನು ಆರೋಪ ...ನ್ನಬಹುದಷ್ಟೇ. ಪರಮ ರಾಜಕಾರಣಿ ಹಾಗು ಪರಮ ...ಪ್ರದಾಯವಾದಿಯಾದ ಪೇಜಾವರ ಶ್ರೀಗಳು ...ಯೋವೃದ್ಧರೇ ಹೊರತು ಜ್ಞಾನವೃದ್ಧರಲ್ಲ, ಅಂದರೆ ವಯಸ್ಸು ...ಣತಿ ಮಾಗಬೇಕಾದ ವ್ಯಕ್ತಿಯ ಮನಸ್ಥಿತಿಗೆ ತದ್ವಿರುದ್ಧವಾಗಿ ...ಲೋಹಿತಶಾಹಿಯ ಮರುಸ್ಥಾಪನೆಗಾಗಿ ಈಗಲೂ ಅವರು ...ಣೆ ಬಿಟ್ಟು ನಾಟಕವಾಡುವ ಅವರ ಮನಸ್ಥಿತಿ ತೀರಾ ...ಚಿಶವಾದದ್ದು.

ಒಂದೊಮ್ಮೆ ಸಿದ್ದರಾಮಯ್ಯನವರಲ್ಲಿ ಅಹಿಂದದ 'ಅ' ...ಕ್ಕೆ ನಿಮಗೆ ನನ್ನ ಬೆಂಬಲವಿದೆ ಎಂದಿದ್ದ ಪೇಜಾವರರು ...ಗ್ಗೆ, ದಲಿತರು ಮುಸಲ್ಮಾನರೊಂದಿಗೆ ಸೇರಿ ನಡೆಸಿದ್ದ ...ಡುಪಿ ಚಲೋ ಬಗ್ಗೆ ತೀರಾ ಕಂಗೆಟ್ಟಿದ್ದರು. ಅದಕ್ಕೆ ...ಸನಾಗಿ ಅವರಿಗೆ ತಿದಿಯೂದಿದ ರೇಪಿಸ್ಟ್ ಸಂತನ ...ಸ್ಗೆ ನೇಸರನೊಬ್ಬನ ಮಾತಿಗೆ ಕಟ್ಟುಬಿದ್ದು ದಲಿತರು ...ಸಲ್ಮಾನರೊಂದಿಗೆ ನಡೆದು ಮಲಿನಗೊಳಿಸಿದ ಉಡುಪಿಯ ಬೀದಿಯನ್ನು ಶುದ್ಧಿಗೊಳಿಸುವ ಚೂಲಯ್ಯನ 'ಕನಕ ನಡೆ' ಪ್ಲಾನಿಗೆ ಅವರು ಹಸಿರುನಿಶಾನೆ ತೋರಿಸಿದ್ದರು. ಆದರೆ ಅವರ ಈ ಮನೆಹಾಳ ಪ್ಲಾನ್ ಅವರಿಗೇ ಉಲ್ಟಾ ಹೊಡೆಯುವಂತಾದಾಗ ಇದು ಮೋದಿಯ ಸ್ವಚ್ಛ ಭಾರತ ಯೋಜನೆಯ ಭಾಗವೇ ಹೊರತು ಬೇರೇನಲ್ಲ ಮತ್ತು ಇದು ರಥಬೀದಿಗಷ್ಟೇ ಸೀಮಿತವೆಂದು ಮುಖವುಳಿಸಿಕೊಳ್ಳಲು ಲುಚ್ಚಾ ವೆಂಕಟ್ ರೀತಿ ಏನೇನೋ ಬಡಬಡಿಸತೊಡಗಿದರು.



ಅಂತೂ ರಥಬೀದಿಯಲ್ಲಿ 'ಕನಕ ನಡೆ' ನಡೆಯಿತು. ಸ್ವಚ್ಛ ಭಾರತ ಕಲ್ಪನೆಯಲ್ಲಿ ಎಲ್ಲೂ ಹಾದಿ ಬೀದಿಯಲ್ಲಿ ಮಲ ಮೂತ್ರವಿಸರ್ಜನೆ ಮಾಡದಿರಿ ಎಂದರೇ ವಿನಹ ಎಲ್ಲೂ ದನದ ಮೂತ್ರ, ಗಂಜಲದ ಬಳಕೆಯ ಪ್ರಸ್ತಾಪ ಇಲ್ಲದಿದ್ದರೂ ಕೂಡ ಇಲ್ಲಿ ಪೇಜಾವರರು ವೈದಿಕ ಶುದ್ಧೀಕರಣದ ಪ್ರತೀಕವೆನಿಸಿದ ಗಂಜಲದಿಂದ ಬೀದಿ ತೊಳೆದರು. (ಬಹುಶಃ ಸರಕಾರದ ಹಾಗು ದಲಿತರ ವಿರೋಧ ಎದುರಾಗದಿದ್ದಲ್ಲಿ ಉಡುಪಿ ಚಲೋ ಜಾಥಾ ನಡೆದ ಬೀದಿಯನ್ನೂ ಸಾಂಕೇತಿಕವಾಗಿ ಗಂಜಲದಿಂದಲೇ ಶುದ್ಧೀಕರಿಸಲಾಗುತಿತ್ತೆನ್ನಲಾಗಿದೆ) ಅಲ್ಲಾ ಸ್ವಾಮಿಗಳೆ, ದಲಿತರು ಮುಸಲ್ಮಾನರೊಂದಿಗೆ ನಡೆದು ಮಲಿನಗೊಂಡ ಉಡುಪಿಯನ್ನೇನೋ ಶುದ್ಧೀಕರಿಸಿದಿರಿ. ಆದರೆ ಉಡುಪಿಯಲ್ಲಿ ನೂರಾರು ವರ್ಷದಿಂದ ಗುಡ್ಡೆ ಬಿದ್ದ "ಮಾಧ್ವ ಮಾಲಿನ್ಯ"ವನ್ನು ಯಾವ ಗಂಜಲದಿಂದ ತೊಳೆಯಬೇಕು ಹೇಳುವಿರಾ?

ಹೌದು ಕರಾವಳಿಯಲ್ಲಿ ಮಧ್ವಾಚಾರ್ಯ ಹಾಗು ನಂತರದ ವಾದಿರಾಜ ಸ್ವಾಮಿ ನಡೆಸಿದ ಮತೀಯ ದಬ್ಬಾಳಿಕೆಗೆ ತತ್ತರಿಸಿದ ಇಲ್ಲಿನ ಮೂಲ ಪರಂಪರೆ ಇಂದಿಗೆ ಏದುಸಿರು ಬಿಡುವ ಸ್ಥಿತಿ ತಲುಪಿದೆ. ಶೃಂಗೇರಿ ಅಧೀನದಲ್ಲಿದ್ದ ಅನಂತೇಶ್ವರ ಚಂದ್ರಮೌಳೀಶ್ವರನನ್ನು ಕಬ್ಜಾ ಮಾಡಿಕೊಂಡು ವೈದಿಕ ಬ್ರಾಹ್ಮಣರಿಗೇ ಪಂಗನಾಮ ಹಾಕಿದ (ಅನಂತೇಶ್ವರ ದೇಗುಲದ ಆಗ್ನೇಯ ದಿಕ್ಕಿನಲ್ಲಿ 'ಇಲ್ಲಿ ಮಧ್ವಾಚಾರ್ಯರು ಶಿಷ್ಯಂದಿರಿಗೆ ಉಪದೇಶ ನೀಡುತ್ತಲೇ ಮಾಯವಾದ ಸ್ಥಳ' ಎಂಬ ಉಲ್ಲೇಖವಿದೆ. ಆದರೆ ಮಾಧ್ವರಲ್ಲೇ ಪ್ರಚಲಿತವಿರುವ ನಂಬಿಕೆಯ ಪ್ರಕಾರ ಈ ಶೈವದೇಗುಲದಲ್ಲಿ ಹಿಂದಿನವರು ಕೂಡಿಟ್ಟ ಸಂಪತ್ತನ್ನು ತಾಂತ್ರಿಕ ವಿಧಿವಿಧಾನಗಳ ಮೂಲಕ ಮಧ್ವಾಚಾರ್ಯ ತೆಗೆಯಲು ಯತ್ನಿಸಿ ವಿಫಲನಾಗಿ ಸತ್ತದ್ದು ಎಂಬ ನಂಬಿಕೆಯೇ ಹೆಚ್ಚು ಚಾಲ್ತಿಯಲ್ಲಿದೆ) ಮಾಧ್ವ ಪರಂಪರೆ ಇಲ್ಲಿನ ಶೂದ್ರ ಮೂಲದ ಆಚರಣೆಗಳನ್ನು ತನ್ನದೇ ಆದ ರೀತಿಯಲ್ಲಿ ದಮನಿಸುತ್ತಾ ಬಂದಿತ್ತು. ಇವರ ಮೂಗು ತೂರಿಸುವಿಕೆ ಎಷ್ಟಿತ್ತೆಂದರೆ ಯಕ್ಷಗಾನದ ಪರಶುರಾಮನ ಹಣೆಯಲ್ಲಿನ ನಾಮದ ಬಗ್ಗೆ, ನಾಗಶ್ರೀ ಎನ್ನುವ ಕಥಾಪ್ರಸಂಗ ಮೊದಲಾದವುಗಳ ಬಗ್ಗೆ ತಮ್ಮ ಮೂಗಿನ ನೇರಕ್ಕಿಲ್ಲವೆಂದು ಮಾಧ್ವ ಫತ್ವಾವನ್ನು ಹೇರಲು ಯತ್ನಿಸಲಾಗಿತ್ತು. ಮಾಧ್ವ ಯತಿ ವಾದಿರಾಜನಂತೂ ತಮ್ಮ ಮತಾಚರಣೆ ಅನುಸರಿಸದ ಶೈವ ಸಾಂಪ್ರದಾಯದ ದೇಗುಲಗಳ ಮೇಲೆ ಹಕ್ಕು ಪ್ರತಿಪಾದಿಸುವ ಪುಂಡ ಸನ್ಯಾಸಿಯೆಂದೇ ಖ್ಯಾತನಾದರೆ ಇಂದಿನ ಮಾಧ್ವ ಪರಂಪರಾನುಗತ ಅಷ್ಟ ಮಠಾಧಿಪತಿಗಳೋ ಒಂದೊಂದು ಬಗೆಯ ಸ್ಪೆಸಿಮನ್. ಇವರೆಲ್ಲ ಮಾಡಿಟ್ಟು ಕೂಡಿಟ್ಟ ಕೊಳೆ-ಕೊಳೆಗಳನ್ನು ಶುದ್ಧೀಕರಿಸಲು ಎರಡುಕಾಲಿನ ಪಶುಗಳ ಗಂಜಲವೇ ಬೇಕೇನೋ.

■ ಶಂಕರ್. ಬ್ರಹ್ಮಾವರ

ಸಮಾನ ಶ್ರೇಣಿ ಸಮಾನ ಪಿಂಚಣಿ-ಪೊಳ್ಳು ಭರವಸೆಗಳ


ಭಾರತೀಯ ಮಾಜಿ ಸೈನಿಕರ ಒಕ್ಕೂಟದ **(Indian Ex-Servicemen Movement)** ಸದಸ್ಯರು ಸಮಾನ ಶ್ರೇಣಿ ಸಮಾನ ಪಿಂಚಣಿ ಯೋಜನೆಯ **(One Rank One Pension,** ಸ.ಶ್ರೇ.ಸ.ಪಿಂ.) ಸಮರ್ಪಕ ಅನುಷ್ಠಾನಕ್ಕಾಗಿ ಆಗ್ರಹಿಸಿ 2015ರ ಜೂನ್‌ನಿಂದಲೂ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅತ್ತ ಮೋದಿ ಸರ್ಕಾರ ಸ.ಶ್ರೇ.ಸ.ಪಿಂ ನೂರು ಪ್ರತಿಶತ ಅನುಷ್ಠಾನ ಆಗಿದೆ ಎಂದು ವಾದಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಮೊನ್ನೆ ನವಂಬರ್ 1ರಂದು 70ರ ವಯೋವೃದ್ಧ ಸುಬೇದಾರ್ ರಾಮ್ ಕಿಶನ್ ಗ್ರೆವಾಲ್ ಆತ್ಮಹತ್ಯೆಗೆ ಶರಣಾದ ದುರ್ಘಟನೆ ನಡೆದಿದೆ. ಇದರ ಬಳಿಕ ಎಚ್ಚೆತ್ತುಕೊಂಡಂತಿರುವ ರಾಜಕಾರಣಿಗಳಿಂದ ಆರೋಪ, ಪ್ರತ್ಯಾರೋಪಗಳ ಸುರಿಮಳೆ ಪ್ರಾರಂಭವಾಗಿದೆ. ಪ್ರತಿಪಕ್ಷಗಳ ನಾಯಕರುಗಳು ರಾಮ್ ಕಿಶನ್ ಸಾವಿನಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸತೊಡಗಿದರೆ ಇತ್ತ ಸೇನಾಪಡೆಗಳ ಹೊಗಳುಭಟರೆಂದೆನಿಸಿರುವ ಮೋದಿಭಕ್ತರ ರಾಗದಲ್ಲಿ ಅಪಸ್ವರ ಶುರುವಾಗಿದೆ. ರಾಮ್ ಕಿಶನ್ ಆತ್ಮಹತ್ಯೆಗೆ, ಆತನ ಪುತ್ರ ಜಸ್ವಂತ್ ಹಾಗು ಕುಟುಂಬ ಸದಸ್ಯರನ್ನು ಪೊಲೀಸರು ಅವಾಚ್ಯವಾಗಿ ನಿಂದಿಸಿ, ಥಳಿಸಿ, ಠಾಣೆಗೆ ಕರೆದೊಯ್ದು ವಿದ್ಯಮಾನಗಳಿಗೆ ಅವರು ತಮ್ಮದೇ ಆದ ಬಣ್ಣ ಬಳಿಯುತ್ತಿದ್ದಾರೆ. ಕಳೆದ 2014ರ ಚುನಾವಣೆಗಳಲ್ಲಿ ಮಾಜಿ ಯೋಧರನ್ನು ಬಳಸಿಕೊಂಡ ಇವರಿಗೆ ಅವರ ನ್ಯಾಯೋಚಿತ ಸವಲತ್ತುಗಳಿಗಾಗಿರುವ ಬೇಡಿಕೆ ಗಳನ್ನು ಒಪ್ಪಲು ಯಾಕೆ ಸಾಧ್ಯವಾಗುತ್ತಿಲ್ಲ? ಅಂದರೆ ಹೊಗಳಿಕೆ, ಕಂಬನಿ, ಸಾಂತ್ವನ, ಸಮ್ಮಾನಗಳೆಲ್ಲ ಕೇವಲ ಸೇವಾನಿರತ ಮತ್ತು ಹುತಾತ್ಮ ಯೋಧರಿಗಷ್ಟೆ ಮೀಸಲೆಂದರ್ಥವೆ?

ಸಂಘ ಪರಿವಾರ ತನ್ನ ಕೇಸರೀಕರಣದ ಅಜೆಂಡಾದ ಭಾಗವಾಗಿ ಸೇನಾಪಡೆಗಳ ಮೇಲೆ ತೋರುತ್ತಾ ಬಂದಿರುವ "ವಿಶೇಷ ಒಲವು" 1999ರ ಕಾರ್ಗಿಲ್ ಯುದ್ಧದ ನಂತರ ತಾರಕಕ್ಕೇರಿದೆ. ಅಂದು ವಿಶ್ವ ಹಿಂದೂ ಪರಿಷತ್ತು ತನ್ನ ಹಲವಾರು ಪ್ರತಿನಿಧಿಗಳನ್ನು ಸೇನಾ ಕೇಂದ್ರ ಕಚೇರಿಗೆ ಕಳುಹಿಸುವ ಧಾರ್ಷ್ಟ್ಯ ತೋರಿಸಿತ್ತು. ಆದರೆ ಆಗ ಸೇನಾ ಮುಖ್ಯಸ್ಥರಾಗಿದ್ದ ಜ। ವಿ.ಪಿ.ಮಲಿಕ್ ರಾಜಕೀಯ ದುರ್ಲಾಭ ಪಡೆಯಹೊರಟ ವಿಹಿಂಪದ ಈ ಯತ್ನವನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದರು. ತಾನು ಅಂದು "ನಾವು ರಾಜಕೀಯ ರಹಿತರು. ನಮ್ಮನ್ನು ನಮ್ಮಷ್ಟಕ್ಕೆ ಬಿಡಿ" ಎಂದು ಮಾಧ್ಯಮಗಳ ಮೂಲಕ ಸಂದೇಶ ರವಾನಿಸಿದ್ದ ವಿಷಯವನ್ನು ಮಲಿಕ್ ತಮ್ಮ ಪುಸ್ತಕವೊಂದರಲ್ಲಿ **(Kargil: From Surprise to Victory)** ದಾಖಲಿಸಿದ್ದಾರೆ. ಆದರೆ ನಂತರದಲ್ಲಿ ಸಂಘ ಪರಿವಾರ ಹೇಗೆ ಕಾರ್ಗಿಲ್ ಯುದ್ಧವನ್ನು ತನ್ನ ಸ್ವಾರ್ಥಕ್ಕೋಸ್ಕರ ಬಳಸುತ್ತಾ ಬಂದಿದೆ ಎನ್ನುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಇವತ್ತು ಮೋದಿ, ಶಾ ಸಾರಥ್ಯದಲ್ಲಂತೂ ಅಳಿದುಳಿದ ಅಳುಕು, ಹಿಂಜರಿಕೆಗಳನ್ನೆಲ್ಲ ತೊರೆದು "ನಿರ್ದಿಷ್ಟ ದಾಳಿ"ಗಳನ್ನು ಇಮೇಜು ವೃದ್ಧಿಸಲು, ವೋಟು ಗಿಟ್ಟಿಸಲು ಬಳಸಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ.

ಗೋಬೆಲ್ಸ್ ತಂತ್ರ

ಸ.ಶ್ರೇ.ಸ.ಪಿಂ ವಿಷಯಕ್ಕೆ ಸಂಬಂಧಿಸಿದಂತೆ ಮೋದಿ ಸರ್ಕಾರದ ಪ್ರತಿನಿಧಿಗಳ ಅಧಿಕೃತ ಹೇಳಿಕೆಗಳನ್ನು ಮತ್ತು ವಾಸ್ತವಾಂಶಗಳನ್ನು ಹೋಲಿಸಿದಾಗ ಅವು ಒಂದಕ್ಕೊಂದು ತಾಳೆಯಾಗದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ನಿಜ ಹೇಳಬೇಕೆಂದರೆ ಮೋದಿಯನ್ನೂ ಒಳಗೊಂಡಂತೆ ಇವರೆಲ್ಲರ ಹೇಳಿಕೆಗಳು ಸುಳ್ಳಿನ ಕಂತೆಗಳಂತೆ ಭಾಸವಾಗುತ್ತದೆ. ಮಾಜಿ ಯೋಧರ ಒಕ್ಕೂಟದ ಅಧ್ಯಕ್ಷರಾದ (ನಿ) ಮೇ। ಜ। ಸತ್ಬೀರ್ ಸಿಂಗ್ ಮತ್ತು ಅರ್ಥಮಂತ್ರಿ ಅರುಣ್ ಜೇಟ್ಲಿ ನಡುವಿನ ಸ್ವಾರಸ್ಯಕರ ಮಾತುಕತೆಯೊಂದು ಈ ವಿಷಯದ ಮೇಲೆ ಬಹಳಷ್ಟು ಬೆಳಕು ಚೆಲ್ಲುತ್ತದೆ. ಸ.ಶ್ರೇ.ಸ.ಪಿಂ ಯೋಜನೆಯನ್ನು ಪೂರ್ತಿಯಾಗಿ ಅನುಷ್ಠಾನಗೊಳಿಸಲಾಗುವುದೆಂದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಲ್ಲವೆ ಎಂದು ಸತ್ಬೀರ್ ಸಿಂಗ್ ಪ್ರಶ್ನಿಸಿದಾಗ ಜೇಟ್ಲಿ ಕೊಟ್ಟ ಉತ್ತರ ಅದ್ಭುತವಾಗಿದೆ: "ನೋಡಿ ಜನರಲ್. ರಾಜಕಾರಣಿಗಳಿಗೆ ತಾವು ಚುನಾವಣಾ ಕಾಲದಲ್ಲಿ ನೀಡುವ ಎಲ್ಲಾ ಭರವಸೆಗಳನ್ನು ಈಡೇರಿಸುವ ಉದ್ದೇಶ ಇರುವುದಿಲ್ಲ"! ಅಂದಹಾಗೆ ಮೋದಿಯ ಇತ್ತೀಚಿನ ಅಮೆರಿಕ ಭೇಟಿಯ ಸಂದರ್ಭದಲ್ಲಿ ತನ್ನನ್ನು ಎನ್ನಾರೈಗಳ ಸಭೆಯಲ್ಲಿ ಭಾಷಣ ಮಾಡುವಂತೆ ಕೇಳಿಕೊಳ್ಳಲಾಗಿತ್ತಲ್ಲದೆ ಮಾಜಿ ಯೋಧರ ಸತ್ಯಾಗ್ರಹಕ್ಕೆ 1 ಮಿಲಿಯ ಡಾಲರು ನೀಡುವ ಆಮಿಷ ಒಡ್ಡಲಾಗಿತ್ತೆಂಬ ಸ್ಫೋಟಕ ಮಾಹಿತಿಯೊಂದನ್ನು ಸತ್ಬೀರ್ ಹೊರಗೆಡವಿದ್ದಾರೆ.

ಜೇಟ್ಲಿ ಹೀಗೆ ಹೇಳಿದರೆ ಅತ್ತ ಕೇಂದ್ರ ಗೃಹಮಂತ್ರಿಯಾಗಿ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿರುವ ರಾಜನಾಥ್ ಸಿಂಗ್, ಬಹುಕಾಲದಿಂದ ಬಾಕಿಯಾಗಿದ್ದ ಸ.ಶ್ರೇ.ಸ.ಪಿಂ ಸಮಸ್ಯೆಯನ್ನು ಮೋದಿ ಸರ್ಕಾರ ಬಗೆಹರಿಸಿದೆ ಎಂದು ಸುಳ್ಳು ಹೇಳಿಕೆ ನೀಡುತ್ತಾನೆ. ಇನ್ನು ಮಾಜಿ ಸೇನಾ ದಂಡನಾಯಕ, ಹಾಲಿ ವಿದೇಶ ವ್ಯವಹಾರಗಳ ಉಪಮಂತ್ರಿ ಜ। ವಿ.ಕೆ.ಸಿಂಗ್ ಪ್ರಕಾರ "ಕಾಂಗ್ರೆಸ್ ಕಾರ್ಯಕರ್ತನಾಗಿದ್ದ ಸುಬೇದಾರ್ ರಾಮ್ ಕಿಶನ್ ಸರಪಂಚ ಚುನಾವಣೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ...... ಆತ್ಮಹತ್ಯೆಯ ತೀರ್ಮಾನಕ್ಕೆ ಬರುವ ಮುನ್ನ ಆತನ ಮನಸ್ಥಿತಿ ಹೇಗಿತ್ತೆಂಬುದನ್ನು ತನಿಖೆಗೊಳಪಡಿಸಬೇಕಿದೆ...... ಆತ್ಮಹತ್ಯೆಗೆ ಗುಳಿಗೆ ಎಲ್ಲಿಂದ ಸಿಕ್ಕಿತೆಂದು ವಿಚಾರಿಸಬೇಕಿದೆ....... ಆತನ ಸಮಸ್ಯೆ ಸ.ಶ್ರೇ.ಸ.ಪಿಂ ಅಲ್ಲ, ಬ್ಯಾಂಕ್....." ಅಂತೆ! ರಾಮ್ ಕಿಶನ್ ಅಸ್ಥಿರ ಮನಸ್ಸಿನ ವ್ಯಕ್ತಿಯಾಗಿದ್ದ ಎಂಬರ್ಥದ ಮಾತುಗಳು ಅಸಂವೇದನೆಯನ್ನು ತೋರಿಸಿದರೆ ಆತ್ಮಹತ್ಯೆಯ ಹಿಂದೆ ಒಳಸಂಚನ್ನು ಸೂಚಿಸುವುದು, ಕಾಂಗ್ರೆಸ್ ಸದಸ್ಯತ್ವದ ವಿಷಯವನ್ನು ಎಳೆದುತರುವುದು ಧೂರ್ತತನವನ್ನು ಪ್ರದರ್ಶಿಸುತ್ತದೆ. ಮೋದಿ ಸರ್ಕಾರದ ತುತ್ತೂರಿ ಮಾಧ್ಯಮಗಳಂತೂ ಯಾವೊಂದು ನೈತಿಕತೆಯಾಗಲಿ ವೃತ್ತಿಪರತೆಯಾಗಲಿ ಇಲ್ಲದೆ ಸ.ಶ್ರೇ.ಸ.ಪಿಂ ಬಗ್ಗೆ ತಪ್ಪು ಮಾಹಿತಿಗಳನ್ನು ಹರಡುತ್ತಿವೆ. ಇಲ್ಲಿ ಜರ್ಮನಿಯ ಫ್ಯಾಸಿಸ್ಟ್ ಸರ್ವಾಧಿಕಾರಿ ಹಿಟ್ಲರ್‌ನ ಪ್ರಚಾರಮಂತ್ರಿ ಗೋಬೆಲ್ಸ್‌ನ "ನೂರು ಬಾರಿ ಸುಳ್ಳನ್ನು ಪುನರುಚ್ಚರಿಸಿ ನಂಬಿಸುವ" ತಂತ್ರ ಬಳಕೆಯಾಗುತ್ತಿರುವುದು ಸುಸ್ಪಷ್ಟವಿದೆ.



ಪಿಂಚಣಿದಾರರಿಗೆ ದ್ರೋಹ


ದುರಂತ ಏನೆಂದರೆ ಸಂಘ ಪರಿವಾರದ ಬೋನಿಗೆ ಬಿದ್ದಿರುವ ಕೆಲವೊಂದು ಮಾಜಿ ಯೋಧರೂ ಸಹ ಮೋದಿ ಸರ್ಕಾರ 2015ರ ಸೆಪ್ಟಂಬರ್‌ನಲ್ಲೆ ಸ.ಶ್ರೇ.ಸ.ಪಿಂ ಜಾರಿಗೆ ಹಸಿರು ನಿಶಾನೆ ತೋರಿಸಿದೆ ಎಂದು ನಂಬಿ ಸರ್ಕಾರವನ್ನು ಹಾಡಿ ಹೊಗಳುತ್ತಿದ್ದಾರೆ. ಆದರೆ ಅನುಷ್ಠಾನ ಆಗಿದೆಯೆ ಎಂದು ನೋಡಹೊರಟರೆ ಇಲ್ಲವೆಂದೆ ಹೇಳಬೇಕಾಗುತ್ತದೆ. ನಿಜ ಸಂಗತಿ ಏನೆಂದರೆ ಕೇವಲ ಒಂದು ಬಾರಿಗೆ ಪಿಂಚಣಿ ಮೊತ್ತವನ್ನು ಏರಿಸಿರುವ ಮೋದಿ ಸರ್ಕಾರ ಅಸಲಿಗೆ ಸ.ಶ್ರೇ.ಸ.ಪಿಂ ವಿಷಯದಲ್ಲಿ ಎಲ್ಲರಿಗೂ ದೊಡ್ಡ ಟೋಪಿ ಹಾಕಿದೆ. ಇದು ಹೇಗೆಂದರೆ ಲೋಕಸಭೆ ಈಗಾಗಲೆ ಅರ್ಥನಿರೂಪಣೆ ಮಾಡಿರುವಂತೆ ಸ.ಶ್ರೇ.ಸ.ಪಿಂ ಅಂದರೆ: "ಯಾವುದೆ ದಿನ ನಿವೃತ್ತಿ ಹೊಂದಿದರೂ ಸಮಾನ ಸೇವಾವಧಿ ಮತ್ತು ಸಮಾನ ಶ್ರೇಣಿ ಉಳ್ಳವರಿಗೆಲ್ಲ ಸಮಾನ ಪಿಂಚಣಿ". ಇದು ಎಲ್ಲಾ ಪಿಂಚಣಿದಾರರಿಗೂ ಅನ್ವಯಿಸುತ್ತದೆ. ಆದರೆ ಮೋದಿ ಸರ್ಕಾರ ಇದನ್ನು ತಿರುಚಿ ಪಿಂಚಣಿ ಹೆಚ್ಚಳ ಕೇವಲ ಒಂದು ಸಲಕ್ಕೆ ಮಾತ್ರ ಎಂದಾಗಿಸಿದೆ! ಒಂದು ಬಾರಿ ಪಿಂಚಣಿ ಏರಿಸುವುದು ಖಂಡಿತಾ ಸ.ಶ್ರೇ.ಸ.ಪಿಂ ಅಲ್ಲ, ಇದಲ್ಲದೆ ಪಿಂಚಣಿಯನ್ನು ಮೂರು ಅಥವಾ ಐದು ವರ್ಷಗಳಿಗೊಮ್ಮೆ ಏರಿಸುವುದಲ್ಲ, ಅದನ್ನು ಪ್ರತಿ ವರ್ಷವೂ ಸಮಾನವಾಗಿಸಬೇಕೆಂದಿದೆ. ಒಂದು ಬಾರಿಗೆ ಪಿಂಚಣಿ ಮೊತ್ತವನ್ನು ಏರಿಸಿದ ಮೋದಿ ಸರ್ಕಾರ ಇದನ್ನೆ ಸ.ಶ್ರೇ.ಸ.ಪಿಂ ಎನ್ನುವುದಾದರೆ 2006, 2009, 2012ರಲ್ಲಿ ಅಂದಿನ ಯುಪಿಎ ಸರ್ಕಾರಗಳು ಒಂದೊಂದು ಬಾರಿ ಪಿಂಚಣಿ ಹೆಚ್ಚಿಸಿದ್ದನ್ನೂ ಸ.ಶ್ರೇ.ಸ.ಪಿಂ ಅನುಷ್ಠಾನ ಎಂದು ಕರೆಯಬೇಕಲ್ಲವೆ?!

ಈ ಹಿಂದೆ ಕಿರಿಯ ನಿಯೋಜಿತಾಧಿಕಾರಿ (ಜೆಸಿಒ) ಮತ್ತಿತರ ಶ್ರೇಣಿಗಳ ಯೋಧರಿಗೆಲ್ಲ ಜುಲೈ 2009ರಿಂದ ಜೂನ್ 2014ರ ತನಕ ಆಯಾ ಶ್ರೇಣಿಯ ಗರಿಷ್ಠ ವೇತನವನ್ನು ಪಿಂಚಣಿಯಾಗಿ ನಿಗದಿಪಡಿಸಲಾಗಿತ್ತು. ಆದರೆ ತದನಂತರ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ 2013ರ ಕನಿಷ್ಠ ಮತ್ತು ಗರಿಷ್ಠ ಪಿಂಚಣಿಗಳ ಸರಾಸರಿ ಮೊತ್ತವನ್ನು ಆಧಾರವಾಗಿಟ್ಟುಕೊಂಡು ಪಿಂಚಣಿಯನ್ನು ಲೆಕ್ಕಹಾಕಿರುವುದಲ್ಲದೆ ಪಿಂಚಣಿ ಬಾಕಿಯನ್ನು 2014ರ ಏಪ್ರಿಲ್‌ನಿಂದ ಹೆಚ್ಚಿಸುವ ಬದಲು ತಾನು ಮೇಯಲ್ಲಿ ಅಧಿಕಾರಕ್ಕೆ ಬಂದುದೆಂದು ಸಬೂಬು ಹೇಳಿ ಜುಲೈನಿಂದ ಹೆಚ್ಚಿಸಿದೆ! ಎರಡನೆಯದಾಗಿ, ಸೇವಾವಧಿ ಮುಗಿಯುವುದಕ್ಕೆ ಮುನ್ನವೆ ನಿವೃತ್ತರಾಗುವವರಿಗೆ ಸ.ಶ್ರೇ.ಸ.ಪಿಂ ಸೌಲಭ್ಯ ನಿರಾಕರಿಸಲಾಗಿದೆ. ಮಾತ್ರವಲ್ಲ ಸೇವೆಯ ವೇಳೆ ಮೃತಪಟ್ಟ ಯೋಧರ ವಿಧವೆಯರಿಗೆ ಮತ್ತು ಸೇವೆಯ ವೇಳೆ ಗಾಯಗೊಂಡು ಅಸಮರ್ಥರಾದ ಯೋಧರಿಗೆ ನೀಡಲಾಗುವ ಪಿಂಚಣಿಯನ್ನು ಸೇವಾವಧಿ ಜತೆ ಥಳಕು ಹಾಕಲಾಗಿದೆ. ಮೋದಿ ಸರ್ಕಾರದ "ಕೃಪೆ"ಯಲ್ಲಿ 2014ರ ನಂತರ ವಿಧವೆಯರಿಗೆ ಸಿಗುತ್ತಿರುವ ಪಿಂಚಣಿಯ ಮೊತ್ತ 2014ಕ್ಕಿಂತ ಮುಂಚೆ ನಿವೃತ್ತರಾದ ಯೋಧರ ಪಿಂಚಣಿಗಿಂತಲೂ ಕಡಿಮೆ ಇದೆ.

ಸೇನಾಪಡೆಗಳ ಬಗ್ಗೆ ಎಲ್ಲಿಲ್ಲದ ಪ್ರೇಮವನ್ನು ಪ್ರದರ್ಶಿಸುವ ಇದೇ ಮೋದಿ ಸರ್ಕಾರ ಸೆಪ್ಟಂಬರ್ 30ರಂದು ಸುತ್ತೋಲೆಯೊಂದನ್ನು ಹೊರಡಿಸಿ ಯುದ್ಧ ಅಥವಾ ಅಪಾಯಕಾರಿ ಸೇವೆಯ ಸಂದರ್ಭಗಳಲ್ಲಿ ಗಾಯಗೊಂಡು ಅಸಮರ್ಥರಾದ ಯೋಧರ ಅಸಾಮರ್ಥ್ಯ ಪಿಂಚಣಿಗಳಲ್ಲಿ ಭಾರಿ ಪ್ರಮಾಣದ ಕಡಿತ ಮಾಡಿದೆ (ಉದಾ: ರೂ 30,400 ಇದ್ದದ್ದು 12,000 ಆಗಿದೆ; 98,300 ಇದ್ದದ್ದು 27,000 ಆಗಿದೆ - ಬಿಸ್‌ನೆಸ್ ಸ್ಟಾಂಡರ್ಡ್, 10.10.2016). ವ್ಯಂಗ್ಯ ಏನೆಂದರೆ ಇವತ್ತು ರಾಜಕೀಯ ಲಾಭಕ್ಕಾಗಿ ದುರ್ಬಳಕೆ ಆಗುತ್ತಿರುವ ಇದೇ "ನಿರ್ದಿಷ್ಟ ದಾಳಿ"ಗಳು ನಡೆದ ಕೆಲವೆ ಗಂಟೆಗಳಲ್ಲಿ ಈ ಸುತ್ತೋಲೆ ಹೊರಟಿದೆ! ಮೊದಮೊದಲು ಇಂತಹ ಯಾವುದೇ ಸುತ್ತೋಲೆಯನ್ನು ಹೊರಡಿಸಿಲ್ಲವೆಂದ ಸರ್ಕಾರ ಬಳಿಕ ಸದ್ದಿಲ್ಲದೆ ತನ್ನ ಕೃತ್ಯವನ್ನು ಒಪ್ಪಿಕೊಳ್ಳಬೇಕಾಯಿತು. ಇದೆಲ್ಲ ಪಿಂಚಣಿದಾರರಿಗೆ ಬಗೆದ ದ್ರೋಹವಲ್ಲದೆ ಮತ್ತೇನು?

ಸ.ಶ್ರೇ.ಸ.ಪಿಂ ಬಾಕಿ

ಸ.ಶ್ರೇ.ಸ.ಪಿಂ ಬಾಕಿ ಮೊತ್ತದ ವಿತರಣೆ ಹೆಚ್ಚುಕಮ್ಮಿ ಪೂರ್ತಿ ಮುಗಿದಿದ್ದು ಇನ್ನು ಕೇವಲ 1,50,313 ಮಂದಿ



ಗಷ್ಟೆ ವಿತರಿಸಬೇಕಾಗಿದೆ ಎಂದು ಮೋದಿ ಸರ್ಕಾರ ಹ... ತ್ತಿದೆ. ಪಿಂಚಣಿ ಮಂಜೂರಾತಿ ಪ್ರಾಧಿಕಾರಗಳು ಓ... ಟೈಮ್ ಕೆಲಸ ಮಾಡುತ್ತಿವೆ ಎಂದು ಹೇಳಲಾಗು... ಆದರೆ ನೆಲದ ವಾಸ್ತವ ಏನೆಂದರೆ ಪ್ರಾಧಿಕಾರಗಳು ... ಯೋಧರ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಿಲ್ಲ, ... ಕುಂದುಕೊರತೆಗಳನ್ನು ಬಗೆಹರಿಸಲು ಯಾವುದೇ ... ತೋರುತ್ತಿಲ್ಲ. ಪಿಂಚಣಿ ಪಾವತಿಯ ಪ್ರಧಾನ ನಿಯಂ... ಕಚೇರಿಯಲ್ಲಿ ಪಿಂಚಣಿದಾರರನ್ನು ಗುಂಪು, ಸೇವಾ... ಶ್ರೇಣಿಗಳ ಆಧಾರದಲ್ಲಿ ವಿಂಗಡಿಸಿರುವ ಪಟ್ಟಿಯೆ ... ಆದರೆ ಪಿಂಚಣಿ ಪಾವತಿಯ ಪ್ರಧಾನ ನಿಯಂತ... **(Principal Controller of Defe... Accounts (Pensions); PCDA (...** ಬ್ಯಾಂಕುಗಳಿಗೆ ಪತ್ರ ಬರೆದು ಪಿಂಚಣಿ ಪಾವತಿ ಆದೇ... ಯೋಧನ ಗುಂಪು, ಸೇವಾವಧಿ, ಶ್ರೇಣಿಗಳನ್ನು ಉಲ್ಲೇ... ದಿದ್ದಲ್ಲಿ ಪಿಂಚಣಿ ವಿತರಿಸಬಾರದೆಂದು ಸೂಚಿಸಿದ್ದಾರೆ! ... ಸಮಸ್ಯೆಗಳನ್ನು ಹುಟ್ಟುಹಾಕಿದೆ. ರಾಮ್ ಕಿಶನ್ ಆತ್ಮ... ಇದೇ ಮುಖ್ಯ ಕಾರಣವಾಗಿದೆ.

ಸತ್ಯಾಗ್ರಹಕ್ಕಿಳಿದ ಮಾಜಿ ಯೋಧರ...

ಮೋದಿ ಸರ್ಕಾರ ಅಧಿಕಾರಗ್ರಹಣ ಮಾಡಿ ... ವರ್ಷ ಕಳೆದರೂ ಸ.ಶ್ರೇ.ಸ.ಪಿಂ ಬಗ್ಗೆ ಯಾವುದೇ ನಿ... ತಳೆಯದಿದ್ದಾಗ ಮಾಜಿ ಯೋಧರು ದಿಲ್ಲಿ ಒಳಗೊಂ... ದೇಶದ ಹಲವಾರು ನಗರಗಳಲ್ಲಿ ಜೂನ್ 2015... ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಪ್ರಾರಂಭಿ... ಒಂದು ಸಂದರ್ಭದಲ್ಲಿ (14.8.2015) ದಿಲ್ಲಿ ಪೊಲೀ... ಪ್ರತಿಭಟನಾನಿರತರ ಮೇಲೆ ಹಲ್ಲೆ ಮಾಡಿದ ಘಟನೆ... ನಡೆದಿದೆ. ಕೊನೆಗೆ ಸರ್ಕಾರ ರೂ. 6500 ಕೋಟಿ ... ಒಂದು ಅರೆಬರೆ ಯೋಜನೆಯನ್ನು ತಯಾರಿಸಿ ಪ್ರತಿಭ... ಕಾರರ ಮುಂದಿಟ್ಟಿತು. ಸರಾಸರಿ ಲೆಕ್ಕಾಚಾರದ ಆ ಪ್ರಸ್ತಾ... ತಿರಸ್ಕರಿಸಿರುವ ಮಾಜಿ ಯೋಧರು ಆಯಾ ಶ್ರೇ... ಗರಿಷ್ಠ ಪಿಂಚಣಿ ನೀಡಬೇಕೆಂದು ಕೇಳುತ್ತಿದ್ದಾರೆ. ... ರೀತಿ 17 ವರ್ಷಗಳ ಸೇವೆಯ ನಂತರ ಅ... (premature) ನಿವೃತ್ತಿ (ಸೇನಾ ಪಡೆಗಳಲ್ಲಿ ಸ್ವಯಂ... ಯೋಜನೆ ಇಲ್ಲ) ಪಡೆದು ಕೊಳ್ಳಬೇಕಿರುವ ಯೋ... ಸ.ಶ್ರೇ.ಸ.ಪಿಂ ಅನ್ವಯಿಸುವುದಿಲ್ಲ ಎನ್ನುವ ಪ್ರಸ್ತಾಪ... ಅವರು ಒಪ್ಪಿಲ್ಲ.

ಮಾಜಿ ಯೋಧರ ಕಲ್ಯಾಣಕ್ಕೆ, ನರೇಗಾ ಯೋ... ಉದ್ಯೋಗ ಸೃಷ್ಟಿಗೆ, ಶಿಕ್ಷಣ, ಆರೋಗ್ಯ, ಕೃಷಿಕ್ಷೇತ್ರ... ಅಲ್ಪಸಂಖ್ಯಾತರು, ದಲಿತರು ಮತ್ತು ಬಡವರ ಉ... ಅನುದಾನ ಒದಗಿಸಲು ಹಿಂದೇಟು ಹಾಕುವ ಮೋ... ಸರ್ಕಾರ ಕಾರ್ಪೊರೇಟು ಕುಳಗಳಿಗೆ ಕೋಟಿ ಕೋ... ರೂಪಾಯಿಗಳ ತೆರಿಗೆ ವಿನಾಯಿತಿ, ರಿಯಾಯಿತಿ, ... ವಿನಾಯಿತಿ ಮತ್ತಿತರ ಸಬ್ಸಿಡಿಗಳನ್ನು ಮೊಗೆಮೊ... ನೀಡುತ್ತಿದೆ. ಕಾರ್ಪೊರೇಟುಗಳಿಗೆ ದಯಪಾಲಿಸಿರು... ಸಾಲಮನ್ನಾದ ಮೊತ್ತ ಲಕ್ಷ ಕೋಟಿಗಳ ಸಂಖ್ಯೆಯ... ಉದಾಹರಣೆಗೆ 2015-16ರ ಸಾಲಿನಲ್ಲಿ ಬ್ಯಾಂ... ಎನ್‌ಪಿಎ ಅಂದರೆ ಸುಸ್ತಿ ಸಾಲದ ಮೊತ್ತ ರೂ. ... ಲಕ್ಷ ಕೋಟಿ ಆಗಿದ್ದು ಇದರಲ್ಲಿ ಹೆಚ್ಚಿನ ಪಾಲು ... ಕಾರ್ಪೊರೇಟುಗಳದ್ದು! ಇದಲ್ಲದೆ ಧನಿಕರ ಚಿನ್ನ ... ವಜ್ರಾಭರಣಗಳ ಮೇಲಿನ ರೂ 46,000 ಕೋಟಿ ಅ... ಸುಂಕವನ್ನು ಸಹಿತ ಮನ್ನಾ ಮಾಡಲಾಗಿದೆ! ಆದರೆ ... ಯೋಧರು ಕೇಳುತ್ತಿರುವ ಜುಜುಬಿ ಕಾಸು ನಿ... ಕೈಮುಂದೆ ಬರುತ್ತಿಲ್ಲ, ಯಾಕೆ?

- ಸುರೇಶ್ ಭಟ್ ಬಾಕ್ರಬೈ...

(ಆಧಾರ: *the wire* ನಲ್ಲಿ ನಿ. ಬ್ರಿ। ವಿದ್ಯಾ... *Quartz India* ನಲ್ಲಿ ದೇವಜ್ಯೋತ್ ಘೋ... ಮತ್ತು ಹರೀಶ್ ಮೆನನ್; *Janta Ka Rep...* ನಲ್ಲಿ ರಿಫಾತ್ ಜಾವೇದ್‌ರ ಲೇಖ...


ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ
ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.
ಹೆಚ್ಚಿನ ಮಾಹಿತಿಗಾಗಿ: 9880302817 /080-26678427



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಪ್ರಕೃತಿಯಿಂದ ಕಾವ್ಯ



ಬುಡಕಟ್ಟಿನ ಆದಿ ಕಲಾವಿದರು

ಪ್ರಕೃತಿ ಮತ್ತು ಕಾವ್ಯ ಈ ಎರಡೂ ಸಮಾನಾರ್ಥಕ ಪದಗಳು. ಸಹಜವಾಗಿರುವುದು ಮತ್ತು ಪ್ರಾಮಾಣಿಕವಾಗಿರುವುದು ಅದರ ಗುಣ. ನೈಸರ್ಗಿಕ ಸೊಗಡನ್ನು ಉಳಿಸಿಕೊಂಡಿರುವ ಯಾವುದೇ ಬುಡಕಟ್ಟಿನ ಬದುಕನ್ನು ನೋಡಿದವರಿಗೆ ಮಹತ್ತಾಗಿರುವ ಮತ್ತು ಸೃಷ್ಟಿಯ ಸೊಗಸಿನ ರಸಿಕನ್ನು ಬಿಂಬಿಸುವಂತಹ ಯಾವುದೋ ಕಾವ್ಯವನ್ನೇ ನೋಡಿದ ಹಾಗೆ ಅಥವಾ ಸಾಕ್ಷೀಕರಿಸಿದ ಹಾಗೆ ಆಗುತ್ತದೆ. ಆದರೆ ಅವರು ಸೃಷ್ಟಿಯ ಸೊಬಗಿನ ಮತ್ತು ಪ್ರಕೃತಿಯ ಪ್ರಾಮಾಣಿಕತೆಯನ್ನು ಅನುಭವಿಸುವಂತಹ ನಿಜವಾದ ಪ್ರಕೃತಿಯ ಮಕ್ಕಳಾಗಿರುತ್ತಾರೆ ಹಾಗೂ ಮಣ್ಣಿನ ಒಕ್ಕಲಾಗಿರುತ್ತಾರೆ.

ಬುಡಕಟ್ಟಿನ ಜನರು ಅಕ್ಷರಸ್ಥರಾಗಿರದಿದ್ದರೂ ಬದುಕ ನಡೆಸುವುದರಲ್ಲೇ ಕಲಾವಿದರಾಗಿರುತ್ತಾರೆ. ಜೀವನವನ್ನೇ ಕಾವ್ಯಗೊಳಿಸಿಕೊಂಡಿರುತ್ತಾರೆ. ಅವರು ಪ್ರತಿಯೊಬ್ಬರೂ ಕವಿಗಳೇ. ಇಂದಿನ ಕ್ಲಾಸಿಕ್ ಪ್ರದರ್ಶಕ ಕಲೆಗಳೆಲ್ಲಕ್ಕೂ ಅಂದಿನ ಮೂಲ ಸಂವೇದನೆಗಳೇ, ಅಭಿವ್ಯಕ್ತಿಗಳೇ ಕಲೆಗಳಾಗಿವೆ. ಗುಹೆಯ ಮೇಲಿನ ಕೊರೆತಗಳು, ಗುಹಾಚಿತ್ರಗಳು ಒಂದು ಲಲಿತ ಕಲೆ ಎಂದು ಮಾಡಿರುವುದೇನಾಗಿರಲಿಲ್ಲ, ಅವರಿಗೆ ಇದ್ದ ಯಾವುದೋ ಒಂದು ಅಗತ್ಯ ಮತ್ತು ಅನಿವಾರ್ಯ ಅಲ್ಲಿ ಚಿತ್ರವಾಗಿ ಮೂಡಿರುತ್ತದೆ. ಕುಣಿತವಾಗಲಿ, ಹಾಡುವುದಾಗಲಿ ಇದಕ್ಕೆ ಹೊರತಲ್ಲ. ಅದನ್ನು ದಾಖಲಿಸಿ ತಾನೇನನ್ನೋ ಉಳಿಸಿಹೋಗಬೇಕೆಂಬ ಹಪಹಪಿಸುವಿಕೆ ಪ್ರಕೃತಿಯ ಇತರ ಸೃಷ್ಟಿಗಳಂತೆ ಅವನಿಗೂ ಇರಲಿಲ್ಲ, ಅಕಸ್ಮಾತ್ ಉಳಿದವು ನಮಗೆ ದಕ್ಕಿವೆ. ಪ್ರಕೃತಿಯ ಯಾವುದೇ ಒಂದು ಸೃಷ್ಟಿಗೂ ತನ್ನ ಮರಣಾನಂತರ ಹೆಸರನ್ನು ಉಳಿಸಿಹೋಗಬೇಕೆಂಬ ಇಚ್ಛೆ ಹೇಗೆ ಇರುವುದಿಲ್ಲವೋ ಹಾಗೇ ಪ್ರಾಚೀನ ಬುಡಕಟ್ಟಿನ ಯಾವ ಸಹಜ ಮಾನವರಿಗೂ ಇರಲಿಲ್ಲ, ಅದಂದಿನ ಬದುಕನ್ನು ಅಂದಂದು ಬದುಕುತ್ತಿದ್ದರು. ಪ್ರಕೃತಿಗೆ ವಿಧೇಯರಾಗಿದ್ದರು.

ಆದಿಕವಿಗಳು

ಕವಿ ಹೃದಯಕ್ಕೆ ಎಡೆ ಎಂಬುದಿಲ್ಲ, ತಡೆ ಎಂಬುದಿಲ್ಲ. ಅವನ ಹೃದಯಾಕಾಶಕ್ಕೆ ಯಾವುದೇ ಕಾರ್ಮೋಡವು ಮುಸುಕಿರದಿದ್ದರೆ ಅದರೊಳಗಿರುವ ಕಾವ್ಯಸೂರ್ಯವು ತಂತಾನೆ ಬೆಳಕನ್ನು ಸೂಸುವುದು. ಅವನಿಗೆ ಇಂತಹುದ್ದೇ ಸ್ಫೂರ್ತಿ ಎಂಬುದನ್ನೂ ನಾನೊಪ್ಪಲಾರೆ. ಕವಿಯೊಳಗಿನ ಕವಿತ್ವದ ಪ್ರಜ್ಞೆಯು ಜಾಗೃತವಾಗಿದ್ದ ಪಕ್ಷದಲ್ಲಿ ತನ್ನೆಲ್ಲಾ ನೋಡುವಿಕೆಗಳನ್ನು, ಆಲಿಸುವಿಕೆಗಳನ್ನು, ಅನುಭವಗಳನ್ನು, ಸಂವೇದನೆಗಳನ್ನು ಕಾವ್ಯಾನುಭಾವದ ಮೂಸೆಯಲ್ಲಿ ಕಾಸಿ ಕವನಗಳ ಎರಕ ಹುಯ್ದಿಡುವನು ಎಂಬುದು ನನ್ನ ಗ್ರಹಿಕೆ. ಸ್ಫೂರ್ತಿ ಎಂಬುದು ವಸ್ತುವಿನಲ್ಲಾಗಲಿ, ದೃಶ್ಯಗಳಲ್ಲಾಗಲಿ ಇರದೇ ಕವಿಯ ಕಾವ್ಯಪ್ರಜ್ಞೆ ಜಾಗೃತವಾಗಿರುವಾಗೆಲ್ಲಾ ಅದು ಹೊಮ್ಮುತ್ತದೆ. ಸ್ಫೂರ್ತಿ ಎಂಬುದು ವಸ್ತು, ದೃಶ್ಯ ಮತ್ತು ಅನುಭವಗಳಲ್ಲಿ ಇರುವುದಾಗಿದ್ದರೆ, ಅವುಗಳ ಸಂಪರ್ಕಕ್ಕೆ ಬಂದವರೆಲ್ಲಾ ಕಾವ್ಯಗಳನ್ನು ರಚಿಸುವಂತಾಗಿರಬೇಕಿತ್ತು. ಹಾಗಾಗುವುದನ್ನು ನಾನು ಕಂಡಿಲ್ಲ. ಒಂದು ದೃಶ್ಯಾನುಭವವನ್ನು ಹೊಂದುವವರಲ್ಲಿ ಕೆಲವರಿಗೆ ಮಾತ್ರವೇ ಕಾವ್ಯ ರಚನೆಯ ಸಾಧ್ಯತೆಗಳಿರುತ್ತದೆ. ಒಟ್ಟಾರೆ ಕಾವ್ಯವೆಂಬುದು ದೃಶ್ಯದಲ್ಲಲ್ಲ, ಸಾಕ್ಷಿಯಲ್ಲಿ ಎಂಬುದು ನನ್ನ ಸದ್ಯದ ಗ್ರಹಿಕೆ. ಇನ್ನೂ ಮುಂದುವರೆದು ಹೇಳುವುದಾದರೆ, ಸಾಮಾನ್ಯವಾಗಿ ಮಾಡುವಂತೆ ಕಾವ್ಯಕ್ಕೂ ಸೌಂದರ್ಯಕ್ಕೂ ನಂಟು ಸೇರಿಸುವುದರ ಅಗತ್ಯವೇನಿಲ್ಲ. ಕಾವ್ಯವೆಲ್ಲವೂ ಸೌಂದರ್ಯ ಪ್ರಜ್ಞೆಯಿಂದಲೇ ಕೂಡಿರಬೇಕೆಂದೇನಿಲ್ಲ. ಒಂದು ವೇಳೆ ಸೌಂದರ್ಯಪ್ರಜ್ಞೆಯ ರಸಿಕತನದ ಅಭಿವ್ಯಕ್ತಿಯೇ ಕಾವ್ಯ ಎನ್ನುವುದಾದರೆ ಬಂಡಾಯದ, ವಿರಹದ, ವಿರಸದ, ನೋವಿನ, ದುಗುಡದ ಕಾವ್ಯಗಳೇ ಹುಟ್ಟುತ್ತಿರಲಿಲ್ಲ. ಕಾವ್ಯ ಎಂಬುದು ಸತ್ವಶಾಲಿಯಾದ ಅಭಿವ್ಯಕ್ತಿಯ ಪ್ರಕಾರ. ಅದರ ಮೂಲದಿಂದ ಏನಾದರೂ ತನ್ನದೇ ಆದ ರೂಪಕಗಳಲ್ಲಿ, ತನ್ನದ ರೀತಿಗಳಲ್ಲಿ, ತಾನೊಲಿದಂತೆ, ತನ್ನ ಹರಿವಿಗೆ ಸಿಕ್ಕಂತೆಲ್ಲಾ ಹರಿದು ಬರಬಹುದು ಎಂಬುದನ್ನು ಇತರ ಭಾಷೆಯ ಕವಿಗಳಂತೆಯೇ ಕನ್ನಡದ ಕವಿಗಳಲ್ಲೂ, ಅವರ ಕಾವ್ಯಗಳಲ್ಲೂ ಗುರುತಿಸಬಹುದು.

ದೈಹಿಕವಾಗಿ ಮತ್ತು ಮಾನಸಿಕವಾಗಿ ಆದ ಶ್ರಮದ ಸಾರ್ಥಕತೆಯು ಅದರ ತುಷ್ಟಿಗುಣದಲ್ಲಿದೆ ಎಂದು ಅವರ ಶ್ರಮದ ಕಾವ್ಯದ ಹಾಡುಗಳಲ್ಲಿ ಕಾಣುವುದು. ವಿವಿಧ ರೀತಿಯ ದುಡಿತದಲ್ಲಿ ತೊಡಗಿರುವ ಮಂದಿಯ ಬಗ್ಗೆ ತುಡಿತವನ್ನು ತೋರುವ ಕವಿಯ ಕಾಣ್ಕೆ ಆ ಕೆಲಸದ ಸಾರ್ಥಕತೆಯಲ್ಲಿ ಧ್ವನಿಸುವುದರ ಮೂಲಕ ಕಾಣುತ್ತದೆ.

ಬೆಂಕಿಯ ಝಳಕ್ಕೆ ಒಡ್ಡಿಕೊಳ್ಳಲೇಬೇಕಾಗಿರುವ ಕುಲುಮೆಜೀವಿಯ ಅನಿವಾರ್ಯತೆ, ಅದರಿಂದಲೇ ಅವನು ಬದುಕಬೇಕಾಗಿರುವ ಅಗತ್ಯತೆ, ದುಡಿದು ಉಣ್ಣುವ ಅವನ ಸಾರ್ಥಕತೆ, ನೋವಲ್ಲೂ ನಲಿವನ್ನು ಕಾಣುವ ದುಡಿಯುವ ವರ್ಗದ ಸ್ವಾಭಾವಿಕತೆಗಳೆಲ್ಲವೂ ಕವಿಯ ಕಾವ್ಯಶಕ್ತಿಯ ತಂತುಗಳನ್ನು ಮೀಟುತ್ತವೆ.

ಕಾವ್ಯಾಂತರಂಗದ ಅಂತಃಕರಣದ ಸೂರ್ಯವು ಸೂಸುವ ಅನೇಕ ಬಗೆಯ ಕಿರಣಗಳಲ್ಲಿ ಅನುಕಂಪವೂ ಕೂಡ ಒಂದು ಸಹಜ ರಶ್ಮಿ. ಅದು ಯಾವುದೇ ಭೇದವಿಲ್ಲದೇ ನೊಂದವರ ಸಾಂತ್ವನಕ್ಕೆ ಮುಂದಾಗುತ್ತದೆ. ವ್ಯಕ್ತಿ ಎಂಬ ನಿರ್ದಿಷ್ಟತೆಯಿಲ್ಲದೇ, ಒಂದು ಪ್ರತಿನಿಧಿಯ ಪ್ರತಿಮೆಯನ್ನು ಮುಂದಿಟ್ಟುಕೊಂಡು ತನ್ನ ಕರುಣಾಭಿವ್ಯಕ್ತಿಯನ್ನು ತೋರುತ್ತದೆ.

ಸಮ್ಮತದಿ ಸಮ್ಮಿಲಿತವಾಗಿದ್ದೊಡೆ ಅದು ಸರಸವೆಂದು ಲಿದುಕೊಂಡು ಸೌಂದರ್ಯಾನುಭೂತಿಯನ್ನುಂಟು ಮಾಡುತ್ತಿತ್ತು. ಆದರಿಲ್ಲಿ ಒಲ್ಲದ ಮನಸ್ಸಿಂದ, ಪರಿಸ್ಥಿತಿಯ ಒತ್ತಾಯದಿಂದ, ಬಿಗಿ ಮೈಯನ್ನು ಬಡಿಸಿಕೊಂಡು ಹಣ್ಣಾಗಿಸಿಕೊಳ್ಳುವ ನೋವಿನಿಂದ ಬಾಡುತ್ತಾ ಅಳುವ ಮಲ್ಲಿಗೆಗೆ ಕವಿಯ ಪುರುಷ ಮನಸ್ಸೂ ಕದಡುತ್ತದೆ. ಕಂಬನಿ ಸುರಿಸುತ್ತದೆ. ಹೃದಯಕ್ಕೆ ಲಿಂಗವಿಲ್ಲವಾದರೂ ಮನಸ್ಸಿಗೆ, ಮನಸ್ಥಿತಿಗೆ ಲಿಂಗಾಭಿಮಾನವಿದೆ, ಗುರುತಿಸಿಕೊಳ್ಳುವಿಕೆಗೆ ಒಳಗಾಗುವ ಅಧಿಕಾರದ ಅಹಂಕಾರವಿದೆ. ಆದರೆ ಹೃತ್ಪೂರ್ವಕವಾದ ಸಾಕ್ಷಿಯಾಗುವ ಹೃದಯವು ಸಹಜವಾಗಿಯೇ ಮರುಗುವುದು.

ಸಂವಹನಕ್ಕೆ ತೆರೆದುಕೊಳ್ಳದ ಜೀವಿಗಳಿಗೆ ಯಾವ ಸಂದೇಶಗಳನ್ನು ಕೊಟ್ಟರೂ ಅದು ವ್ಯರ್ಥವೇ. ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಮುಕ್ತತೆಯು ತೆರೆದುಕೊಳ್ಳುವಿಕೆಗೆ ಹಾತೊರೆಯುತ್ತಿದ್ದು, ಆಗ ಅವನಿಗೆ ದೊರಕುವ ಸಂದೇಶವೋ, ಸ್ಫೂರ್ತಿಯೆಂಬ ಯಾವುದೋ ನೆಪವೋ ಕಾರಣವಾಗಿ ತನ್ನ ಸದಾಶಯದ ಬದುಕನ್ನು ಚೆಂದಗೊಳಿಸಿಕೊಳ್ಳುತ್ತಾನೆ, ಹಿತಗೊಳಿಸಿಕೊಳ್ಳುತ್ತಾನೆ ಮತ್ತು ತನ್ನ ಸಹಜೀವಿಗಳ ಬಾಳ್ವೆಗೂ ಮುದ ನೀಡುತ್ತಾನೆ. ಅದಿಲ್ಲದೇ ಕಬ್ಬಿಣದ ಚಿಪ್ಪಿನಲ್ಲಿ ತನ್ನ ಹೃದಯವನ್ನು ಭದ್ರವಾಗಿಟ್ಟುಕೊಂಡು ಮೊಳೆಯಲು, ಬೆಳೆಯಲು, ಅರಳಲು ಬಿಡದವನು ಶತಶತಮಾನಗಳಿಂದ ಎಲ್ಲಾ ದಾರ್ಶನಿಕರ, ಬುದ್ಧರ, ಸಂತರ, ಶರಣರ, ದಾಸರ ಸಂದೇಶಗಳನ್ನು ತನ್ನಲ್ಲಿ ವಿಫಲಗೊಳಿಸಿಕೊಂಡಿದ್ದಾನೆ. ಆದರೂ ಈ ಕವಿ ಬಿಡುವವನಲ್ಲ, ಕವಿತ್ವಕ್ಕೆ ಭರವಸೆಯಲ್ಲಿ ಶ್ರದ್ಧೆಯಿದೆ. ನನ್ನದು ಎಂಬುದನ್ನು ಮರೆತು, ಎಲ್ಲರೊಂದಿಗೆ ಬೆರೆತು ಅಹಮನ್ನು ಅಳಿಸಿ, ಮಾನವೀಯತೆ ಬೆಳೆಸಿ, ಸಹೋದರತ್ವದಲಿ ಬದುಕು ಎಂದು ಸಂದೇಶ ಕೊಡುತ್ತಾನೆ. ಒಟ್ಟಾರೆ ಸಂದೇಶ ನೀಡುವುದರಲ್ಲಿ ಏನೋ ಒಂದು ಆಶಾವಾದದ ಎಳೆಯಿದೆ. ಸಮಾಜವು, ಸಮಾಜದೊಳಗಿರುವ ವ್ಯಕ್ತಿಯು, ತನ್ನಲ್ಲಿ ಬದಲಾವಣೆಯನ್ನು ಕಂಡುಕೊಂಡು ಬೆಳೆಯುತ್ತದೆ, ಅರಳುತ್ತದೆ ಎಂಬ ಆಸೆಯಿರುವ ಕವಿತ್ವದ ದನಿ ಬುಡಕಟ್ಟಿನ ಸಮುದಾಯ ಪ್ರಜ್ಞೆಗಳಲ್ಲಿರುತ್ತದೆ.

ಸಮಾಜಮುಖಿಯಾಗಿರುವ ವ್ಯಕ್ತಿಗೆ ಸರಸಭಾವಗಳೂ, ಮಿಲನದ ಅಭಾವಗಳೂ, ಪ್ರೇಮದುನ್ಮಾದವೂ, ವಿರಹದ ನೋವುಗಳೂ ಉಂಟು. ಅದಕ್ಕಾಗಿಯೇ ಅವನು ಕರೆಯುತ್ತಾನೆ, ಹಾತೊರೆಯುತ್ತಾನೆ, ಉಲಿಯುತ್ತಾನೆ, ಬಸವಳಿಯುತ್ತಾನೆ, ಹಾಗೆಯೇ ಉಳಿದಿರುತ್ತಾನೆ. ಪ್ರೇಮವೆಂಬ ಪರಿಕಲ್ಪನೆಯು ದೇವರೆಂಬ ಪರಿಕಲ್ಪನೆಯಷ್ಟೇ ಸತ್ಯ ಅಥವಾ ಸುಳ್ಳು. ಇದೆ ಎಂದುಕೊಂಡವರಿಗೆ ಅನುಭವ ಮತ್ತು ಅನುಭಾವ. ಇಲ್ಲವೆಂದುಕೊಂಡರೆ ಸಾಕಷ್ಟು ತಾರ್ಕಿಕ ವಿಚಾರ, ವಿಮರ್ಶೆ.

ದೇವರು, ಪ್ರೇಮ, ಮಾನವತೆಗಳಾವುವೂ ಸಾಕಾರ ಪ್ರತಿಮೆಯ ಅಸ್ತಿತ್ವದಲ್ಲಿರುವುದೇನಲ್ಲವಾದರೂ ಭಾವಿಸುವುದರಲ್ಲಿ, ಧೋರಣೆಗಳಲ್ಲಿ, ಕ್ರಿಯೆಗಳಲ್ಲಿ, ಸ್ಪಂದಿಸುವ ರೀತಿಗಳಲ್ಲಿ, ಬದುಕುವ ಬಾಳ್ವೆಗಳಲ್ಲಿ ಅನುಭವಕ್ಕೆ ತೆರೆದುಕೊಳ್ಳುವವು, ಅನುಭಾವಕ್ಕೆ ವೇದ್ಯವಾಗುವವು. ಪ್ರೇಮವಾಗಲಿ, ಕರುಣೆಯಾಗಲಿ ನಿಲುವುಗಳಿಂದಲೋ ಅಥವಾ ಕ್ರಿಯೆಗಳಿಂದಲೋ ಅನುಭವಕ್ಕೆ ಕಾರಣವಾಗುವುದೇ ಹೊರತು, ಬರಿದೆ ಇದ್ದಾವೆಂದು ಭಾವಿಸುವುದರಿಂದ ಅವು ಕೂಡ ಕೇವಲ ಭ್ರಾಮಕವಾದ ಕತ್ತಲು ಜಗತ್ತಿನ ನೆರಳುಗಳಾಗಿಯೇ ಉಳಿದುಬಿಡುತ್ತವೆ.

ಪ್ರಕೃತಿಗೆ ಸಹಜವಾಗಿ ವಿಧೇಯವಾಗಿರುವ ಸಮುದಾಯಗಳು ವ್ಯಕ್ತಿಗತವಾಗಿ ಕಟ್ಟುವ ಕಾವ್ಯಕ್ಕಿಂತ ಸಾಮೂಹಿಕವಾಗಿಯೇ ಹಾಡುಗಳನ್ನು ಹಾಡುತ್ತಿದ್ದರು. ಅವರ ದನಿಗಳೆಲ್ಲಾ ಒಂದಾಗಿರುತ್ತಿದ್ದ ಮುಖ್ಯಕಾರಣವೆಂದರೆ ಅವರ ಜೀವತಂತುಗಳು ಮೂಲತಃ ಪ್ರಕೃತಿಯೊಡನೆಯೇ ಬೆಸೆದುಕೊಂಡಿರುತ್ತಿದ್ದವು.

ಪ್ರಕೃತಿಯನ್ನು ಧಿಕ್ಕರಿಸುವ ಮಾನವನ ರಾಜಕೀಯ

1930ರ ದಶಕದಲ್ಲಿ ಸೆಂಟ್ರಲ್ ಕಾಲೇಜಿನ ಪ್ರಾಧ್ಯಾಪಕರು, ಚ. ವಾಸುದೇವಯ್ಯ ತಾವು ರಚಿಸಿದ ಗೋವಿನ ಹಾಡು ಪದ್ಯದ ನೃತ್ಯ ರೂಪಕವನ್ನು ಪ್ರದರ್ಶಿಸಿದರು. ಅಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಸರ್ ಸಿ ವಿ ರಾಮನ್‌ಗೆ ಸನ್ಮಾನವಿತ್ತು, ಆಗ ಅವರಿಗೇ ಎಂಭತ್ತು ವಯಸ್ಸು. ಈ ಪುಣ್ಯಕೋಟಿ ಕಥೆಯ ಮೂಲ ಪದ್ಮಪುರಾಣದ ಸೃಷ್ಟಿ ಖಂಡದ ಎರಡನೇ ಅಧ್ಯಾಯದಲ್ಲಿದೆ. ಇಲ್ಲಿರುವ ಕಾಳಿಂಗ ಗೊಲ್ಲ, ಅಲ್ಲಿ ನಂದನೆಂಬ ಗೊಲ್ಲನಿದ್ದಾನೆ. ಇದರಲ್ಲಿ ಹುಲಿಯು ಪ್ರಾಣಬಿಟ್ಟರೆ ಅಲ್ಲಿ ಅದು ಪ್ರಾಂತ್ಯವನ್ನು ತ್ಯಜಿಸಿ ಹೋಗುತ್ತದೆ.

ಸುಮಾರು 1800 ವರ್ಷಗಳಿಗೂ ಹಿಂದಕ್ಕೆ ಹೋಗಿರಲಾರದು. ಗೋವಿನಹಾಡಿನಲ್ಲಿ ಮದ್ದೂರಿನ ನರಸಿಂಹ ದೇವರ ಹೆಸರು ಇರುವುದರಿಂದ ಇದನ್ನು ಕಟ್ಟಿದ ಕವಿ ಆ ಊರಿನವನೋ ಅಥವಾ ಆ ದೇವರ ಒಕ್ಕಲಿನವನೋ ಆಗಿರಬೇಕೆಂದೂ ಊಹಿಸುತ್ತಾರೆ. ಅದು ಬಹುಜನರ ಬಾಯಿಗೆ ಬಂದಿದ್ದರೂ ಶುದ್ಧ ಜನಪದ ರಚನೆಯಲ್ಲ, ಒಬ್ಬ ಕವಿಯ ಕೃತಿಯೇ ಆದಾಗಿದೆ. ಬುಡಕಟ್ಟು ಜನರ ಸಾಮೂಹಿಕ ಪ್ರಾಕೃತಿಕ ಪ್ರಜ್ಞೆ ಅದರಲ್ಲಿಲ್ಲ, ಗ್ರಾಮೀಣ ಜನರ ಸಮಗ್ರ ಔದಾರ್ಯದ ಜನಪದದ ಆಶಯವೂ ಅದರಲ್ಲಿ ಇಲ್ಲ. ಆದರೆ ಅಲ್ಲಿ ಗಮನಿಸಬೇಕಾದ ಬಹು ಮಹತ್ತರ ಅಂಶವೆಂದರೆ, ಬ್ರಾಹ್ಮಣನೊಬ್ಬ ತನ್ನ ಆಚಾರವಿಚಾರವನ್ನು ಉನ್ನತೀಕರಿಸಲು ಪ್ರಕೃತಿ ಸಹಜವಾಗಿರುವಂತಹ ಇತರ ಮನುಷ್ಯನ ಆಹಾರದ ಹಕ್ಕನ್ನು ಕೀಳಾಗಿ ಕಾಣುತ್ತಾನೆ. ಸಾಲದ್ದಕ್ಕೆ ತನ್ನ ಆಹಾರ ಪದ್ಧತಿಯನ್ನು ಮೇರುವಾಗಿಸಲು ಮತ್ತೊಂದು ಆಹಾರ ಪದ್ಧತಿಯ ಇರುವನ್ನೇ ಇಲ್ಲವಾಗಿಸುವಷ್ಟು ಕ್ರೂರಿಯಾಗುತ್ತಾನೆ.

ಪುಣ್ಯಕೋಟಿ ಕಥೆಯಲ್ಲಿ ಸಾತ್ವಿಕವಾಗಿ ತೋರುವ ಹಸು, ಹುಲಿಯು ಹಾರಿ ನೆಗೆದು ತನ್ನ ಪ್ರಾಣವ ಬಿಡುವಂತೆ ಮಾಡುತ್ತದೆ. ಆದರೆ, ನೈಸರ್ಗಿಕವಾಗಿರುವ ಹುಲಿಯು ತನ್ನ ಆಹಾರವನ್ನು ಉದಾರವಾಗಿ ಬಿಡುವಂತಹ ಸಂದರ್ಭವನ್ನು ಕಾಣುತ್ತೇವೆ. ಇದು ಬ್ರಾಹ್ಮಣ್ಯದ ರಾಜಕೀಯದ ಕುಟಿಲತೆಯನ್ನೂ, ಮಾಂಸಾಹಾರಿಗಳಾಗೇ ಇರುವ ಬುಡಕಟ್ಟು ಜನರ ಔದಾರ್ಯವನ್ನೂ ತೋರುತ್ತದೆ.

ಪೂರ್ವಿಕರು

ಪೂರ್ವಿಕರು ಎಂದರೆ ಯಾರು? ನಮ್ಮ ಪೂರ್ವಕಾಲದಲ್ಲಿದ್ದವರು. ಅವರ ನಂತರದ ಬದುಕನ್ನು ನಾವು ನಡೆಸುತ್ತಿರುವವರು. ನಾವು ನಮ್ಮ ತಂದೆತಾಯಿಯರ ಕಾಲದ ಸ್ಥಿತಿ, ಗತಿ, ಪರಿಸ್ಥಿತಿ ಮತ್ತು ಜೀವನ ಪದ್ಧತಿಗಳನ್ನೇ ತಿಳಿಯುವಷ್ಟು ವ್ಯವಧಾನವನ್ನು ಹೊಂದಿರುವುದಿಲ್ಲ. ಬಹಳಷ್ಟು ಜನ ತಮ್ಮ ಸದ್ಯದ ಬದುಕು ಮತ್ತು ಮುಂದಿನ ಬದುಕಿನ ಬಗ್ಗೆಯಷ್ಟೇ ಕಾಳಜಿ ವಹಿಸಿರುತ್ತಾರೆ. ಆದರೆ ಬೇರನ್ನು ತಿಳಿದರೆ, ಚಿಗುರಿನ ಬಗ್ಗೆ ಹೆಚ್ಚಿನ ಸ್ಪಷ್ಟತೆಯೂ ಸಿಗುವುದು ಎಂದು ಅವರಿಗೆ ತಿಳಿಯುವುದೇ ಇಲ್ಲ.

ಮೂಡಬಿದ್ರಿಯ ಹೋಮಿಯೋಪತಿ ವೈದ್ಯರೂ, ಲೇಖಕರೂ ಆಧ್ಯಾತ್ಮ ಸಾಧಕರೂ ಆಗಿರುವ ಭಾಸ್ಕರ್ ಬಂಗೇರಾರವರು ಬರೆದಿರುವ ಕವನವೊಂದು ನಮ್ಮ ಪೂರ್ವಿಕರ ಮನಸ್ಥಿತಿಯನ್ನು ಧ್ವನಿಸುತ್ತದೆ.

ಸಮಾಜದ ಓರೆಕೋರೆ ತಿದ್ದುವ ಸರ್ವಜ್ಞನಲ್ಲ
ನನ್ನಜ್ಜ ಜೀವನದ ಅನುಭವವ ನಿಷ್ಠೂರತೆಯಿಂ
ಹೇಳುವ ಸ್ಥಿತಪ್ರಜ್ಞ ನನ್ನಜ್ಜ

ಪ್ರಕೃತಿಯ ಮಕ್ಕಳು ಸಮುದಾಯದ, ಸಮಾಜದ ಓರೆಕೋರೆಗಳನ್ನು ನೋಡಿ ತಿದ್ದಲು, ತೀಡಲು ಹೋಗುವುದಿಲ್ಲ. ಬದಲಿಗೆ ಅದರೊಳೊಂದಾಗಿದ್ದು, ತನ್ನ ಜೀವನದ ಅನುಭವವನ್ನು ನಿಷ್ಠೂರತೆಯಿಂದ ಹೇಳುವನು. ಆದರೆ ಅದನ್ನು ಶಿಷ್ಟ ಸಮಾಜದ ಮಂದಿ ನಿಷ್ಠೂರತೆ ಎನ್ನುವರು. ಆದರೆ ಅದು ಬರಿದೇ ಪ್ರಾಮಾಣಿಕತೆ. ಸ್ಥಿತಪ್ರಜ್ಞೆಯ ಅವಸ್ಥೆಯೂ ಕೂಡ ಅವರ ಸಹಜ ಸ್ಥಿತಿಯೇ ಆಗಿರುತ್ತದೆ.

ಇನ್ನು ಪ್ರಕೃತಿಯ ಸೃಷ್ಟಿಯ ಭಾಗವಾಗಿರುವಂತಹ ಆ ಮನುಷ್ಯರಿಗೆ ಯಾವುದೇ ಸಂಸ್ಥಾಪಿತ ಧರ್ಮದ ಅಗತ್ಯವಿರುವುದಿಲ್ಲ. ಅವರಿಗೊಂದು ಮಹತ್ತರವಾದ ಗುಣವಿರುತ್ತದೆ. ಅದೇನೆಂದರೆ, ತಮ್ಮನ್ನು ತಾವು ಪ್ರಕೃತಿಯ ಭಾಗವಾಗಿ ತಿಳಿದುಕೊಂಡಿರುತ್ತಾರೆ. ಅದೊಂದು ತಿಳಿವಳಿಕೆ ಇರುವುದೆಂಬ ತಿಳಿವಳಿಕೆಯಲ್ಲ, ಸಹಜವಾಗಿ ಅಂತರ್ಗತವಾಗಿರುವಂತಹ ಗುಣ ಮತ್ತು ಚಾತುರ್ಯವಾಗಿರುತ್ತದೆ. ಅವರಿಲ್ಲಿರುವಂತಹ ಆಸೆ ಮತ್ತು ಅಗತ್ಯಗಳು ಪ್ರಾಕೃತಿಕವಾಗಿ ತೃಪ್ತಿಪಡಿಸಿಕೊಳ್ಳಬಹುದಾಗಿರುವಂತಹುದೇ ಹೊರತು, ಅಧಿಕಾರದ, ಕೀರ್ತಿಯ, ಸ್ಪರ್ಧೆಯ ಬಾಬತ್ತಿನದಲ್ಲ. ಅದನ್ನು ಭಾಸ್ಕರ್ ಬಂಗೇರಾ ತಮ್ಮ ಪೂರ್ವಿಕರಲ್ಲಿ ಹೀಗೆ ಗುರುತಿಸುತ್ತಾರೆ.

ಸುಮ್ಮನಿರುವುದೇ ಧ್ಯಾನ, ನಮ್ಮನರಿವುದೇ ಮೋಕ್ಷ
ಹೆಮ್ಮರದ ತೆರದಿ ಬೆಳೆವಾಸೆಗಳು ನಮ್ಮನ್ನು
ಸುಮ್ಮನಿರಗೊಡದು ನನ್ನಜ್ಜ

ಪ್ರಕೃತಿಗೂ ಮತ್ತು ಸೃಷ್ಟಿಯ ಭಾಗವೇ ತಾವಾಗಿರುವ ಜನರ ಚತುರತೆ ನೈಸರ್ಗಿಕವಾಗಿರುವುದೇ ಹೊರತು ಕುತಂತ್ರದ ಬುದ್ಧಿವಂತಿಕೆಯದ್ದಾಗಿರುವುದಿಲ್ಲ. ಹಸುಗೂಸಿನ ಸಹಜ ಜಾಣತನ ಅವನದು. ಮಗುವಿನ ಮುಗ್ಧತೆ ಅವನದು. ಅದನ್ನು ಅವರು ಹೇಳುವುದು ಹೀಗೆ.


ಬುದ್ಧಿವಂತರನೆಲ್ಲ ಒದ್ದೋಡಿಸುವನಾತ
ಸದ್ದಿಲ್ಲದೇ ಪ್ರಕೃತಿಯ ಮಡಿಲಲ್ಲಿ ಇರುವವನ
ಮುದ್ದು ಮಾಡುತಾ ಪೊರೆವ ನನ್ನಜ್ಜ

ಪ್ರಕೃತಿಯಿಂದ ಒಡಮೂಡಿದ ನಮ್ಮ ಪೂರ್ವಿಕರಾದವರು ಮತ್ತು ನಮ್ಮ ಇಂದಿನ ಸಹಜೀವಿಗಳು ಬಾಳುವ ಬಗೆಯನ್ನು ನನ್ನಜ್ಜನ ವಚನಗಳು ಎಂಬ ದೀರ್ಘಪದ್ಯದಲ್ಲಿ ಸೊಗಸಾಗಿ ವಿವರಿಸುತ್ತಾ ಹೋಗುತ್ತಾರೆ.


ಒಟ್ಟಾರೆ ತಾತ್ಪರ್ಯವೆಂದರೆ, ಆದಿಜನರ ಕಲಾವಂತಿಕೆ ಮತ್ತು ಕವಿತ್ವವು ನಿಸರ್ಗದ ರಸಿಕತನದ ಭಾಗವೇ ಆಗಿದ್ದು, ಅದು ಮುಂದೆ ಆರಾಧನಾ ರೂಪಕ್ಕೆ ಪರಿವರ್ತನೆಯಾಗಿದ್ದೂ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಪುರಾಣಗಳಲ್ಲಿ ರೂಪಾಂತರಗಳನ್ನು ಹೊಂದಿದ್ದು ಹೇಗೆಂದು ಮುಂದೆ ನೋಡೋಣ. ■




ಮೋಹನದಾಸ್ ಪೈ ಮಾಮನಿಗೊಂದು ಪ್ರೀತಿಯ ಪತ್ರ




ಕರ್ನಾಟಕ ಸರಕಾರ ಆಯೋಜಿಸಲು ಯೋಚಿಸಿರುವ ಟಿಪ್ಪು ಜಯಂತಿ ಆಚರಣೆಯ ಕುರಿತಾ ತೀವ್ರವಾಗಿ ನೊಂದಿರುವ ಇನ್ಫೋಸಿಸ್‌ನ ಮಾಜಿ. ನಿರ್ದೇಶಕ ಮೋಹನದಾಸ ಪೈ ಅವರು "ಸರಕಾರದ ಈ ನಿಲುವಿನ ಬಗ್ಗೆ ತಿಳಿದು ನನಗೆ ತುಂಬಾ ಅವಮಾನವಾಗುತ್ತಿದೆ" ಎಂದು ಅದನ್ನು ತೀವ್ರವಾಗಿ ಖಂಡಿಸಿದ್ದಾರೆ. ಟಿಪ್ಪು ಕೊಂಕಣಿ ಭಾಷಿಕರನ್ನು ಕೊಂದು ಅನೇಕ ಜಿಎಸ್‌ಬಿ ದೇಗುಲಗಳನ್ನು ನಾಶಪಡಿಸಿದ್ದಾನೆಂಬುದು ಶ್ರೀಯುತ ಮೋಹನದಾಸ ಪೈಯವರ ಆರೋಪ. ಇದನ್ನು ನೋಡಿದ ಸ್ವತಃ ಜಿಎಸ್‌ಬಿ ಸಮುದಾಯದವರೇ ಆದ ಹಿರಿಯರಾದ ನರೇಂದ್ರ ನಾಯಕರು ಪೈಯವರಿಗೆ ತಕ್ಕುದಾದ ಉತ್ತರವನ್ನೇ ನೀಡಿದ್ದರೂ ಚಾಣಾಕ್ಷ ಪೈ ಮಾಮ, ನರೇಂದ್ರ ನಾಯಕರು ಎತ್ತಿದ ಬಾಳಿಗಾ ಪ್ರಕರಣ, ಪೈ ಶಾಮೀಲಾಗಿರುವ ಸರಕಾರಕ್ಕೆ ಕೋಟ್ಯಾಂತರ ತೆರಿಗೆ ಹಣ ವಂಚಿಸಿದ ಕಂಪನಿ ಹಾಗು ಜಿಎಸ್‌ಬಿ ಹೀರೋ ವಿಜಯ್ ಮಲ್ಯನ ಬಗ್ಗೆ ತನಗದು ಗೊತ್ತೇ ಇರದ ವಿಚಾರವೆಂದು ಜಾರಿಕೊಂಡಿದ್ದಾರೆ.



ಹೌದು, ನರೇಂದ್ರ ನಾಯಕರು ಅತ್ಯಂತ ಸ್ಪಷ್ಟವಾಗಿ ಪೈಯವರನ್ನು ಪ್ರಶ್ನಿಸಿದ್ದರು. ಯಾವುದೋ ಕಾಲಮಾನದಲ್ಲಿ (ಆ ಕಾಲದಲ್ಲಿ ರಾಜ್ಯ ವಿಸ್ತರಣೆ ಮತ್ತು ಶತ್ರು ನಿಯಂತ್ರಣ ವಿಚಾರದಲ್ಲಿ ಯುದ್ಧ ದಾಳಿಗಳೆಲ್ಲ ಸಹಜವಾಗಿತ್ತು) ಇತರ ರಾಜರಂತೆ ಟಿಪ್ಪು ಮಾಡಿದ ಹಾಗು ಬಹುತೇಕ ಕಲ್ಪಿತ ದಾಳಿ ಮತ್ತು ಕೆಡವುವಿಕೆಗಳನ್ನು ಬಿಟ್ಟು "ಮೊನ್ನೆ ಮೊನ್ನೆ ನಡೆದ ಇದೇ ಜಿಎಸ್‌ಬಿ ಸಮುದಾಯಕ್ಕೆ ಸೇರಿದ ಜಿಎಸ್‌ಬಿಗಳ ಮನೆದೇವರಾದ ವೆಂಕಟರಮಣನ ಪರಮ ಭಕ್ತ ಬಾಳಿಗಾ ಅವರ ಕೊಲೆ ಬಗ್ಗೆ ನೀವ್ಯಾರೂ ಚಕಾರವೆತ್ತದೇ, ಬಾಳಿಗಾರ ವೃದ್ಧ ತಂದೆತಾಯಿಯರನ್ನು ಕಾಟಾಚಾರಕ್ಕೂ ಸಂತೈಸಹೋಗದೇ ಈಗ ಟಿಪ್ಪು ಜಿಎಸ್‌ಸಿ ವೈರಿ ಎಂದು ಸಮುದಾಯಕ್ಕೆ ಹುಸಿ ಪ್ರೀತಿ ತೋರುತ್ತೀರಲ್ಲ? ಇದು ಯಾವ ಸೀಮೆಯ ಕಾಳಜಿ?" ಎಂದು ಪ್ರಶ್ನಿಸಿದ್ದರು. ಆದರಿದು ಪೈಗೆ ಅನಾಸಕ್ತಕರ ವಿಚಾರವಂತೆ. ದೇಶಕ್ಕೆ ಸಾವಿರಾರು ಕೋಟಿ ಮುಂಡಾ ಮೋಚಿ ಪರಾರಿಗೈದು ಇಡೀ ಜಿಎಸ್‌ಬಿಗಳ ಮಾನ ಕಳೆದ ಮಲ್ಯಾನ ವಿಚಾರವೂ ಬೇಡವಂತೆ ಆದರೆ ಸರಕಾರದ ನಿರ್ಧಾರ ಮಾತ್ರ ಕೊಂಕಣಿಗರಿಗೆ ಅವಮಾನಕರವಂತೆ. ಎಂಥಾ ದಗಲುಬಾಜಿತನ.



ಟಿಪ್ಪು ಜಯಂತಿ ಆಚರಣೆಯ ಹೆಸರಲ್ಲಿ ಸರಕಾರ ಜನರನ್ನು ಸಮುದಾಯಗಳನ್ನು ಒಡೆಯುತ್ತಿದೆ ಎನ್ನುವ ಪೈ ಮಾಮನ ಸಮುದಾಯದ ಬಹುತೇಕ ಜನರು ಮಾಡುತ್ತಿರುವುದಾದರೂ ಏನನ್ನು? ಕಳೆದ ಸಂಚಿಕೆಯಲ್ಲಿ ಸ್ವತಃ ಜಿಎಸ್‌ಬಿ ಸಮುದಾಯದವರೇ ಆದ ಮನು ಶೆಣೈಯವರೇ (ಕೊಡುಗೆಗೆ ಸಂಬಂಧಿಸಿದ ಲೇಖನದಲ್ಲಿ) ಉಲ್ಲೇಖಿಸಿರುವಂತೆ ಇಲ್ಲಿ 99% ಜನ ಆರೆಸ್ಸೆಸ್ ಬೆಂಬಲಿಗರೇ ಇದ್ದಿರುವುದು ಎನ್ನುವುದನ್ನು ನಾನು 90 ಕ್ಕೆ ಇಳಿಸುತ್ತೇನೆ. ಯಾಕೆಂದರೆ ನರೇಂದ್ರ ನಾಯಕ್, ಮನು ಶೆಣೈರಂತಹ ಜನಪರ ನಿಲುವಿನ ಅನೇಕ ಮಂದಿಯೂ ಈ ಸಮುದಾಯದಲ್ಲಿರುವುದನ್ನು ಒಪ್ಪಲೇಬೇಕಾಗುತ್ತದೆ. ಕರಾವಳಿ ಜಿಲ್ಲೆಯ ಯಾವುದೇ ಕೋಮು ಪ್ರಚೋದಕ ಸಮಾರಂಭಗಳು ನಡೆದರೂ ಅದರ ಹಿಂದೆ ಅಗೋಚರವಾಗಿ ಫೈನಾನ್ಸ್ ಹಾಗು ಪ್ರಚಾರ ಸಂಘಟನಾ ಕಾರ್ಯಕ್ಕೆ ಮುಂದಾಗುವುದು ಇದೇ ಸಮುದಾಯದ ಮಂದಿಯೆನ್ನುವುದು ಓಪನ್ ಸೀಕ್ರೆಟ್. ಈ ವಿಚಾರ ಪೈ ಮಾಮನಿಗೆ ಗೊತ್ತಿಲ್ಲವೆಂದೇನಿಲ್ಲ. ತಮ್ಮ ಸಮುದಾಯ ಹೆಚ್ಚಾಗಿ ತೊಡಗಿಸಿಕೊಂಡಿರುವ ತಮ್ಮ ಬ್ಯುಸಿನೆಸ್ ಹಾಗು ಗೋವಾದಿಂದ ವಲಸೆ ಬಂದ ಅಲ್ಪಸಂಖ್ಯಾತ (ಮಣಿಪಾಲದಲ್ಲಿ ಶಿಕ್ಷಣ ಸಂಸ್ಥೆ ಹಾಗು ದೊಡ್ಡಮಟ್ಟದ ಜಾಗವನ್ನು ಸರಕಾರದಿಂದ ಗಿಟ್ಟಿಸಿಕೊಂಡಿದ್ದು ಈ ಅಲ್ಪಸಂಖ್ಯಾತ ಲೇಬಲ್‌ನಿಂದಲೇ ತಾನೇ) ಎನ್ನುವ ಮಿತಿ ಮತ್ತು ಸಹಜ ಸ್ವಭಾವಗಳ ಕಾರಣಕ್ಕೆ ಬಹಿರಂಗವಾಗಿ ಎಲ್ಲೂ ಬತ್ತಿಯಿಡುವಿಕೆ, ದ್ವೇಷಬಿತ್ತುವಿಕೆಯನ್ನು ತೋರಿಸಿಕೊಳ್ಳದೇ ಸೌಹಾರ್ದಕ್ಕೆ ಹೆಸರಾದ ಕರಾವಳಿಯಲ್ಲಿ



ಜನಸಮುದಾಯವನ್ನು ಒಡೆದವರು ಹಾಗು ಒಡೆಯುತ್ತಿರುವವರು ಯಾರೆನ್ನುವುದು ಈ ಮಾಮನಿಗೇ ಗೊತ್ತಿದೆ. ಆತನೇ ಆ ಪ್ರಶ್ನೆಗೆ ಉತ್ತರಿಸಬೇಕು.

ಮೊನ್ನೆ ಮೊನ್ನೆ ಜಿಎಸ್‌ಬಿ ಸಮುದಾಯದವರೇ ಆದ ಶ್ರೀಧರ್ ಪ್ರಭು ಎನ್ನುವವರ "ನಮ್ಮವರ ಮೇಲೆಯೇ ನಡೆದ ಒಂದು ಸರ್ಜಿಕಲ್ ದಾಳಿ" ಎಂಬ ವಿಷಾದ ತುಂಬಿದ ನೋವಿನ ಅಭಿಪ್ರಾಯವೊಂದು ವಾಟ್ಸ್ ಆಪ್‌ನಲ್ಲಿ ಹರಿದಾಡುತಿತ್ತು, ಅದೇನೆಂದರೆ ಅವರ ಸಮುದಾಯದವರ ಇದೇ ಮನೆಹಾಳ ಬುದ್ಧಿಯ ಕುರಿತಾಗಿ ಅವರು ಬರೆದ ಲೇಖನ. ಆ ಲೇಖನ ಆರಂಭಗೊಳ್ಳುವುದೇ ಹೀಗೆ:

"ಪಾಕಿಸ್ತಾನ, ಬಾಂಗ್ಲಾದ ಹಿಂದೂಗಳ ಬಗ್ಗೆ ಕಣ್ಣೀರು ಹರಿಸುವವರಿಗೆ ಗೋವಾವಾಸಿ ಕನ್ನಡಿಗರ ಬವಣೆ ತಿಳಿದಿಲ್ಲ. ಗೋವಾದ ಕನ್ನಡಿಗರು ಅಕ್ಷರಶಃ ಗುಲಾಮರಂತೆ ಬದುಕುತ್ತಿದ್ದಾರೆ. ವಾಸಕ್ಕೆ ಮನೆ, ತಿನ್ನಲು ಕೂಳಿಲ್ಲದೇ ಪರದೇಶಿಗಳಂತೆ ಬದುಕುತ್ತಿದ್ದಾರೆ. ಇದು ನಮ್ಮದೇ ದೇಶದ ಜನರನ್ನು ನಮ್ಮದೇ ಮಂದಿ ನೋಡುತ್ತಿರುವ ರೀತಿ."

ಈ ಲೇಖನ ಬರೆದ ಹಿನ್ನೆಲೆ ಅಕ್ಟೋಬರ್ 15 ರಂದು ಗೋವಾದ ಫೋಂಡಾ ಎನ್ನುವಲ್ಲಿ ಕನ್ನಡಿಗ ರಮೇಶ್ ದೊಡ್ಮನಿ ಎನ್ನುವವರ ಮೇಲೆ ಕ್ಷುಲ್ಲಕ ಕಾರಣಕ್ಕೆ ಇದೇ ಕೊಂಕಣಿಗಳು ರಾತ್ರಿ ಮನೆಗೆ ನುಗ್ಗಿ ಕಬ್ಬಿಣದ ರಾಡ್‌ಗಳಿಂದ ಹಲ್ಲೆ ನಡೆಸಿ ಬಹಳ ಹಿಂದಿನಿಂದಲೂ ವಾಸವಾಗಿದ್ದ ಅವರ ಕುರಿತು ಕರ್ನಾಟಕಕ್ಕೆ ತೊಲಗಿ ಎನ್ನುತ್ತಾ ಅವಾಚ್ಯವಾಗಿ ನಿಂದಿಸಿ ಮನೆ ವಾಹನಗಳಿಗೆಲ್ಲ ಬೆಂಕಿ ಕೊಟ್ಟು ಮಕ್ಕಳು ಹೆಂಗಸರ ಮೇಲೂ ಒಂದಿನಿತೂ ಕರುಣೆ ತೋರದೇ ದೌರ್ಜನ್ಯವೆಸಗಿ ಬೀದಿ ಪಾಲಾಗಿಸಿದ ಘಟನೆ. ಇದು ಎಂತವರನ್ನೂ ದಂಗಾಗಿಸುತ್ತದೆ. ಪ್ರತಿ ವರ್ಷ ನೂರಾರು ವರ್ಷಗಳಿಂದ ವಾಸವಿದ್ದ ಕನ್ನಡಿಗರನ್ನು ಬೈನಾ ಮೊದಲಾದೆಡೆ ಜೆಸಿಬಿಗಳನ್ನು ನುಗ್ಗಿಸಿ ನಿರ್ದಾಕ್ಷಿಣ್ಯವಾಗಿ ಒಕ್ಕಲೆಬ್ಬಿಸುತ್ತಿದ್ದರೂ ಕನ್ನಡಿಗರು ಮೌನವಾಗಿದ್ದಾರೆ. ಆದರೆ ಕರ್ನಾಟಕದಲ್ಲಿ ಇದೇ ಮೋಹನದಾಸ ಪೈಯಂತವನು ಕೊಬ್ಬಿ ಸರಕಾರದ ವಿರುದ್ಧವೇ ಮಾತನಾಡುತ್ತಾನೆ. ಜನರ ತೆರಿಗೆ ಹಣದ ಪಾಲಾದ ಕೋಟ್ಯಾಂತರ ತೆರಿಗೆ ಹಣ ಇವರಿಗಾಗಿ ಮನ್ನಾ ಆಗುತ್ತದೆ. ಅಂಕೋಲಾದ ರಾಷ್ಟ್ರೀಯ ಹೆದ್ದಾರಿಯೇ ಇವರ ವ್ಯವಹಾರಕ್ಕೋಸ್ಕರ ತಿರುಗುತ್ತದೆ. ಅವರ ಭಾಷೆಯ ಅಕಾಡೆಮಿಗಾಗಿ ಕೋಟ್ಯಾಂತರ ಹಣ ಬಂದು ಬೀಳುತ್ತದೆ. ಇನ್ನೂ ಏನೇನೋ ಭರ್ಜರಿ ಲಾಭಗಳು ಸಿಗುತ್ತವೆ. ಅದರ ಜೊತೆಗೆ ಮಹದಾಯಿ ನೀರಿನ ಜೊತೆ ಚೆಲ್ಲಾಟವಾಡುತ್ತಾ ಮುಖ್ಯಮಂತ್ರಿಗಳ ಸಭೆಗೂ ಬಾರದೇ ಕಂತ್ರಿಯಂತೆ ಕಳ್ಳಾಟವಾಡಿ ಕನ್ನಡಿಗರಿಗೆ ದ್ರೋಹ ಬಗೆಯುವ ಅಲ್ಲಿನ ಮುಖ್ಯಮಂತ್ರಿ.

ಕರ್ನಾಟಕ ಕರಾವಳಿ ಜಿಲ್ಲೆಗಳ ಪ್ರಮುಖ ಊರುಗಳಲ್ಲಿ ಪ್ರತ್ಯೇಕ ದೇವಸ್ಥಾನ ಕಟ್ಟಿಕೊಂಡು ಬೆಕ್ಕಿನ ಬಿಡಾರ ಬೇರೆ ಎಂಬಂತೆ ಕಾರ್ಯ ನಿರ್ವಹಿಸುವ ಈ ಸಮುದಾಯದ ಕಾರ್ಯಕ್ರಮದಲ್ಲಿ ಊಟದ ಆಸೆಗೆ ನುಗ್ಗುವ ಶೂದ್ರ ವ್ಯಕ್ತಿಗಳನ್ನು ಪಂಕ್ತಿಯಿಂದ ಎಬ್ಬಿಸದೇ ಉಪಾಯವಾಗಿ ಎಬ್ಬಿಸಿ ಕೋಣೆಯೊಳಗೆ ಕರೆದೊಯ್ದು ಇನ್ಯಾವತ್ತೂ ಆತ ತಲೆಹಾಕದಂತೆ ಬಾಸುಂಡೆ ಏಳುವಂತೆ ಬಡಿದಂತಹ ಉದಾಹರಣೆಗಳೆಷ್ಟೋ ಇವೆ. ಮೊನ್ನೆ ಸಾಮಾಜಿಕ ಜಾಲತಾಣಗಳ 'ಉಡುಪಿ ಚಲೋ' ವಿರೋಧಿ ಗುಂಪು ಮತ್ತು ಕನಕ ನಡೆಯ ಯುವ ಬ್ರಿಗೇಡ್ ಪಡೆಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡದ್ದಲ್ಲದೇ ಮಂಗಳೂರಿನ ಸ್ವಾಭಿಮಾನಿ ನಡೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ದಲಿತ ನಾಯಕ ಕೊಂಚಾಡಿಯವರ ಮೇಲೆ ಸಂಬಂಧವಿಲ್ಲದ ಅನವಶ್ಯಕ ಮಾತುಗಳ ತೀವ್ರ ದಾಳಿ ನಡೆಸಲಾಯಿತು. ಕೊಂಚಾಡಿಯವರಿಗೆ ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ಅವರ ಬಾಯಿಯಿಂದ "ಜಿಗ್ನೇಶ್ ಮೇವಾನಿಯವರ 'ಉಡುಪಿ ಮುತ್ತಿಗೆ' ಮಾತು ಉಡುಪಿ ಚಲೋ ಅಭಿಪ್ರಾಯವಲ್ಲ" ಎಂಬ ಮಾತು ಬರುವಂತೆ ಒತ್ತಡ ಹಾಕಿದ್ದು ಒಬ್ಬ ಕೊಂಕಣಿ ಪತ್ರಕರ್ತನೇ ಅನ್ನೋದು ಸುದ್ದಿ.

ಕರ್ನಾಟಕದ ಸಾರಸ್ವತ ವಲಯವನ್ನು ದಂಗುಬಡಿಸಿದ ಕಲ್ಬುರ್ಗಿಯವರ ಹತ್ಯೆ ನಡೆಸಿದ ಸನಾತನ ಸಂಸ್ಥೆಯ ತವರು ಇದೇ ಕೊಂಕಣಿಗಳ ಗೋವಾ ರಾಜ್ಯ, ಮುಖ್ಯವಾಗಿ ಕರಾವಳಿ ಕರ್ನಾಟಕದಲ್ಲಿ ಇದೇ ಸಮುದಾಯದವರ ಆಶ್ರಯದಲ್ಲಿ ಇದೇ ಸನಾತನ ಸಂಸ್ಥೆ ತನ್ನ ವಿಷಪೂರಿತ ಪತ್ರಿಕೆ ಹಾಗು ಸಭೆಗಳ ಮೂಲಕ ಕಾರ್ಯಪ್ರವರ್ತವಾಗಿ ಸಮುದಾಯಗಳನ್ನು ಒಡೆಯುವುದರಲ್ಲಿ ನಿರತವಾಗಿದೆ.

ನಾಡಿದ್ದು ಡಿ 31 ರಂದು ನಗರದ ಬೀದಿಗಳಲ್ಲಿ ಈ ಸನಾತನ ಸಂಸ್ಥೆಯ ಪೋಸ್ಟರುಗಳು ಕಾಣಿಸಿಕೊಂಡು 'ಜನವರಿ 1 ಹೊಸವರ್ಷ ಆಚರಿಸಬೇಡಿ. ಅದು ದುಷ್ಟತನದ ಪ್ರತೀಕ' ಎಂದು ಪ್ರತಿ ವರ್ಷದ ಚಾಳಿಯಂತೆ ಕರೆ ಕೊಡುತ್ತದೆ.

ಒಟ್ಟಾರೆ ಇಂದಿಗೆ ಸಲ್ಲದ ಟಿಪ್ಪುವಿನ ಸತ್ಯ ಅಥವ ಕಟ್ಟುಕಥೆಗಳ (ಕಳೆದ ವರ್ಷ ಓರ್ವ ಜನಿವಾರಿ "ಮಂಗಳೂರಿನ ಬಿಕರ್ನ ಕಟ್ಟೆ ಊರು ಟಿಪ್ಪು ಸಾವಿರಾರು ಕ್ರೈಸ್ತರನ್ನು ಕೊಂದ ಬೀಕರ ನ್ಯಾಯದ ಕಟ್ಟೆ" ಎಂಬ ಕಥೆ ಕಟ್ಟಿ ಟಿಪ್ಪುವಿನ ಮೇಲೆ ದ್ವೇಷ ಹಚ್ಚಲು ಹೊರಟಿದ್ದ) ವಿಚಾರ ಬಿಟ್ಟು ಗೋವಾದಿಂದ ಹಿಡಿದು ಕರ್ನಾಟಕದಲ್ಲಿ ವಲಸೆಬಂದು ನೆಲೆಸಿರುವ ನಿಮ್ಮ ಸಮುದಾಯದ ವಿಭಜಕ ಮನಸ್ಥಿತಿಯವರ ಬಗ್ಗೆ ಮೊದಲು ಚಿಂತಿಸಿ ಸರಿಪಡಿಸಿದರೆ ಕರಾವಳಿಯ ಸೌಹಾರ್ದ ಸೊಗಡು ಮತ್ತೆ ಜೀವಂತವಾದೀತು. ಯಾಕೆಂದರೆ, ಕೊಂಕಣಿಗರು ಇಲ್ಲಿ ಕಾಲಿಡುವ ಎಷ್ಟೋ ಶತಮಾನಗಳ ಮೊದಲು ಮುಸಲ್ಮಾನರು ಇಲ್ಲಿನ ಜನರೊಂದಿಗೆ ಒಂದಾಗಿ ಬೆರೆತು ಬಾಳಿದಂತವರು. ಬಡಪಾಯಿ ದಲಿತ ಹಿಂದುಳಿದವರನ್ನು ಛೂಬಿಟ್ಟು ಈಗ ಅವರನ್ನು ಓಡಿಸುವುದೆಂದರೆ ಅದು ಸುಲಭವೇ ಪೈ ಮಾಮ!!

- ಓದುಗ, ಬೆಂಗಳೂರು

ಜೈನರನ್ನು ವೀರಮಹೇಶ್ವರ ಪಂಥದವರು ಕೊಂದಿದ್ದರು

ಉತ್ತರ ಕರ್ನಾಟಕದ ಬೆಳಗಾವಿ, ವಿಜಾಪುರ, ಬೀದರ್ ಮತ್ತು ಮಹಾರಾಷ್ಟ್ರದ ಸೊಲ್ಲಾಪುರ, ಸಾಂಗ್ಲಿ ಜಿಲ್ಲೆಗಳಲ್ಲಿ ಕನ್ನಡದ ಅವಸಾನಕ್ಕೆ ಮೂಲ ಕಾರಣ ಶಿವಾಜಿ ಮತ್ತು ಪೇಶ್ವೆ ಮರಾಠಾ ರಾಜರು. ಅವರು ಕನ್ನಡವನ್ನು ದ್ವೇಷಿಸುತ್ತಿದ್ದರು. ಅದನ್ನೇ ಈಗಿನ ಬೆಳಗಾವಿಯ ಎಮ್.ಈ.ಎಸ್ ಪುಂಡರು ಮುಂದುವರಿಸಿದ್ದಾರೆ. ಅದೇ ಪ್ರಕಾರ ನಾವು ಕನ್ನಡಿಗರೂ ಹೆಮ್ಮೆ ಪಡುವ ಕೃಷ್ಣದೇವರಾಯ ತೆಲುಗು ಪ್ರೇಮಿಯಾಗಿದ್ದ. ಅವನ ಕಾಲದಲ್ಲಿ ವಿಜಯನಗರ ರಾಜ್ಯದಲ್ಲಿ ಮತ್ತು ಅವನ ಆಸ್ಥಾನದಲ್ಲಿ ಕೇವಲ ತೆಲುಗು ಅಧಿಕಾರಿಗಳಿಗೆ ಹಾಗೂ ತೆಲುಗು ಸಾಹಿತಿಗಳಿಗೆ ಮಾತ್ರ ಪ್ರೋತ್ಸಾಹ ಸಿಕ್ಕಿತ್ತು. ಕಳಿಂಗ (ಈಗಿನ ಒಡಿಶಾ) ರಾಜ್ಯವನ್ನೂ ಧ್ವಂಸ ಮಾಡಿದ ಕೃಷ್ಣದೇವರಾಯ ಅಲ್ಲಿಯೂ ಒರಿಯಾ ಭಾಷೆಯನ್ನು ಹತ್ತಿಕ್ಕಿ ತೆಲುಗು ಭಾಷೆಗೆ ಮಹತ್ವ ಕೊಟ್ಟ. ಕಳಿಂಗ ರಾಜ್ಯದಲ್ಲಿ ಕೃಷ್ಣದೇವರಾಯ ಲಕ್ಷಾಂತರ ಜನರನ್ನು ಕೊಲ್ಲಿಸಿದ ಕರಾಳ ಸತ್ಯ ವಿಜಯನಗರದ ಇತಿಹಾಸದಲ್ಲಿಯೇ ದಾಖಲಾಗಿದೆ.

ಟಿಪ್ಪು ಕನ್ನಡದ ಪ್ರೋತ್ಸಾಹಕನಾಗಿರಲಿಲ್ಲ ಎಂದು ಹೇಳುವವರು ಮರಾಠಾ ಮತ್ತು ವಿಜಯನಗರದ ತೆಲುಗು ರಾಜರ ಭಾಷಾ ನೀತಿಯನ್ನೂ ಅಧ್ಯಯನ ಮಾಡಬೇಕು.

ಟಿಪ್ಪು ಭಾಷಾಂಧ, ಮತಾಂಧ ಎಂದು ಹೇಳುವ ಡಾ.ಚಿದಾನಂದ ಮೂರ್ತಿಗಳು ಲಿಂಗಾಯತರು (ವೀರಶೈವರು). ಅವರಿಗೆ ಗೊತ್ತಿರುವಂತೆ ಒಂದು ಕಾಲದಲ್ಲಿ ಉತ್ತರ ಕರ್ನಾಟಕದ 20% ಜನಸಂಖ್ಯೆ ಜೈನರಾಗಿದ್ದರು. ಆದರೆ ಇಂದು ಕನ್ನಡ ಜೈನರ ಸಂಖ್ಯೆ (ಮಾರ್ವಾಡಿ ಹೊರತುಪಡಿಸಿ) ಉತ್ತರ ಕರ್ನಾಟಕದಲ್ಲಿ 1% ಗೂ ಕಡಿಮೆ ಇದೆ. ಇದು ಯಾಕೆ ಹೀಗಾಯಿತು? ಇಷ್ಟೊಂದು ದೊಡ್ಡ ಸಂಖ್ಯೆಯ ಜೈನರೆಲ್ಲಾ ಏನಾದರು? ಉತ್ತರ ಸುಲಭ, ಜೈನರೆಲ್ಲಾ ಲಿಂಗಾಯತರಾಗಿ ಮತಾಂತರ ಹೊಂದಿದರು. ಇದು ಸ್ವಇಚ್ಛೆಯ ಮತಾಂತರ ಆಗಿರಲಿಲ್ಲ, ಉತ್ತರ ಕರ್ನಾಟಕದ ಲಕ್ಷಾಂತರ ಜೈನರನ್ನೆಲ್ಲಾ ಬಲಾತ್ಕಾರದಿಂದ ವೀರಶೈವ ಧರ್ಮಕ್ಕೆ ಮತಾಂತರಿಸಲಾಯಿತು.

ಈ ಬಾರಿ ಮತಾಂತರದ ಬಗ್ಗೆ ಜೈನ ಸಾಹಿತಿ ಅನುಪಮಾ ನಿರಂಜನ್ ಸತ್ಯ ಶೋಧನೆ ಮಾಡಿದ್ದಾರೆ. ದಿವಂಗತ ಡಾ.ಕಲಬುರ್ಗಿಯವರು ಸಂಶೋಧನೆ ಮಾಡಿ ಸತ್ಯ ಒಪ್ಪಿಕೊಂಡಿದ್ದಾರೆ. ಸುಮಾರು ಆರು ವರ್ಷಗಳ ಹಿಂದೆ ಧಾರವಾಡ ಜಿಲ್ಲೆಯ ಅಣ್ಣಿಗೇರಿಯಲ್ಲಿ ಸಿಕ್ಕ ಒಂದೇ ಸಮಾಧಿಯಲ್ಲಿ ಸಾಲಾಗಿ ಇಟ್ಟ ಸಾವಿರಾರು ತಲೆಬುರುಡೆಗಳು 700 ವರ್ಷಗಳ ಹಿಂದೆ ಜೈನರನ್ನು ವೀರಮಹೇಶ್ವರ ಪಂಥದವರು ಸಾರಾಸಗಟಾಗಿ ಕೊಂದು ಹೂತ ಸ್ಥಳವಾಗಿತ್ತು ಎಂದು ಸ್ವತಃ ವೀರಶೈವರಾದ ಡಾ.ಕಲಬುರ್ಗಿಯವರು ಆಗ ಹೇಳಿದ್ದರು. ಆದರೆ ಚಿದಾನಂದ ಮೂರ್ತಿಯವರು ಯಾಕೆ ತನ್ನದೇ ವೀರಶೈವ ಧರ್ಮಕ್ಕೆ ಸಂಬಂಧಪಟ್ಟ ಈ ವಿಷಯ ಸಂಶೋಧನೆ ಮಾಡುತ್ತಿಲ್ಲ ಗೊತ್ತೇ? ಯಾಕೆಂದರೆ ಅದರಿಂದ ರಾಜಕೀಯ ಲಾಭ ಏನೂ ಇಲ್ಲ, ಉಲ್ಟಾ ಉತ್ತರ ಕರ್ನಾಟಕದಲ್ಲಿ ಇಂದು ಬಹುಸಂಖ್ಯಾತರಾಗಿರುವ ಲಿಂಗಾಯತರ ವೈರ ಕಟ್ಟಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಕೇವಲ ಟಿಪ್ಪುವಿನ ಮತಾಂತರದ ಬಗ್ಗೆ ಮಾತ್ರ ಚಿದಾನಂದ ಮೂರ್ತಿಗಳ ಸಂಶೋಧನೆ ನಡೆದಿದೆ ಅಷ್ಟೇ. ಟಿಪ್ಪು ಕೊಂದ ಜನರ ಲೆಕ್ಕ ಇಟ್ಟವರು ಮರಾಠಾ ರಾಜರು ಕೊಂದ ಜನರ ಲೆಕ್ಕ ಇಟ್ಟಿದ್ದಾರೆಯೇ? ಮರಾಠರ ಕಾಲದಲ್ಲಿ ಅತೀಹೆಚ್ಚು ನರಮೇಧವಾಗಿದೆ. ಕ್ರೌರ್ಯದಲ್ಲಿ ಪೇಶ್ವೆಗಳನ್ನು ಮೀರಿಸುವ ರಾಜ ಇನ್ನೊಬ್ಬನಿಲ್ಲ, ನಮ್ಮದೇ ತುಳುವ ವಂಶದ 'ತೆಲುಗು-ಬದ್ಧ' ಕೃಷ್ಣ ದೇವರಾಯ ಕಳಿಂಗ ರಾಜ್ಯಕ್ಕೆ ಮುತ್ತಿಗೆ ಹಾಕಿದಾಗ ಕೊಂದ ಲಕ್ಷ ಲಕ್ಷ ಜನರ ಲೆಕ್ಕ ಯಾರೂ ಇಟ್ಟಿಲ್ಲ ಯಾಕೆ? ಒಡಿಶಾದವರು ಇಂದ... ಕೃಷ್ಣದೇವರಾಯನನ್ನು ಅತೀ ದುಷ್ಟ ರಾಜ ಎ... ಪರಿಗಣಿಸುತ್ತಾರೆ. ಇದಕ್ಕೇ ಹೇಳುವುದು ಒಂದೇ ವಿ... ಒಂದೇ ಘಟನೆ ಆದರೆ ಎರಡು ತದ್ವಿರುದ್ಧ ದೃಷ್ಟಿಕೋ... ಎಂದು. ನಮ್ಮವರೇ ಮಾಡಿರುವ ನರಮೇಧ, ... ಆದರೆ ಇತರ ಧರ್ಮದವರು ದಂಗೆ ಎದ್ದ ... ಪಾಳೆಗಾರರನ್ನು ಮಣಿಸಿದರೆ ಮಾತ್ರ ಅದು ತಪ್ಪು, ಇದು... ನಿಷ್ಪಕ್ಷ ಐತಿಹಾಸಿಕ ಸಂಶೋಧನೆ ಚಿದಾನ... ಮೂರ್ತಿಯವರೇ?

- ಅಭಿಷೇಕ್ ಪಿ ಜೈನ್, ...

ಸಿದ್ದುಗೆ ಥ್ಯಾಂಕ್ಸ್, ರೇಷ್ಮೆಗೆ ಧಿಕ್ಕಾರ


ಟಿಪ್ಪು ವಿವಾದಕ್ಕಾಗಿ ಸಿದ್ದರಾಮಯ್ಯನವರಿಗೆ ಥ್ಯಾ... ಯಾಕೆಂದರೆ ಟಿಪ್ಪು ಮೊಟ್ಟ ಮೊದಲ ಬಾರಿಗೆ ... ಹುಳು ಸಾಕಣೆ ಮತ್ತು ರೇಷ್ಮೆ ಬಟ್ಟೆ ಉತ್ಪಾದನೆ... ಭಾರತಕ್ಕೆ ಪರಿಚಯಿಸಿದ. ಹಾಗಾಗಿ ಟಿಪ್ಪು ಮಾ... ಪ್ರತಿಯೊಂದು ಒಳ್ಳೆಯ ಕೆಲಸವನ್ನೂ ಬಿಜೆಪಿ ... ಸಂಘ ಪರಿವಾರ ದ್ವೇಷಿಸುವುದರಿಂದ ದೇಶದ... ಮಹಿಳೆಯರು ಸಿಲ್ಕ್ ಸೀರೆ ಉಡಬಾರದು ಎಂದು ... ಸಂಘಿಗಳು ಹೇಳಿದ್ದಾರೆ. ಅವರದೇ ದುರ್ಗಾವಾಹಿನಿ ... ಸಮರ್ಥಿಸಿದೆ. ಹಾಗಾಗಿ ತಮ್ಮ ತಮ್ಮ ಹೆಂಡ... ದುಬಾರಿ ಸಿಲ್ಕ್ ಸೀರೆ ಕೊಡಿಸುವುದು ತಪ್ಪಿತಲ್ಲಾ ... ಎಲ್ಲಾ ಹಿಂದೂ ಗಂಡಂದಿರು ಖುಷಿಯಾಗಿ... ಟಿಪ್ಪುವಿನಿಂದ ಶುರುವಾದ ಸಿಲ್ಕ್ ಸೀರೆ ಉಡು... ದೇಶದ್ರೋಹ ಎಂದು ಆರ್‌ಎಸ್‌ಎಸ್ ಸದ್ಯದಲ್ಲಿ... ಫರ್ಮಾನು ಹೊರಡಿಸಲಿದೆಯಂತೆ. ಹಾಗಾಗಿ ಮು... ಚುನಾವಣೆಯಲ್ಲಿ ಎಲ್ಲಾ ಮಧ್ಯಮ ವರ್ಗದ ಗಂಡ... ವೋಟು ಬಿಜೆಪಿಗೆ ಬೀಳುವುದು ಖಚಿತ. ಇದಕ್ಕಾಗಿ ... ಸಿದ್ದರಾಮಯ್ಯನವರಿಗೆ ಋಣಿಯಾಗಿರಬೇಕು.

ಆದರೆ ರೇಷ್ಮೆಸೀರೆ ಪ್ರಿಯ ಮಹಿಳೆಯರು ಮುನಿ... ಮಾತ್ರ ಬಿಜೆಪಿಗೆ ಅಪಾಯವಿದೆ! ಬಿಜೆಪಿಯವರೇ ಟಿ... ರೇಷ್ಮೆ ವಿರುದ್ಧ ನೀವು ನಿಮ್ಮ ಹೋರಾಟ ಜಾರಿಯ... ನಾವು ಮಧ್ಯಮ ವರ್ಗದ ಗಂಡಸರು ನಿಮ್ಮ ಬೆಂಬಲಕ್ಕೆ... ಭಯಪಡಬೇಡಿ. ಧಿಕ್ಕಾರ ಧಿಕ್ಕಾರ! ಟಿಪ್ಪುವಿಗೆ ಧಿ... ಟಿಪ್ಪು ತಂದ ರೇಷ್ಮೆಗೆ ಧಿಕ್ಕಾರ! ಗಂಡನ ಕಿಸೆಗೆ... ಮಾಡುವ ಕಾಂಜೀವರಂ ಸೀರೆಗೆ ಧಿಕ್ಕಾರ!!


ಎಲ್ಲಾ ದೇವಸ್ಥಾನಗಳಲ್ಲಿ ದೇವರ ಮೂರ್ತಿಗೆ ... ಬಟ್ಟೆ ಉಡಿಸುವುದು ಇನ್ನು ಮುಂದೆ ವರ್ಜ್ಯ, ಅಚ... ಸಿಲ್ಕ್ ಸೀರೆ ತುಂಡು ಮಾಡಿ ಪಂಚೆಯ... ಉಪಯೋಗಿಸುವುದೂ ವರ್ಜ್ಯ. ಯಾಕೆಂದರೆ ... ನೂಲನ್ನು ಲಕ್ಷಾಂತರ ಜೀವಂತ ಹುಳು ಬೇ... ತಯಾರಿಸಿರುವುದರಿಂದ ಅದು ತಾಮಸಿಕ ... ಹೊಂದಿರುತ್ತದೆ. ಇಂತಹ ನಾನ್-ವೆಜಿಟೇರಿಯನ್... ಹಿಂದೂ ದೇವರಿಗೆ ವರ್ಜ್ಯ. ಇಸ್ಕಾನ್‌ನವರು ರಾಧ... ಮೂರ್ತಿಗಳಿಗೂ ಪೀತಾಂಬರ ಉಡಿಸುವುದು ... ನಮೋ ಭಕ್ತರೇ, ನೀವೂ ರೇಷ್ಮೆ ವಸ್ತ್ರ ನಿಷೇಧಿಸಿ ... ಟಿಪ್ಪು ಮೇಲೆ ಸೇಡು ತೀರಿಸಿ, ನಾವು ನಿಮ್ಮೊಂದಿಗಿ...

ಪುರಾಣಕಾಲದಲ್ಲಿ ರೇಷ್ಮೆ ಅಂದರೆ ಏನ... ಭಾರತೀಯರಿಗೆ ಗೊತ್ತೇ ಇರಲಿಲ್ಲ. ಈ ಬಗ್ಗೆ ರಾಮಾ... ಮಹಾಭಾರತದಲ್ಲಿ ಎಲ್ಲಿಯೂ ಉಲ್ಲೇಖ ಇಲ್ಲ, ಹಾಗಿದ್ದು... ಶ್ರೀಕೃಷ್ಣ ಮತ್ತು ಶ್ರೀರಾಮ ದೇವರಿಗೆ ಪೀತಾಂಬರ... ಎಂದು ಕರೆಯುವುದೇ ತಪ್ಪು, ಪೀತಾಂಬರಧಾರಿ ... ಹಿಂದೂ ದೇವರಿಗೆ ಕರೆಯುವ ಪದ್ಧತಿ ಟಿಪ್ಪುವಿನ ಕಾಲ... ಅಂದರೆ ಕೇವಲ ಹಿಂದಿನ 300 ವರ್ಷಗ... ಶುರುವಾಗಿರಬೇಕು. ಅದಕ್ಕಾಗಿ ಎಲ್ಲಾ ಹಿಂದೂ ದೇವ... ಪೀತಾಂಬರ ವರ್ಜ್ಯ, ದುರ್ಗಾಪರಮೇಶ್ವರಿ ದೇವಿಗೂ ... ಸೀರೆ ಹರಕೆ ಹೊರುವುದು ವರ್ಜ್ಯ.

- ಉದಯರಾಜ್ ಬಿ ಆಳ್ವಾ, ಕಾಡ...



ರಿಕ್ತದ ಬಗ್ಗೆ ನಮ್ಮೆಲ್ಲರಿಗೂ ನಿರೀಕ್ಷೆ ಇದೆ: ಸಂಚಾರಿ ವಿಜಯ್



ಇದೇ ಶುಕ್ರವಾರ ಸಂಚಾರಿ ವಿಜಯ್ ನಟನೆಯ 'ರಿಕ್ತ' ಚಿತ್ರ ರಿಲೀಸ್ ಆಗುತ್ತಿದೆ. ಇದು ಇವರ ಮೊಟ್ಟಮೊದಲ ಕಮರ್ಷಿಯಲ್ ಚಿತ್ರವೆಂದೇ ಬಿಂಬಿಸಲಾಗುತ್ತಿದೆ. ಈ ಚಿತ್ರದಲ್ಲಿ ನಾಲ್ಕು ಶೇಡ್‌ಗಳನ್ನು ಹೊಂದಿರುವ ಪಾತ್ರವನ್ನು ನಿರ್ವಹಿಸಿರುವ ವಿಜಯ್ ಇಲ್ಲಿ ತಮ್ಮ ಪಾತ್ರ ಮತ್ತು ಚಿತ್ರದ ಬಗ್ಗೆ ಮಾತಾಡಿದ್ದಾರೆ.

'ನಾನು ಅವನಲ್ಲ ಅವಳು' ಚಿತ್ರದ ನಂತರ ಸಂಚಾರಿ ...ಜಯ್ ಮತ್ತಾವ ಪಾತ್ರದಲ್ಲಿ ಅಭಿನಯಿಸಬಹುದು ಎಂಬ ...ಕ್ಯೂರಿಯಾಸಿಟಿ ಎಲ್ಲರದ್ದಾಗಿತ್ತು. 'ರಿಕ್ತ' ಚಿತ್ರಕ್ಕೆ ಸಹಿ ಮಾಡುವ ...ಮೂಲಕ ಅವರು ಅಚ್ಚರಿಯನ್ನೂ ಮೂಡಿಸಿದ್ದರು. ಇದೇ ...ಶುಕ್ರವಾರ ರಿಕ್ತ ರಾಜ್ಯಾದ್ಯಂತ ತೆರೆಕಾಣುತ್ತಿದೆ. ಜತೆಗೆ ವ್ಯಾಪಾರಿ ...ಣ ಇರುವ ಸಿನಿಮಾ ಇದಾಗಿದ್ದರಿಂದ ಸ್ವತಃ ವಿಜಯ್‌ಗೂ ...ತ್ರದ ಬಗ್ಗೆ ನಿರೀಕ್ಷೆ ಹೆಚ್ಚಿದೆ. ಇನ್ನೂ ಹಲವು ಚಿತ್ರಗಳಲ್ಲಿ ...ಟಿಸುತ್ತಿರುವ ವಿಜಯ್ ಆ ಸಿನಿಮಾಗಳ ಬಗ್ಗೆಯೂ ...ಲ್ಲಿ ಮಾತಾಡಿದ್ದಾರೆ.

* ನೀವು ನಾಯಕರಾಗಿ ನಟಿಸುತ್ತಿರುವ ಮೂರನೇ ...ನಿಮಾವಿದು. 'ರಿಕ್ತ' ಚಿತ್ರದ ಬಗ್ಗೆ ಏನು ಹೇಳುತ್ತೀರಿ?

ನಿಜ ಹೇಳುತ್ತೇನೆ, 'ರಿಕ್ತ'ದ ಬಗ್ಗೆ ಏನು ಮಾತಾಡಬೇಕೊ ...ತ್ತಿಲ್ಲ. 'ಹರಿವು' ಮತ್ತು 'ನಾನು ಅವನಲ್ಲ ಅವಳು' ...ಮಾದ ಪಾತ್ರಗಳು ಬೇರೆ ಇದ್ದವು. 'ರಿಕ್ತ' ಚಿತ್ರದ ...ಾತ್ರ ಮತ್ತೊಂದು ರೀತಿಯದ್ದು. ಜನರು ಹೇಗೆ ಈ ಪಾತ್ರವನ್ನು ಸ್ವೀಕರಿಸುತ್ತಾರೆ ಎಂಬ ಕುತೂಹಲ ನನಗೇ ಇದೆ. ಹೊಸ ನಿರ್ದೇಶಕರು. ಹೊಸ ಆಲೋಚನೆ. ಈ ಪಾತ್ರವನ್ನು ನಾನು ಮಾಡಬಲ್ಲೆನಾ ಎಂಬ ಪ್ರಶ್ನೆಯನ್ನು ನನಗೇ ಹಾಕಿದ ಚಿತ್ರವಿದು. ಹಾಗಾಗಿ ಜನರೇ ಸಿನಿಮಾದ ಬಗ್ಗೆ ಮಾತಾಡಲಿ.

* ನಿಮ್ಮ ಮೊದಲ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂತು. ಎರಡನೇ ಸಿನಿಮಾದ ನಟನೆಗಾಗಿ ನಿಮಗೆ ರಾಷ್ಟ್ರ ಪ್ರಶಸ್ತಿ ಸಿಕ್ಕಿತು. 'ರಿಕ್ತ'ದಲ್ಲಿ?

ನಾನು ಪ್ರಶಸ್ತಿಗಾಗಿ ಯಾವುದೇ ಕೆಲಸ ಮಾಡುವುದಿಲ್ಲ. ಆಯಾ ಸಿನಿಮಾಗಳ ಕತೆ ಮತ್ತು ಪಾತ್ರಕ್ಕಿರುವ ಹಿನ್ನೆಲೆಗಾಗಿ ಪ್ರಶಸ್ತಿಗಳು ಬಂದಿವೆ. ಏನೇ ಗೌರವ ಸಿಕ್ಕರೂ ನಾನು ಅದನ್ನು ಚಿತ್ರತಂಡಕ್ಕೆ ಅರ್ಪಿಸಿದ್ದೇನೆ. ಯಾಕೆಂದರೆ ಸಿನಿಮಾ ಅನ್ನುವುದು ಒಬ್ಬರೇ ಮಾಡುವಂಥದ್ದು ಅಲ್ಲ. ಎಲ್ಲರೂ ಸೇರಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಾಗಲೇ ಚಿತ್ರವಾಗೋದು. ನಾವು ಮುಖವಾಣಿಯಾಗಿರು ತ್ತೇವಷ್ಟೆ. 'ರಿಕ್ತ' ಸಿನಿಮಾಗೆ ಏನೇ ಪ್ರಶಂಸೆ ಬಂದರೂ ಅದು ಇಡೀ ತಂಡಕ್ಕೆ ಸಲ್ಲಬೇಕು.

* 'ರಿಕ್ತ' ಸಿನಿಮಾವನ್ನು ಒಪ್ಪಿಕೊಳ್ಳಲು ಕಾರಣವೇನು?

ಆಗಲೇ ಹೇಳಿದಂತೆ ಸಿನಿಮಾದ ಕತೆಯೇ ವಿಭಿನ್ನವಾಗಿದೆ. ಇಲ್ಲಿ ನಾನು ನಾಲ್ಕು ಶೇಡ್ ಇರುವ ಪಾತ್ರ ನಿರ್ವಹಿಸುತ್ತಿದ್ದೇನೆ. ಲವರ್‌ಬಾಯ್, ದೆವ್ವ ಹೀಗೆ ನಾಲ್ಕು ಗೆಟಪ್ ಇಲ್ಲಿವೆ. ಇಡೀ ಕತೆಯಲ್ಲಿ ಅವುಗಳು ಬೆಸೆದುಕೊಂಡ ರೀತಿಗೆ ಬೆರಗಾದೆ. ಅಲ್ಲದೇ, ನಿರ್ದೇಶಕರು ಸಿನಿಮಾ ಕಟ್ಟಿದ ರೀತಿಯೂ ಚೆನ್ನಾಗಿದೆ. ಪಾತ್ರ ಒಪ್ಪಿಕೊಳ್ಳುವ ಮುಂಚೆ ನಿರ್ದೇಶಕ ಅಮೃತಕುಮಾರ್ ನನಗೆ ಹಾಡೊಂದನ್ನು ಕೇಳಿಸಿದರು. ಅದು ವಿಭಿನ್ನವಾಗಿ ನನಗೆ ಕೇಳಿಸಿತು. ಅಲ್ಲದೇ ನಿರ್ಮಾಪಕ ಅರುಣ್‌ಕುಮಾರ್ ಕೂಡ ಸಿನಿಮಾ ಬಗೆಗೆ ತುಂಬಾನೇ ಕಾಳಜಿ ಇಟ್ಟುಕೊಂಡವರು. ಈ ಎಲ್ಲಾ ಕಾರಣಗಳಿಂದಾಗಿ ಸಿನಿಮಾ ಒಪ್ಪಿಕೊಂಡೆ.



* ಇದು ನಿಮ್ಮ ಮೊದಲ ಕಮರ್ಷಿಯಲ್ ಸಿನಿಮಾ ಎಂದು ಬಣ್ಣಿಸಲಾಗುತ್ತಿದೆ. ಈ ಕುರಿತು ಏನು ಹೇಳುತ್ತೀರಿ?

ಗಲ್ಲಾಪೆಟ್ಟಿಗೆಯಲ್ಲಿ ಯಾವ ಚಿತ್ರಗಳು ದುಡ್ಡು ಮಾಡುತ್ತವೆಯೋ ಎಲ್ಲವೂ ಕಮರ್ಷಿಯಲ್ ಚಿತ್ರಗಳು ಎಂದು ನಂಬಿದವನು ನಾನು. ಈ ಚಿತ್ರಕ್ಕೆ ಹೆಚ್ಚು ದುಡ್ಡು ಖರ್ಚು ಮಾಡಿದ್ದಾರೆ. ಹಾಗಾಗಿಯೇ ಕಮರ್ಷಿಯಲ್ ಚಿತ್ರ ಎಂದು ಕರೆಯುತ್ತಿದ್ದಾರೆ. ಸಿನಿಮಾ ಯಾವುದೇ ಆಗಿರಲಿ, ಪ್ರೇಕ್ಷಕರಿಗೆ ಉತ್ತಮ ಮನರಂಜನೆ ನೀಡಲು ಮತ್ತು ನಿರ್ಮಾಪಕರಿಗೆ ದುಡ್ಡು ತಂದು ಕೊಡಲಿ.

* 'ರಿಕ್ತ' ಹಾರರ್ ಸಿನಿಮಾ ಎನ್ನುವ ಮಾತಿದೆ. ಇಂತಹ ಸಿನಿಮಾಗಳು ಕನ್ನಡ ಸಿನಿಮಾ ರಂಗದಲ್ಲಿ ಹೆಚ್ಚಾಗುತ್ತಿವೆಯಲ್ಲ?

ಈ ಚಿತ್ರದಲ್ಲಿ ಹಾರರ್ ಅಂಶ ಇರುವುದು ನಿಜ. ಹಾಗಂತ ಹೆದರಿಸುವ ಚಿತ್ರವಲ್ಲ. ಅಬ್ಬರದ ಮ್ಯೂಸಿಕ್ ಹಾಕಿ ಯಾರನ್ನೂ ಭಯ ಪಡಿಸುವುದಿಲ್ಲ. ಇದೊಂದು ರೀತಿ ಮೆಲೋಡಿ ಹಾರರ್ ಎಂದು ಕರೆಯುತ್ತೇನೆ. ಪ್ರೇಮಕತೆಯನ್ನು ಹೇಳುತ್ತಲೇ ಥ್ರಿಲ್ ನೀಡುವಂತಹ ಚಿತ್ರವಿದು. ಹಿನ್ನೆಲೆ ಸಂಗೀತ ಕೂಡ ಹಾಗೆಯೇ ಇದೆ. ಎಲ್ಲಿಯೂ ಅಬ್ಬರತೆ ಇಲ್ಲ. ಹಾಗಾಗಿ ಇದನ್ನು ಪಕ್ಕಾ ಹಾರರ್ ಅಂತ ಕರೆಯುವುದಕ್ಕೆ ಆಗುವುದಿಲ್ಲ. ಸದ್ಯ ಕನ್ನಡ ಸಿನಿಮಾ ರಂಗದಲ್ಲಿ ಹಾರರ್ ಚಿತ್ರಗಳ ಸಂಖ್ಯೆ ಹೆಚ್ಚಾಗಿವೆ ನಿಜ. ಪ್ರೇಕ್ಷಕರು ಅಂತಹ ಚಿತ್ರಗಳನ್ನು ಮೆಚ್ಚಿಕೊಳ್ಳುತ್ತಿದ್ದಾರೆ ಅನ್ನುವ ಕಾರಣಕ್ಕೆ ಇರಬೇಕು.

* 'ಪಿರಂಗಿಪುರ' ಚಿತ್ರದಲ್ಲೂ ನಿಮ್ಮದು ಹೊಸ ರೀತಿಯ ಪಾತ್ರವಂತೆ?

ಹೌದು, ಈ ಸಿನಿಮಾದಲ್ಲೂ ನಾನು ಮೂರು ವಿಭಿನ್ನ ಗೆಟಪ್ ಹಾಕಿದ್ದೇನೆ. ಜನಾರ್ದನ್ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಈ ಸಿನಿಮಾದಲ್ಲಿ 70 ವರ್ಷದ ಮುದುಕನ ಪಾತ್ರವನ್ನೂ ನಾನು ನಿರ್ವಹಿಸುತ್ತಿದ್ದೇನೆ. ಕುತೂಹಲ ಮೂಡಿಸುವ ಸೈಕಾಲಜಿಕಲ್ ಥ್ರಿಲ್ಲರ್ ಡ್ರಾಮ ಇಲ್ಲಿದೆ. ಮನುಷ್ಯನ ಒಳಮನಸ್ಸಿನಲ್ಲಿ ಅಡಗಿರುವ ರಾಕ್ಷಸ ಗುಣ ಮತ್ತು ಮಾನವೀಯ ಗುಣಗಳೆರಡನ್ನೂ ಬಿಚ್ಚಿಡುವ ಮನೋಜ್ಞ ದೃಶ್ಯಗಳು ಇಲ್ಲಿವೆ. ಶೇಕಡ 90ರಷ್ಟು ಚಿತ್ರೀಕರಣ ರಾಜಸ್ಥಾನದ ಮರುಭೂಮಿಯಲ್ಲಿ ಮಾಡುವ ಪ್ಲಾನ್ ಮಾಡಲಾಗಿದೆ. ■

3 ◀◀ ದುರ್ಗದ ಸ್ವಾಮಿ ಅಪರಂಪಾರ

...ಮಿ ಅಪರಂಪಾರ ಕೊಡಗನ್ನು ಪ್ರವೇಶಿಸುತ್ತಾನೆ. ...ಸೂರಿನ ಒಡೆಯರ್ ಜೊತೆಗೆ ಹಳಸಿದ್ದ ಸಂಬಂಧವನ್ನು ...ನರ್ ಸ್ಥಾಪಿಸಿದ್ದೇ ಈತನ ಮುಖಾಂತರ ಎನ್ನಲಾಗಿದೆ. ...ದರೆ ದಿವಾನ್ ಅಪ್ಪಾರಂಡ ಬೋಪು, ತುದಿಯಡ್ಕ ...ಲಕ್ಷ್ಮೀನಾರಾಯಣ ಮೊದಲಾದ ಹಿತಶತ್ರುಗಳ ...ತೂರಿಯೊಂದಿಗೆ 1834ರಲ್ಲಿ ಹಾಲೇರಿ ಸಂಸ್ಥಾನದ ...ನೆಯ ಅರಸ ಚಿಕ್ಕವೀರರಾಜೇಂದ್ರ ಒಡೆಯರ್ ...ದಚ್ಯುತಿಗೊಳ್ಳುತ್ತಾನೆ.

ಕೊಡಗಿನ ಪತನಾನಂತರ ಸ್ವಾಮಿ ಅಪರಂಪಾರ ...ಮ್ಮನಿರುವುದಿಲ್ಲ. 1835ರಲ್ಲಿ ಮೈಸೂರಿನಲ್ಲಿ ...ಗೆಯೊಂದಕ್ಕೆ ಪ್ರಯತ್ನಿಸುತ್ತಾನೆ. ಅದು ಫಲಿಸುವ ...ದಲೇ ಬ್ರಿಟಿಷರಿಗೆ ಸೆರೆ ಸಿಕ್ಕುತ್ತಾನೆ. ಆದರೂ ಮುಂದೆ ...ತನ ಇಚ್ಛೆಯಂತೆ ಕಲ್ಯಾಣ ಸ್ವಾಮಿ ಎಂಬಾತನ ...ಮುಖತ್ವದಲ್ಲಿ ನಡೆದ ದಂಗೆಯ ಪಿತೂರಿಯಲ್ಲಿ ಮೈಸೂರಿನ ...ಹಾದಾಜರ ಸಂಬಂಧಿ ಅರಮರ ಬಸಪ್ಪಾಜಿ ಅರಸ ...ತ್ತು ಕೊಡಗಿನ ದಿವಾನ ಚೆಪ್ಪುಡೀರ ಪೊನ್ನಪ್ಪ ...ಗಿಯಾಗಿದ್ದ ಬಗ್ಗೆ 'ಅಷ್ಟಗ್ರಾಮ ಪಿತೂರಿ'ಯ ವಿಚಾರಣಾ ...ತದಲ್ಲಿ ದಾಖಲೆಗಳಿವೆ. ಇವರಿಬ್ಬರು ಶಿಕ್ಷೆಯಿಂದ ...ಪ್ಪಿಸಿಕೊಂಡರೂ ಕಲ್ಯಾಣಸ್ವಾಮಿಯನ್ನು ಮರಣದಂಡನೆಗೆ ...ಗುಪಡಿಸಲಾಗುತ್ತದೆ. ಸೆರೆಮನೆ ವಾಸಕ್ಕೆ ಈಡಾದ ಸ್ವಾಮಿ ...ಪರಂಪಾರನಿಗೆ ದೇಶದ ಎಲ್ಲೆಡೆಯಲ್ಲೂ ಏಕಕಾಲಕ್ಕೆ ...ಹೋರಾಟವನ್ನು ಹುಟ್ಟು ಹಾಕುವುದು ಸಾಧ್ಯವಾಗುವುದಿಲ್ಲ. ...ದರೂ ಹತಾಶನಾಗುವುದಿಲ್ಲ. 1837ರಲ್ಲಿ ...ತಿರುಚಿರಾಪಳ್ಳಿಯ ಸೆರೆಮನೆಯೊಳಗಿದ್ದೇ ಕೊಡಗು-ಕೆನರಾ ...ಹೋರಾಟವನ್ನು ಆಯೋಜಿಸುತ್ತಾನೆ. ಸುಳ್ಯದ ಕೆದಂಬಾಡಿ ...ರಾಮಯ್ಯ ಗೌಡ, ಅರಕಲಗೂಡಿನ ಹುಲಿಕಡಿದ ನಂಜಯ್ಯ, ...ಸುಬ್ರಹ್ಮಣ್ಯದ ಕೂಜುಗೋಡು ಕಟ್ಟೆಮನೆ ಮಲ್ಲಪ್ಪ, ...ಚಿಕೇರಿಯ ಕೂಜುಗೋಡು ಕುಂಬಗೌಡ, ಕುಂಬ್ಳೆಯ ...ಚೆಂಜಿ ಸುಬ್ರಾಯ, ಮಾಸ್ತದ ರಂಗಪ್ಪ ಮೊದಲಾದ ...ಸ್ವಾತಂತ್ರ್ಯಾಕಾಂಕ್ಷಿಗಳು ಸ್ವಾಮಿ ಅಪರಂಪಾರನೊಂದಿಗೆ ನಿರಂತರ ...ಸಂಪರ್ಕದಲ್ಲಿರುತ್ತಾರೆ. ಕೊನೆಗೆ 1837ರ ಮಾರ್ಚ್ ಅಂತ್ಯದ ...ವೇಳೆಗೆ ಅಮರಸುಳ್ಯದ ಹೆಮ್ಮನೆ ಪುಟ್ಟಬಸಪ್ಪನ ಹೆಸರಲ್ಲಿ ...ತ್ತು ಕೆದಂಬಾಡಿ ರಾಮಯ್ಯ ಗೌಡನ ನೇತೃತ್ವದಲ್ಲಿ ...ಪ್ರಾರಂಭಗೊಂಡ ಹೋರಾಟದಲ್ಲಿ ಸುಳ್ಯ, ಪುತ್ತೂರು, ...ಬೆಳ್ಳಾರೆ, ಸುಬ್ರಹ್ಮಣ್ಯ, ಬಿಸಿಲೆ, ಕಾಸರಗೋಡು, ಕುಂಬ್ಳೆ, ಮಂಜೇಶ್ವರ, ಪಾಣೆ ಮಂಗಳೂರು, ನಂದಾವರ, ಮಂಗಳೂರು ಪ್ರದೇಶಗಳು ವಶವಾಗುತ್ತವೆ. ಕೊನೆಗೆ ಸುಸಜ್ಜಿತ ಬ್ರಿಟಿಷ್ ಸೈನ್ಯಕ್ಕೆ ಸೋಲೊಪ್ಪಿಕೊಂಡ ಈ ಬಂಡಾಯದಲ್ಲಿ ಹೆಮ್ಮನೆಯ ಪುಟ್ಟಬಸಪ್ಪ (ಕಲ್ಯಾಣಪ್ಪ), ನಂದಾವರದ ಲಕ್ಷ್ಮಪ್ಪ ಬಂಗರಸ, ಉಪ್ಪಿನಂಗಡಿಯ ಮಂಜ ಮತ್ತು ಕೊಡಗು ಬಲಮುರಿಯ ಗುಡ್ಡೆಮನೆ ಅಪ್ಪಯ್ಯ ಗೌಡ ಮರಣದಂಡನೆಗೆ ಈಡಾಗುತ್ತಾರೆ. 1837ರ ಹೋರಾಟಕ್ಕೆ ಸಂಬಂಧಿಸಿದಂತೆ ಒಟ್ಟು 1115 ಜನರನ್ನು ಬಂಧಿಸಲಾಗಿತ್ತು. ಅವರಲ್ಲಿ 484 ಮಂದಿಯನ್ನು ವಿಚಾರಣೆ ನಡೆಸದೆ ಬಿಡುಗಡೆಗೊಳಿಸುತ್ತಾರೆ. 11 ಜನರನ್ನು ಮುಚ್ಚಳಿಕೆ ಮೇಲೆ ಬಿಟ್ಟಿದ್ದಾರೆ. 12 ಮಂದಿಯನ್ನು ಕೋರ್ಟ್ ಮಾರ್ಷಲ್‌ಗೆ ಒಳಪಡಿಸಲಾಯಿತು. ವಿಶೇಷ ಆಯೋಗದ ಮುಂದೆ 54 ಕೇಸು ನಡೆದಿತ್ತು; ಅಲ್ಲಿ ಒಟ್ಟು 416 ಜನರ ವಿಚಾರಣೆ ನಡೆಸಲಾಗಿತ್ತು. 133 ಜನರ ವಿಚಾರಣೆಯನ್ನು ಕ್ರಿಮಿನಲ್ ನ್ಯಾಯಾಲಯದಲ್ಲಿ ಜರಗಿಸಲಾಯಿತು. 35 ವಿಚಾರಣಾಧೀನ ಕೈದಿಗಳು ಸೆರೆಮನೆ ವಾಸದಲ್ಲಿದ್ದಾಗ ಸತ್ತಿದ್ದಾರೆ. ಕೆದಂಬಾಡಿ ರಾಮಯ್ಯ ಗೌಡ, ಚೆಟ್ಟಿಕುಡಿಯ, ಕುಕ್ಕುನೂರು ಚೆನ್ನಯ್ಯ, ಕೂಜುಗೋಡು ಮಲ್ಲಪ್ಪ ಗೌಡ, ಬೀರಣ್ಣ ಬಂಟ, ಕಾರ್ಯಕಾರ ಸುಬೇದಾರ್ ಕೃಷ್ಣಯ್ಯ, ಗುಡ್ಡೆಮನೆ ತಮ್ಮಯ್ಯ ಮೊದಲಾದವರನ್ನು ಸಿಂಗಾಪುರ, ಬರ್ಮಾ ಮುಂತಾದ ಸಮುದ್ರದಾಚೆಗಿನ ಊರುಗಳಿಗೆ ಸಾಗಹಾಕಿ ಜೀವನದುದ್ದಕ್ಕೂ ಕೈಕಾಲುಗಳಿಗೆ ಕೋಳ ಮತ್ತು ಸಂಕೋಲೆ ತೊಡಿಸಿ ರಸ್ತೆ ನಿರ್ಮಾಣದಂಥ ದೈಹಿಕಶ್ರಮದ ಸಾರ್ವಜನಿಕ ಸೇವೆಗಳಿಗೆ ಬಳಸಿಕೊಂಡಿದ್ದಾರೆ. ಉಳುವಾರು ಕೃಷ್ಣ ಗೌಡಳ್ಳಿ ಸುಬ್ಬಪ್ಪ, ಕುಕ್ಕೆಟ್ಟಿ ಸುಬ್ಬ ಶೇಕ್, ದೇರಾಜೆ ಬಚ್ಚ ಪಟೇಲ, ನೆಡುಂಪಳ್ಳಿ ದೇವಪ್ಪ ರೈ, ಗುಂಡಾಲ್ ಸುಬ್ಬಪ್ಪ ಮತ್ತು ಕೆಲವರಿಗೆ ಜೀವಾವಧಿ ಶಿಕ್ಷೆ ನೀಡಲಾಗಿದ್ದರೆ ಇನ್ನು ಹಲವು ಮಂದಿಗೆ 14 ವರ್ಷ, 10 ವರ್ಷ ಮತ್ತು 7 ವರ್ಷಗಳ ಕಾರಾಗೃಹ ಶಿಕ್ಷೆಯನ್ನು ವಿಧಿಸಿದ್ದಾರೆ. ಮಾಸ್ತದ ರಂಗಪ್ಪ ರಣರಂಗದಲ್ಲಿ ಮೃತ ಪಟ್ಟರೆ, ಚೆರಂಜಿ ಸುಬ್ರಾಯ ಗಾಯಾಳುವಾಗಿ ಸೆರೆ ಸಿಕ್ಕಾತ ಜೈಲಿನಲ್ಲಿ ಸಾವನ್ನಪ್ಪುತ್ತಾನೆ. ಸ್ವಾಮಿ ಅಪರಂಪಾರನ ಜೀವದ ಗೆಳೆಯನಂತಿದ್ದ ಪುಹಾನ್ ಸಂಚುಕೋರ ಹುಲಿಕಡಿದ ನಂಜಯ್ಯನ ಬಗ್ಗೆ ಯಾವುದೇ ಸುಳಿವು ಸಿಕ್ಕುವುದಿಲ್ಲ. 1837ರ ಹೋರಾಟದ ಕುರಿತಾದ ಬಹುತೇಕ ಕೇಸುಗಳು ಮಂಗಳೂರಿನಲ್ಲಿ ನಡೆದವು. ಇಬ್ಬರನ್ನು ಮಡಿಕೇರಿಯಲ್ಲಿ ವಿಚಾರಣೆಗೆ ಒಳಪಡಿಸಲಾಯಿತು. ಸ್ವಾಮಿ ಅಪರಂಪಾರನ ಕೇಸು ಮೈಸೂರಿನಲ್ಲಿ ನಡೆಯಿತು. ಆತನಿಗೆ 14 ವರ್ಷದ ಸೆರೆಮನೆವಾಸದ ಶಿಕ್ಷೆ ವಿಧಿಸಲಾಯಿತು. ಆದರೆ 1835ರಲ್ಲಿ ಸೆರೆ ಹಿಡಿದಿದ್ದ ಈತನನ್ನು ಬ್ರಿಟಿಷರು ಸುದೀರ್ಘಕಾಲ ಬಂಧಿಸಿಟ್ಟು ಕೊನೆಗೆ 1869ರಲ್ಲಿ ಬಿಡುಗಡೆಗೊಳಿಸುತ್ತಾರೆ. 1837ರ ಅಷ್ಟಗ್ರಾಮ ಒಳಸಂಚಿನ ಸಮಯದಲ್ಲಿ ಮತ್ತು 1837ರ ಸಮರದ ಹೊತ್ತಲ್ಲಿ ಈತ ಬಂಧನದಲ್ಲಿ ಇದ್ದ ಕಾರಣ ಮರಣದಂಡನೆಯ ಶಿಕ್ಷೆಯನ್ನು ತಪ್ಪಿಸಿಕೊಂಡಿದ್ದ. ಒಟ್ಟು 34 ವರ್ಷಗಳ ಕಾಲ ಸ್ವಾಮಿ ಅಪರಂಪಾರ ಸೆರೆಮನೆಯಲ್ಲಿ ಕಳೆಯುತ್ತಾನೆ. 1837ರ ಹೋರಾಟದ ಒಳಸಂಚಿನ ಆರೋಪಕ್ಕೆ 14 ವರ್ಷ ಸೆರೆವಾಸದ ಶಿಕ್ಷೆಗೆ ಒಳಗಾಗಿದ್ದರೂ ಆಂಗ್ಲರು ಈತನ ಬಿಡುಗಡೆ ಮಾಡಲಿಲ್ಲ. ಈ ನಡುವೆ ಈಸ್ಟ್ ಇಂಡಿಯಾ ಕಂಪೆನಿಯ ಬದಲು ಇಡೀ ಭಾರತ ದೇಶ ಇಂಗ್ಲೆಂಡಿನ ರಾಣಿಯ ಅಧೀನಕ್ಕೆ ಬಂದಿದ್ದರೂ ಈತನಿಗೆ ಬಿಡುಗಡೆಯ ಭಾಗ್ಯ ಒದಗಿ ಬರಲಿಲ್ಲ. ವಸಾಹತುಶಾಹಿಗಳಿಗೆ ಈತನ ಬಗೆಗಿದ್ದ ಭಯ ಇದರಿಂದ ಸ್ಪಷ್ಟವಾಗುತ್ತದೆ.

ಜೈಲುವಾಸದ ಕೊನೆಕೊನೆಗೆ ಸ್ವಾಮಿ ಅಪರಂಪಾರನಿಗೆ ಕುರುಡುತನ ಆವರಿಸಿತ್ತು. 1869ರಲ್ಲಿ ಸೆರೆಮನೆಯಿಂದ ಹೊರಜಗತ್ತಿಗೆ ಬಂದ ಆತ ಕೊಡಗಿಗೆ ಹೋಗಲು ಬಯಸಿದ್ದ ಎನ್ನಿಸುತ್ತದೆ. ತನ್ನ ಬದುಕಿನ ಕನಸುಗಳನ್ನು ಸಾಕಾರಗೊಳಿಸಲು ಸಾಧ್ಯವಾಗದಿದ್ದರೂ ಕನಿಷ್ಠ ಒಂದು ಗಟ್ಟಿ ಹೋರಾಟವನ್ನಂತೂ ಆತ ಅಲ್ಲಿ ಹುಟ್ಟುಹಾಕಿದ್ದ. 1871ರಲ್ಲಿ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ಸ್ವಾಮಿ ಅಪರಂಪಾರ ನೀರಿನ ಸೆಳೆತಕ್ಕೆ ಬಲಿಯಾದ.

ಟಿಪ್ಪು ಸುಲ್ತಾನನ ಆಪ್ತನಾಗಿದ್ದ ಕರ್ನಾಟಕದ ಇನ್ನೊಬ್ಬ ಬಹುದೊಡ್ಡ ಹೋರಾಟಗಾರನಾದ ಧೋಂಡಿಯಾವಾಘ್ ಟಿಪ್ಪುವಿನ ಮರಣದ ನಂತರ 1799-1800ರ ಸಮಯದಲ್ಲಿ ಫ್ರೆಂಚರನ್ನು, ಪೋರ್ಚುಗೀಸರನ್ನು, ಸಿಂಧಿಯಾಗಳನ್ನು, ರೈತರುಗಳನ್ನು ಒಂದೆಡೆ ಸೇರಿಸಿದ ಐಕ್ಯರಂಗವೊಂದನ್ನು ರಚಿಸುವ ಪ್ರಯತ್ನವನ್ನು ನಡೆಸಿದ್ದ. ನಂತರದ ದಿನಗಳಲ್ಲಿ ಸ್ವಾಮಿ ಅಪರಂಪಾರ ಅಖಂಡ ಭಾರತದಲ್ಲಿ ಶಿಸ್ತುಬದ್ಧ ಒಕ್ಕೂಟದ ರಚನೆಯನ್ನು ನಡೆಸಿ ನಂತರ ಒಂದು ಅಸ್ಫೋಟಕ ಹೋರಾಟ ನಡೆಸುವ ಕನಸು ಕಂಡಾತ. ಈ ಎಲ್ಲ ಪ್ರತಿರೋಧಗಳ ಹಿನ್ನೆಲೆಯಲ್ಲಿ ಟಿಪ್ಪುವಿನ ಆಲೋಚನೆಯ ಮತ್ತು ಕಾರ್ಯವಿಧಾನದ ಎಳೆಗಳು ಗಾಢ ಪ್ರಭಾವವನ್ನು ಬೀರಿದೆ. ಈ ಕಾಲಘಟ್ಟದಲ್ಲಿ ಭಾರತ ದೇಶ ಎಂಬ ಕಲ್ಪನೆ ಇರಲಿಲ್ಲ ಎನ್ನಲಾಗಿದೆ. ಆದರೆ ಟಿಪ್ಪು ಸ್ವಾಮಿ ಅಪರಂಪಾರ ತರಹದ ಜನರ ತಿಳಿವಳಿಕೆ ಜನಸಾಮಾನ್ಯರಿಗಿಂತ ಭಿನ್ನವಾಗಿತ್ತು ಎನ್ನುವುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಅವರುಗಳಿಗೆ ವಿಶ್ವದ ಪರಿಕಲ್ಪನೆ ಸ್ಪಷ್ಟವಾಗಿಯೇ ಇತ್ತು. ಇದಿಲ್ಲದಿದ್ದರೆ ಟಿಪ್ಪುವಿಗೆ, ಚೀನಾದೊಂದಿಗೆ, ಪರ್ಶಿಯಾದೊಂದಿಗೆ, ಫ್ರೆಂಚರೊಂದಿಗೆ ರಾಜತಾಂತ್ರಿಕ ಸಂಬಂಧ ಇಟ್ಟುಕೊಳ್ಳುವುದು ಸಾಧ್ಯವಿರಲಿಲ್ಲ. ಯುರೋಪ್ ತರಹ ಹೊರಪ್ರಾಂತ್ಯದಿಂದ ಬಂದ ಜನರು ಇಲ್ಲಿನವರಿಗಿಂತ ಭಿನ್ನವಾಗಿ ಕಾಣುವುದು ಸಹಜವೇ ಆಗಿತ್ತು. ಅಂತಹ ಪರಕೀಯರ ವಿರುದ್ಧ ನಡೆಸಲಾದ ಹೋರಾಟ ವಿಶಾಲ ಅರ್ಥದಲ್ಲಿ ಸ್ವಾತಂತ್ರ್ಯ ಹೋರಾಟವೇ ಆಗಿತ್ತು. ಸ್ವಾಮಿ ಅಪರಂಪಾರನ ಉದ್ದೇಶಿತ ಒಕ್ಕೂಟದಲ್ಲಿ ಸಮಗ್ರ ಭಾರತದ ಬಗ್ಗೆ ಇನ್ನಷ್ಟು ಸ್ಪಷ್ಟತೆಯಿದೆ. 1835ರ ಅಷ್ಟಗ್ರಾಮ ಒಳಸಂಚಿನ ನಂತರ ಈತನನ್ನು ವಿಚಾರಣೆಗೆ ಒಳಪಡಿಸುತ್ತಾರೆ. ಆಗ ಸ್ವಾಮಿ ಅಪರಂಪಾರ ನೀಡಿದ ಹೇಳಿಕೆ ರೋಚಕವಾದುದಾಗಿದೆ. ಆತನಿಗೆ ನಿನ್ನ ಹುಟ್ಟೂರು ಯಾವುದೆಂದು ಕೇಳಲಾಗುತ್ತದೆ. ಅದಕ್ಕೆ ಸ್ವಾಮಿ ಅಪರಂಪಾರ "ಹಿಂದೂಸ್ತಾನ" ಎಂಬ ಉತ್ತರ ನೀಡುತ್ತಾನೆ. ಅವನಿಗೆ ಇಡೀ ಭಾರತ ದೇಶದ ಬಗ್ಗೆ ಖಚಿತ ತಿಳಿವಳಿಕೆ ಇತ್ತು ಎನ್ನುವುದು ಇದರಿಂದ ಅರಿವಾಗುತ್ತದೆ. (ಈ ಹಿಂದೂಸ್ಥಾನ ಎಂದರೆ ನಮ್ಮ ಚೆಡ್ಡಿಗಳು ಹಿಂದೂಗಳ ದೇಶ ಎಂದು ವ್ಯಾಖ್ಯಾನಿಸಬಹುದೆಂಬ ಭಯ ನನ್ನದು).

ಅಖಂಡ ಭಾರತ ಪರಿಕಲ್ಪನೆಯ ಭಾರತದ ಪ್ರಥಮ ಸಮರ ಸಂಘಟಕ ಸ್ವಾಮಿ ಅಪರಂಪಾರ ಎಂಬ ಹೆಸರಿನ ಚಿತ್ರದುರ್ಗದ ಕತ್ರಪ್ಪ ಬಾವು ಎಂಬ ಧೀರ. ಮತೀಯ ಸಾಮರಸ್ಯವನ್ನು ರಾಡಿಗೊಳಿಸುವ ದುರುದ್ದೇಶದಿಂದ ದುರ್ಗದ ಇತಿಹಾಸವನ್ನು ವಿಕೃತಗೊಳಿಸಲು ಬತ್ತಲೆ ತಿಮ್ಮ ಎನ್ನುವ 'ವೆಸ್ಟರ್ನ್ ಘಾಟ್ ಪುಸ್ಸಿ ಕ್ಯಾಟ್' ಪ್ರಯತ್ನಿಸುತ್ತಿರುವ ಈ ಹೊತ್ತಲ್ಲಿ ಧೀಮಂತ ಹೋರಾಟಗಾರ ಸ್ವಾಮಿ ಅಪರಂಪಾರನನ್ನು ನೆನಪಿಸುವುದು ನಮ್ಮೆಲ್ಲರ ಕರ್ತವ್ಯ. ವಿ.ಡಿ.ಸಾವರ್ಕರ್ ತರಹ ಈತ ಬ್ರಿಟಿಷರ ಕ್ಷಮೆ ಯಾಚಿಸಿದ್ದರೆ 34 ವರ್ಷಗಳ ಕಾಲ ಬ್ರಿಟಿಷರ ಸೆರೆಮನೆಯಲ್ಲಿ ಕೊಳೆಯಬೇಕಾಗಿರಲಿಲ್ಲ. ಆದರೆ ಅದಮ್ಯ ಆತ್ಮಾಭಿಮಾನ ಮತ್ತು ಆಂಗ್ಲರ ವಿರುದ್ಧವಿದ್ದ ದ್ವೇಷಾಕ್ರೋಶಗಳು ಆತನನ್ನು ಎಂದೂ ತಲೆತಗ್ಗಿಸಲು ಬಿಡಲಿಲ್ಲ. ತನ್ನ ಬದುಕಿನುದ್ದಕ್ಕೂ ಸ್ವಾಮಿ ಅಪರಂಪಾರ ಸ್ವತಂತ್ರ ಭಾರತ ದೇಶದ ಕನಸನ್ನು ಕಂಡ. ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮಾತ್ರ ಈತನಿಗೆ ಸಿಗಬೇಕಾಗಿದ್ದ ಮನ್ನಣೆ ಸಿಕ್ಕಿಲ್ಲ.

■ ಕೆ.ಆರ್. ವಿದ್ಯಾಧರ, ಮುಡಿಕೇರಿ

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 23-11-2016 RNI No. KARKAN2005



ಡಿಸೆಂಬರ್‌ನಲ್ಲಿ ಚಕ್ರವರ್ತಿ?

ದರ್ಶನ್ ನಟನೆಯ 'ಚಕ್ರವರ್ತಿ' ಸಿನಿಮಾದ ಬಹುತೇಕ ಶೂಟಿಂಗ್ ಮುಗಿದಿದೆ. ಸದ್ಯ ಸಂಕಲನ ಕೆಲಸದಲ್ಲಿ ತೊಡಗಿದ್ದಾರೆ ನಿರ್ದೇಶಕ ಚಿಂತನ್. ಮೊನ್ನೆಯಷ್ಟೇ ಬ್ಯಾಂಕಾಕ್‌ನಿಂದ ಬಂದಿರುವ ದರ್ಶನ್ ಕೂಡ ಡಬ್ಬಿಂಗ್ ಕಾರ್ಯ ಮಾಡಬೇಕಿದೆ. ಆದರೂ, ಡಿಸೆಂಬರ್‌ನಲ್ಲಿ ಸಿನಿಮಾ ಬರಲಿದೆ ಅನ್ನುವ ಗುಮ್ಮ ಸ್ಯಾಂಡಲ್‌ವುಡ್‌ನಲ್ಲಿದೆ. ಡಿಸೆಂಬರ್‌ನಲ್ಲಿ ಈ ಸಿನಿಮಾ ಬರಲಿರುವ ಕಾರಣ, ಸಣ್ಣ ಬಜೆಟ್‌ನ ಚಿತ್ರಗಳನ್ನು ನವೆಂಬರ್‌ನಲ್ಲೇ ರಿಲೀಸ್ ಮಾಡುವ ಪ್ಲಾನ್ ಮಾಡಿದ್ದಾರೆ ಆಯಾ ನಿರ್ಮಾಪಕರು. ಡಿಸೆಂಬರ್‌ನಲ್ಲಿ 'ಚಕ್ರವರ್ತಿ' ತೆರೆಕಂಡರೆ, ನಂತರ ಸುದೀಪ್ ಅವರ 'ಹೆಬ್ಬುಲಿ', ಪುನೀತ್ ರಾಜ್‌ಕುಮಾರ್‌ರ 'ರಾಜಕುಮಾರ', ಗಣೇಶ್ ಅವರ 'ಪಟಾಕಿ' ಹೀಗೆ ಅನೇಕ ಸ್ಟಾರ್ ನಟರ ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿವೆ. ಉಳಿದ ನಟರ ಚಿತ್ರಗಳಿಗೆ ಥಿಯೇಟರ್ ಸಿಗುವುದಿಲ್ಲ ಅನ್ನುವ ಆತಂಕ ಕೂಡ ಎದುರಾಗಿದೆ. ಹಾಗಾಗಿ ವಾರಕ್ಕೆ ಮೂರು ಸಿನಿಮಾ ರಿಲೀಸ್ ಮಾಡುವ ಕೆಟ್ಟ ಪರಿಸ್ಥಿತಿ ಸ್ಯಾಂಡಲ್‌ವುಡ್‌ನಲ್ಲಿ ನಿರ್ಮಾಣವಾಗಿದೆ.

'ಚಕ್ರವರ್ತಿ' ರಿಲೀಸ್ ಬಗ್ಗೆ ಸಿನಿಮಾ ತಂಡ ಅಧಿಕೃತವಾಗಿ ಏನೂ ಹೇಳದೇ ಇದ್ದರೂ, ಚರ್ಚೆ ಮಾತ್ರ ಜೋರಾಗಿದೆ. ಇದೇ ತಿಂಗಳು ಆಡಿಯೋ ರಿಲೀಸ್ ಮಾಡಿ, ಡಿಸೆಂಬರ್ ಎರಡನೇ ವಾರದಲ್ಲಿ ಚಿತ್ರ ಬಿಡುಗಡೆ ಮಾಡಲಿದ್ದಾರೆ ಅನ್ನುವುದು ಸದ್ಯಕ್ಕಿರುವ ಮಾಹಿತಿ. ಇದನ್ನು ನಿರ್ಮಾಪಕರು ದೃಢಪಡಿಸಬೇಕಿದೆ.




ಚಂದ್ರು ನಿರ್ದೇಶನದ ಹೊಸ ಚಿತ್ರ

ನಿರ್ದೇಶಕ ಆರ್.ಚಂದ್ರು ಅವರ ಮುಂದಿನ ಸಿನಿಮಾ ಯಾವುದು ಎಂಬ ಕುತೂಹಲಕ್ಕೆ ತೆರೆ ಬಿದ್ದಿದೆ. ಸದ್ಯ ದುನಿಯಾ ವಿಜಯ್ ನಟನೆಯ ಹೊಸ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲು ಚಂದ್ರು ನಿರ್ಧರಿಸಿದ್ದಾರೆ. ನ.9ರಿಂದ ಹೊಸ ಚಿತ್ರಕ್ಕೆ ಚಾಲನೆ ಸಿಗಲಿದ್ದು, ಸಿನಿಮಾಗೆ 'ಕನಕ' ಎಂದು ಹೆಸರಿಡಲಾಗಿದೆ.

ಸಿನಿಮಾದ ಕತೆಯೇ ವಿಭಿನ್ನವಾಗಿದೆಯಂತೆ. ಕಥಾನಾಯಕ ಆಟೋ ಡ್ರೈವರ್. ಅಲ್ಲದೇ ಡಾ.ರಾಜ್‌ಕುಮಾರ್ ಅಭಿಮಾನಿ ಕೂಡ. ಅಣ್ಣಾವ್ರ ಸಿನಿಮಾಗಳ ಪ್ರೇರಣೆಯಿಂದಾಗಿ ಆತನ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತವೆ. ಡಾ.ರಾಜ್ ಸಿನಿಮಾಗಳ ಸಾರ ಮತ್ತು ಆಟೋ ಡ್ರೈವರ್ ಬದುಕಿನ ಸುತ್ತ ಹೆಣೆದ ಸುಂದರ ಕತೆ ಇಲ್ಲಿದೆ.

"ಪ್ರತಿ ಬಾರಿಯೂ ಹೊಸದನ್ನೇ ಯೋಚಿಸುತ್ತೇನೆ. ಈವರೆಗಿನ ನನ್ನ ಚಿತ್ರಗಳಿಗಿಂತ 'ಕನಕ' ಚಿತ್ರದ ಸ್ಟೋರಿ ವಿಭಿನ್ನವಾಗಿದೆ. ಕನಕ ಅಂದರೆ ಬಂಗಾರವೂ ಆಗುತ್ತದೆ, ಕನಕದಾಸರೂ ನೆನಪಾಗುತ್ತಾರೆ. ಈ ಎರಡರ ನಡುವಿನ ವಿಭಿನ್ನ ಸ್ಟೋರಿ ಇಲ್ಲಿರಲಿದೆ" ಅಂತಾರೆ ಚಂದ್ರು.

ರಾಮಾಚಾರಿ ಮದ್ವೆ ತಯಾರಿ



ಮಾಧ್ಯಮಗಳ ಜತೆ ಯಶ್ ಸಮರಕ್ಕಿಳಿದಿದ್ದರೆ, ಮದುವೆ ತಯಾರಿಯಲ್ಲಿ ಬಿಜಿ ಆಗಿದ್ದಾರೆ ರಾಧಿಕಾ ಪಂಡಿತ್. ಮಾಧ್ಯಮಗಳ ಜತೆಗಿನ ಜಟಾಪಟಿಯಿಂದಾಗಿ ಮದುವೆ ದಿನಾಂಕ ಮುಂದೂಡುವ ಆತಂಕ ಆಯಾ ಕುಟುಂಬದ್ದು. ಆದರೆ, ಡಿ.10 ಮತ್ತು 11ರಂದು ಮದುವೆ ನಡೆಯುತ್ತದೆ ಅನ್ನುವ ವಿಶ್ವಾಸ ರಾಧಿಕಾ ಅವರದ್ದು. ಯಶ್ ಅವರ ಆಪ್ತರು ಮತ್ತು ನಿರ್ಮಾಪಕರು ಒಟ್ಟಾಗಿ ಮಾಧ್ಯಮಗಳ ಜತೆಗಿನ ಸಮರಕ್ಕೆ ನಾಂದಿ ಹಾಡಲು ಯಶ್‌ಗೆ ಸೂಚಿಸಿದ್ದಾರಂತೆ.

ಗೋವಾದಲ್ಲಿ ಈ ಜೋಡಿ ನಿಶ್ಚಿತಾರ್ಥ ಮಾಡಿಕೊಂಡಿದ್ದರಿಂದ ಅಭಿಮಾನಿಗಳಿಗೆ ಸಹಜವಾಗಿಯೇ ಬೇಸರವಾಗಿತ್ತು. ಆ ಬೇಸರವನ್ನು ನಿವಾರಿಸಲೆಂದೇ ಅದ್ಧೂರಿಯಾಗಿ ಮದುವೆ ಆಗುವ ಮಾತುಗಳನ್ನೂ ಯಶ್ ಆಡಿದ್ದರು. ಅಲ್ಲದೇ ಅಭಿಮಾನಿಗಳಿಗೂ ಆಹ್ವಾನ ಇರಲಿದೆ ಎಂದೂ ಸಮಾಧಾನ ಹೇಳಿದ್ದರು. ಈ ಮಾತನ್ನು ಉಳಿಸಿಕೊಳ್ಳಲು ಯಶ್ ಮತ್ತು ರಾಧಿಕಾ ಈಗಿನಿಂದಲೇ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಮದುವೆಗಾಗಿ ಅರಮನೆ ಮೈದಾನವನ್ನು ಆಯ್ಕೆ ಮಾಡಿಕೊಂಡಿದ್ದು, ಆರತಕ್ಷತೆಯ ವೇಳೆಯಲ್ಲಿ ಅಭಿಮಾನಿಗಳಿಗೆ ಪ್ರವೇಶ ಕಲ್ಪಿಸಲಾಗಿದೆ.

ಕನ್ನಡ ಸಿನಿಮಾ ರಂಗ ಮಾತ್ರವಲ್ಲ, ಟಾಲಿವುಡ್ ಮತ್ತು ಕಾಲಿವುಡ್‌ನ ಹಲವು ನಟನಟಿಯರು ಈ ಮದುವೆ ಸಮಾರಂಭದಲ್ಲಿ ಭಾಗವಹಿಸುತ್ತಿದ್ದು, ವಿಭಿನ್ನ ವಿನ್ಯಾಸದ ವೇದಿಕೆ ಕೂಡ ನಿರ್ಮಾಣವಾಗಲಿದೆ.



ದೆವ್ವ ಎಂಬ ಗಿಮಿಕ್

ಬಿಗ್‌ಬಾಸ್ ಅನ್ನುವುದೇ ಒಂದು ಗಿಮಿಕ್. ಕಂಡಿರುವ ಕಾಣದ ವ್ಯಕ್ತಿತ್ವ ತೋರಿಸುತ್ತೇವೆ ಎನ್ನುವ ಕಾರ್ಯಕ್ರಮದ ಮುಖ್ಯಸ್ಥ... ಜನಪ್ರಿಯತೆಗಾಗಿ ಕೆಲವು ಬಾರಿ ಗಿಮಿಕ್ ಮಾಡುವುದೂ ಇದೆ. ಬಿಗ್‌ಬಾಸ್ 8ರಲ್ಲಿ ಮಾಡಿದ್ದ ಗಿಮಿಕ್ ಅನ್ನು ಈ ಬಾರಿ ಕನ್ನಡದಲ್ಲಿ ... ಬಿಗ್‌ಬಾಸ್ ಕನ್ನಡ ಅವತರಣಿಕೆಯ ನಿರ್ದೇಶಕರು. ಹಾಗಾಗಿ ಕನ್ನ... ದೆವ್ವ ಕಾಣಿಸಿಕೊಂಡಿದೆ. ಅದೂ ಬಿಳಿ ಸೀರೆಯನ್ನುಟ್ಟ ದೆವ್ವ.

ಹಿಂದಿಯ ಬಿಗ್‌ಬಾಸ್ 8ರಲ್ಲಿ ಬಿಗ್‌ಬಾಸ್ ಮನೆಯಲ್ಲಿ ಕರಿಬ... ಕಾಣಿಸಿಕೊಂಡಿತ್ತು, ಅದರಿಂದಾಗಿ ಟಿಆರ್‌ಪಿ ಕೂಡ ಏರಿತ್ತು. ಅದ... ಅನ್ನು ಈಗ ಕನ್ನಡದಲ್ಲಿ ಮಾಡಲಾಗಿದೆ. ಪರಿಣಾಮವಾಗಿ ನಟ... ಮತ್ತು ಸಂಜನಾ ಕಿರುಚಿಕೊಂಡು ಕೆಳಕ್ಕೆ ಬಿದ್ದಿದ್ದಾರೆ. ಮನೆಯ... ಅವರೆಲ್ಲ ಭಯ ಪಡುತ್ತಿದ್ದಾರೆ. ಅಲ್ಲಿಗೆ ಗಿಮಿಕ್ ವರ್ಕ್ ಆಗಿದ... ಜನರಿಗೆ ಮಾತ್ರ ಬಿಗ್‌ಬಾಸ್ ಮನೆಯಲ್ಲಿ ದೆವ್ವ ಇದೆ ಎಂದು ನಂಬ... ಈ ನಂಬಿಕೆಯನ್ನು ಮತ್ತಷ್ಟು ಗಟ್ಟಿಯಾಗಿಸಲು ಕಲರ್ಸ್ ಕನ್ನಡ ... ಬಿಜಿನೆಸ್ ಹೆಡ್ ಪರಮೇಶ್ ಗುಂತ್ಕಲ್ ಮತ್ತೊಂದು ಕಲರ್‌ಫು... ಹೆಣೆದಿದ್ದಾರೆ. ದೆವ್ವವನ್ನು ಹುಡುಕುವುದಕ್ಕಾಗಿಯೇ ಅವರು ಪ್ಲಾ... ಮಾಡಿದ್ದಾರಂತೆ. ಕ್ಯಾಮೆರಾದಲ್ಲಿ ಸೆರೆಯಾದ ಆ ದೆವ್ವ ಇನ್ಯಾವ... ಕಾಣಲಿದೆಯೋ ಕಾದು ನೋಡಬೇಕು.

ಅಪ್ಪನ ಹಾಡಿಗೆ ಮಗನ ಕು...

'ನಾನು ನನ್ನ ಹೆಂಡ್ತಿ' ಅಂದಾಕ್ಷಣ ಥಟ್ಟನೆ ನೆನಪಾಗುವ ಗೀ... ನೀನು ರೋಜಾ ಹೂವೆ' ಸಾಂಗ್. ರವಿಚಂದ್ರನ್ ನಟನೆಯ ಈ ಹಾ... ಮರುಬಳಕೆ ಆಗುತ್ತಿದೆ. ಅದು ರವಿಚಂದ್ರನ್ ಮಗ ಮನೋ... ಸಿನಿಮಾದಲ್ಲಿ. ಸದ್ಯ ಮನೋರಂಜನ್ 'ಸಾಹೇಬ' ಚಿತ್ರದಲ್ಲಿ ನಟಿ... ಭರತ್ ನಿರ್ದೇಶನದ ಈ ಸಿನಿಮಾದಲ್ಲಿ ಹಾಡು ಬಳಕೆ ಆಗುತ್ತಿದೆ...

1985ರಲ್ಲಿ ತೆರೆಕಂಡ 'ನಾನು ನನ್ನ ಹೆಂಡ್ತಿ' ಸಿನಿಮಾದ ... ಜನಪ್ರಿಯವಾಗಿತ್ತು. "ನನ್ನ ಸಿನಿಮಾದಲ್ಲೂ ಈ ಗೀತೆಯನ್ನು ಬಳ... ಸಂದರ್ಭವಿದೆ. ಹಾಗಾಗಿ ಅದೇ ಹಾಡನ್ನು ಮರುಬಳಸಲು ಪ್ಲಾನ್ ಮಾ... ರವಿಚಂದ್ರನ್ ಸಾರ್ ಕೂಡ ಒಪ್ಪಿಗೆ ಸೂಚಿಸಿದ್ದಾರೆ. ಹಾಗಾಗಿ ಸಂಭ್ರ... ಈ ಹಾಡಿನ ಚಿತ್ರೀಕರಣ ಮಾಡುತ್ತಿದ್ದೇವೆ" ಅಂತಾರೆ ನಿರ್ದೇಶಕ...

ಹಾಡಿಗೆ ಮುರಳಿ ಮಾಸ್ಟರ್ ಕೊರಿಯೋಗ್ರಫಿ ಮಾಡುತ್ತಿದ್ದಾರೆ... ಭೋಗೇಂದ್ರ ನಿರ್ಮಾಣದ ಚಿತ್ರವಿದು. "ತಂದೆಯ ಹಾಡಿನಲ್ಲಿ ನಾ... ಆಗುತ್ತಿರುವುದಕ್ಕೆ ಹೆಮ್ಮೆ ಪಡುತ್ತೇನೆ" ಅಂದಿರುವ ಮನೋ... ತಂದೆಯೊಂದಿಗೆ ತಮ್ಮನ್ನು ಹೋಲಿಸದಂತೆ ಮನವಿ ಮಾಡಿಕೊಂ...

ಲಂಕೇಶ್ ಪ್ರಕಾಶನದ ಹೊಸ ಪುಸ್ತಕಗಳು



ಲಂಕೇಶ್ ಬಳಗದ 'ಉದ್ಯೋಗ' ಪಾಕ್ಷಿಕ ಹೊಸ ಸಂಚಿಕೆ ಈಗ ಮಾರುಕಟ್ಟೆಯಲ್ಲಿ ಲಭ್ಯ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com